

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ನವೆಂಬರ್ 24 ಶುಕ್ರವಾರ 2023
ಸಂಪುಟ: 44 | ಸಂಚಿಕೆ: 217 | ಪುಟಗಳು: 12
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.cor..
₹4



ಆದಾಯಕ್ಕೂ ಮೀರಿದ ಆಸ್ತಿ ಗಳಿಕೆ ಪ್ರಕರಣ

ಡಿಸಿಎಂ ಡಿ.ಕೆ.ಶಿವಕುಮಾರ್ ವಿರುದ್ಧದ ತನಿಖೆ ಸಿಬಿಐನಿಂದ ಹಿಂಪಡೆಯಲು ಸಂಪುಟ ತೀರ್ಮಾನ

- ಕಾನೂನು ಮತ್ತು ಸಂಸದೀಯ ಸಚಿವ ಹೆಚ್.ಕೆ.ಪಾಟೀಲ್ ಮಾಹಿತಿ
- ಯಡಿಯೂರಪ್ಪ ಸಿಎಂ ಆಗಿದ್ದಾಗ ಸಿಬಿಐ ತನಿಖೆಗೆ ವಹಿಸಲಾಗಿತ್ತು
- ರಾಜ್ಯ ರಾಜಕಾರಣದಲ್ಲಿ ಮತ್ತೊಂದು ಜಿದ್ದಾಜಿದ್ದಿಗೆ ನಾಂದಿ



ಬೆಂಗಳೂರು, ನ.23–ಈಗಾಗಲೇ ಕೇಂದ್ರೀಯ ತನಿಖಾ ಸಂಸ್ಥೆ (ಸಿಬಿಐ) ತನಿಖೆ ನಡೆಸುತ್ತಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿರುದ್ಧ ಆದಾಯಕ್ಕೂ ಮೀರಿದ ಆಸ್ತಿ ಗಳಿಕೆ ಪ್ರಕರಣದ ವಿಚಾರಣೆಯನ್ನು ಸಿಬಿಐನಿಂದ ಹಿಂದಕ್ಕೆ ಪಡೆಯಲು ರಾಜ್ಯ ಸಚಿವ ಸಂಪುಟ ನಿರ್ಧರಿಸಿದೆ.



ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ವಿಧಾನಸೌಧದಲ್ಲಿ ಗುರುವಾರ ನಡೆದ ಸಂಪುಟ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಹೆಚ್.ಕೆ.ಪಾಟೀಲ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.


ಹಿಂದಿನ ಸರಕಾರದ ಮುಖ್ಯಮಂತ್ರಿಗಳ ಮೌಖಿಕ ಆದೇಶದ ಮೇರೆಗೆ ಪ್ರಕರಣವನ್ನು ಸಿಬಿಐಗೆ ವಹಿಸಲಾಗಿದೆ. ವಿಧಾನಸಭಾಧ್ಯಕ್ಷರ ಅನುಮತಿ ಪಡೆಯುವುದೂ ಸೇರಿದಂತೆ ಕೆಲವೊಂದು ತಾಂತ್ರಿಕ ನಿಯಮಗಳನ್ನು ಪಾಲಿಸಿಲ್ಲ. ಹಿಂದಿನ ಅಡ್ವೊಕೇಟ್ ಜನರಲ್ ಅವರೂ ಕೂಡ ಈ ಪ್ರಕರಣವನ್ನು ಸಿಬಿಐ ತನಿಖೆಗೆ ನೀಡಬೇಕೆಂದು ಅಭಿಪ್ರಾಯ ವ್ಯಕ್ತಪಡಿಸಿದರು. ಹಿಂದಿನ ಅಡ್ವೊಕೇಟ್ ಜನರಲ್ ಹಾಗೂ ಹಾಲಿ ಅಡ್ವೊಕೇಟ್ ಜನರಲ್ ಅಭಿಪ್ರಾಯಗಳ ಆಧಾರದ ಮೇರೆಗೆ ಡಿ.ಕೆ.ಶಿವಕುಮಾರ್ ವಿರುದ್ಧ ಸಿಬಿಐ ತನಿಖೆಗೆ ರಾಜ್ಯ ಸರ್ಕಾರದಿಂದ ನೀಡಿದ್ದ ಆದೇಶವನ್ನು ಹಿಂಪಡೆಯಲಾಗಿದೆ ಎಂದ ಅವರು, ಈ ಸಂಬಂಧ ಹೆಚ್ಚೇನೂ ಮಾಹಿತಿ ನೀಡದೇ ಇನ್ನು ಎರಡ್ಮೂರು ದಿನದಲ್ಲಿ ಸರ್ಕಾರದ ಆದೇಶ ನಿಮಗೆ (ಮಾಧ್ಯಮ) ತಲುಪುತ್ತದೆ ಎಂದಷ್ಟೇ ಹೇಳಿದರು.

> “ಅಕ್ರಮ ಆಸ್ತಿ ಪ್ರಕರಣಕ್ಕೆ ಸಂಬಂಧಿಸಿದಂತೆ ಡಿಸಿಎಂ ಡಿ.ಕೆ.ಶಿವಕುಮಾರ್ ವಿರುದ್ಧದ ಸಿಬಿಐ ತನಿಖೆಯನ್ನು ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ಹಿಂದೆ ಪಡೆದಿರುವುದು ಕಾನೂನು ಬಾಹಿರ ಕ್ರಮ. ಇದನ್ನು ಖಂಡಿಸುತ್ತೇನೆ.
> –ಆರ್.ಅಶೋಕ್, ವಿಧಾನಸಭೆ ವಿಪಕ್ಷ ನಾಯಕ



ಸಂಪುಟ ಸಭೆಯಲ್ಲಿ ಈ ವಿಚಾರವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸುಮಾರು 35 ನಿಮಿಷ ಕಾಲ ಪ್ರತ್ಯೇಕ ಚರ್ಚೆ ನಡೆಸಿದರು. ಈ ಸಭೆಗೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಗೈರು ಹಾಜರಾಗಿದ್ದರು. ಡಿ.ಕೆ.ಶಿವಕುಮಾರ್ ವಿರುದ್ಧದ ಸಿಬಿಐ ತನಿಖೆ ವಾಪಸ್ ಪಡೆದಿರುವ ಈ ಪ್ರಕರಣ ರಾಜಕೀಯ ಜಿದ್ದಾಜಿದ್ದಿಗೆ ವೇದಿಕೆ ಕಲ್ಪಿಸಿದಂತಾಗಿದೆ. ಡಿಸೆಂಬರ್ 4ರಿಂದ ಬೆಳಗಾವಿಯಲ್ಲಿ ನಡೆಯಲಿರುವ ವಿಧಾನ ಮಂಡಲ ಅಧಿವೇಶನಕ್ಕೂ ಮುನ್ನ ರಾಜ್ಯ ಸರ್ಕಾರವೇ ಪ್ರತಿಪಕ್ಷಗಳಿಗೆ ಬ್ರಹ್ಮಾಸ್ತ್ರ ನೀಡಿದಂತಾಗಿದೆ. ●9ನೇ ಪುಟಕ್ಕೆ

22 ಕ್ಯಾರೆಟ್ ಚಿನ್ನದ ದರ @ ತೊಳಸಿ




ಅಶೋಕ ರಸ್ತೆ, ಮೈಸೂರು. ಫೋ: 0821–2521926,
ದೇವಸ್ಥಾನದ ರಸ್ತೆ, ವಿ.ವಿ.ಮೊಹಲ್ಲಾ, ಮೈಸೂರು.
ಫೋ: 0821–2411926
ಎಂಜಿಎಸ್ ರಸ್ತೆ, ಬಸ್‌ಸ್ಟ್ಯಾಂಡ್ ಎದುರು, ನಂಜನಗೂಡು. ಫೋ: 08221–200926

ಭೀಕರ ಬರಗಾಲದಿಂದ ತತ್ತರಿಸಿರುವ ರಾಜ್ಯಕ್ಕೆ ಮತ್ತೆ ಬರ ಸಿಡಿಲು

ತಮಿಳ್ನಾಡಿಗೆ ತಿಂಗಳ ಕಾಲ ನಿತ್ಯ 2700 ಕ್ಯುಸೆಕ್ ನೀರು ಹರಿಸಲು ಸಿಡಬ್ಲ್ಯುಆರ್‌ಸಿ ನಿರ್ದೇಶನ

ಬೆಂಗಳೂರು, ನ.23(ಕೆಎಂಶಿ)– ನೈರುತ್ಯ ಮುಂಗಾರು ಹಾಗೂ ಈಶಾನ್ಯ ಹಿಂಗಾರು ಮಳೆ ಕೈಕೊಟ್ಟು ರಾಜ್ಯದಲ್ಲಿ ತೀವ್ರ ಸ್ವರೂಪದ ಬರ ಪರಿಸ್ಥಿತಿ ಆವರಿಸಿರುವುದರ ನಡುವೆಯು ಕಾವೇರಿ ನೀರು ನಿಯಂತ್ರಣ ಸಮಿತಿ (ಸಿಡಬ್ಲ್ಯುಆರ್‌ಸಿ)ಯು ತಮಿಳುನಾಡಿಗೆ ನೀರು ಬಿಡುವಂತೆ ಶಿಫಾರಸ್ಸು ಮಾಡುವ ಮೂಲಕ ಕರ್ನಾಟಕಕ್ಕೆ ಮತ್ತೊಂದು ಶಾಕ್ ನೀಡಿದೆ.



ಈ ವರ್ಷ ನಡೆದ ಪ್ರತಿ ಸಭೆಯಲ್ಲೂ ತಮಿಳುನಾಡಿಗೆ ಮತ್ತೆ ನೀರು ಬಿಡುವಂತೆ ಶಿಫಾರಸ್ಸು ಮಾಡುತ್ತಾ ಬಂದಿರುವ ಸಿಡಬ್ಲ್ಯುಆರ್‌ಸಿಯು ಇಂದು ನಡೆದ ಸಭೆಯಲ್ಲೂ ಅದನ್ನೇ ಮಾಡಿದೆ.


ಕಾವೇರಿ ನದಿಯಿಂದ ತಮಿಳುನಾಡಿಗೆ ನವೆಂಬರ್ 23ರಿಂದ ಡಿಸೆಂಬರ್ 23ರವರೆಗೆ ಪ್ರತಿ ದಿನ 2700 ಕ್ಯುಸೆಕ್ ನೀರು ಹರಿಸುವಂತೆ ಕಾವೇರಿ ನೀರು ನಿಯಂತ್ರಣ ಸಮಿತಿ ರಾಜ್ಯಕ್ಕೆ ಸೂಚನೆ ನೀಡಿದೆ.

ಡಿಸೆಂಬರ್ ಅವಧಿಯ 6 ಟಿಎಂಸಿ ಹಾಗೂ ಬಾಕಿ 11 ಟಿಎಂಸಿ ನೀರು ಸೇರಿ ಒಟ್ಟು 17 ಟಿಎಂಸಿ ನೀರು ಹರಿಸುವಂತೆ ತಮಿಳುನಾಡು ಬೇಡಿಕೆ ಮುಂದಿಟ್ಟಿದೆ. ಇದಕ್ಕೆ ರಾಜ್ಯದ ಅಧಿಕಾರಿಗಳು ತೀವ್ರ ವಿರೋಧ ವ್ಯಕ್ತಪಡಿಸಿ ಕುಡಿಯಲೇ ನೀರಿಲ್ಲ. ರಾಜ್ಯದಲ್ಲಿ ಭಾರೀ ಬರ ಪರಿಸ್ಥಿತಿ ಇದೆ ಎಂದು ಬಲವಾದ ವಾದ ಮಂಡಿಸಿದ್ದಾರೆ. ಅಲ್ಲದೆ ತಮಿಳ್ನಾಡು ಭಾಗದಲ್ಲಿ ಈಗ ಭಾರಿ ಮಳೆ ಆಗುತ್ತಿದ್ದು, ಅದು ನೀರಿಗೆ ಅನಗತ್ಯವಾಗಿ ಬೇಡಿಕೆ ಸಲ್ಲಿಸುತ್ತಿದೆ ಎಂದು ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ.

ಇಂದು ನಡೆದ ಸಿಡಬ್ಲ್ಯುಆರ್‌ಸಿಯ 90ನೇ ಸಭೆಯಲ್ಲಿ ಈ ಶಿಫಾರಸ್ಸು ಮಾಡಲಾಗಿದೆ ರಾಜ್ಯದಲ್ಲಿ ಈಗ ಮಳೆಯಾಗುತ್ತಿಲ್ಲ. ಮಳೆಗಾಲ ಮುಗಿದು ಚಳಿಗಾಲ ಆರಂಭವಾಗಿರುವುದರಿಂದ ●9ನೇ ಪುಟಕ್ಕೆ

ಕೆಆರ್‌ಎಸ್	
ಗರಿಷ್ಠ ಮಟ್ಟ– 124.80 ಅಡಿ	ಇಂದಿನ ಮಟ್ಟ– 99.10 ಅಡಿ
ಒಳ ಹರಿವು– 1450 ಕ್ಯುಸೆಕ್	ಹೊರ ಹರಿವು– 3840 ಕ್ಯುಸೆಕ್
ಹಾರಂಗಿ	
ಗರಿಷ್ಠ ಮಟ್ಟ– 2859 ಅಡಿ	ಇಂದಿನ ಮಟ್ಟ– 2843.24 ಅಡಿ
ಒಳ ಹರಿವು– 90 ಕ್ಯುಸೆಕ್	ಹೊರ ಹರಿವು– 1000 ಕ್ಯುಸೆಕ್
ಹೇಮಾವತಿ	
ಗರಿಷ್ಠ ಮಟ್ಟ– 117 ಅಡಿ	ಇಂದಿನ ಮಟ್ಟ– 88.4 ಅಡಿ
ಒಳ ಹರಿವು– 404 ಕ್ಯುಸೆಕ್	ಹೊರ ಹರಿವು– 1300 ಕ್ಯುಸೆಕ್
ಕಬಿನಿ	
ಗರಿಷ್ಠ ಮಟ್ಟ– 2284 ಅಡಿ	ಇಂದಿನ ಮಟ್ಟ– 2274 ಅಡಿ
ಒಳ ಹರಿವು– 221 ಕ್ಯುಸೆಕ್	ಹೊರ ಹರಿವು– 700 ಕ್ಯುಸೆಕ್

ಜಾತಿ ಗಣತಿ ವರದಿ ಸರ್ಕಾರದ ಕೈ ಸೇರದೇ ಗೊಂದಲ ಸೃಷ್ಟಿಸುವುದು ಸರಿಯಲ್ಲ



- ಹೋರಾಟಗಾರರು, ವಿವಾದ ಸೃಷ್ಟಿಸುತ್ತಿರುವವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕಿವಿಮಾತು
- ಕಾಂತರಾಜು ವರದಿ ಸ್ವೀಕರಿಸಲು ಸಿದ್ದರಾಮಯ್ಯ ತರಾತುರಿ: ವಿಪಕ್ಷ ನಾಯಕ ಅಶೋಕ್ ಪ್ರತಿಕ್ರಿಯೆ



ಬೆಂಗಳೂರು, ನ.23 (ಕೆಎಂಶಿ)– ಜಾತಿ ಗಣತಿ ವರದಿಯ ವಾಸ್ತವ ಅರಿಯದೆ ಊಹೆಗಳ ಮೇಲೆ ಮಾತನಾಡುವುದು ನಿಲ್ಲಿಸಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಖಾರವಾಗಿ ತಿಳಿಸಿದ್ದಾರೆ.

ವರದಿ ಸರ್ಕಾರದ ಕೈಸೇರಿಲ್ಲ, ಅದಕ್ಕೂ ಮುನ್ನವೇ ಪರ–ವಿರೋಧ ಮಾತನಾಡುವುದು ಒಳ್ಳೆಯ ಬೆಳವಣಿಗೆ ಅಲ್ಲ ಎಂದು ಹೋರಾಟಗಾರರಿಗೆ ಕಿವಿಮಾತು ಹೇಳಿದ್ದಾರೆ. ಮುಖ್ಯಮಂತ್ರಿ ಈ ಹೇಳಿಕೆ ನೀಡುತ್ತಿದ್ದಂತೆಯೇ ಪ್ರತಿಪಕ್ಷದ ನಾಯಕ ಆರ್. ಅಶೋಕ್, ವಿವಾದಿತ ಕಾಂತರಾಜು ವರದಿ ಸ್ವೀಕರಿಸಲು ಸಿದ್ದರಾಮಯ್ಯನವರು ತರಾತುರಿ ತೋರುತ್ತಿರುವುದು ಅನೇಕ ಅನುಮಾನಗಳಿಗೆ ಎಡೆಮಾಡಿದೆ. ವರದಿಯ ಮೂಲ ಪ್ರತಿ ಕಾಣೆಯಾಗಿದೆ ಎಂದು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಜಯಪ್ರಕಾಶ್ ಹೆಗಡೆ ಅವರೇ ಹೇಳಿದ್ದಾರೆ, ಜೊತೆಗೆ ಕಾರ್ಯದರ್ಶಿ ಅವರ ಸಹಿಯೂ ಇಲ್ಲ, ಇದೊಂದು ಅವೈಜ್ಞಾನಿಕ ವರದಿ ಎಂದು ಅನೇಕ ಸಮುದಾಯಗಳು ಆರೋಪಿಸಿವೆ. ಸಂಪುಟದಲ್ಲೇ ಸಹಮತ ಇಲ್ಲ, ಇಂತಹ ಸಂದರ್ಭದಲ್ಲಿ ವಿವಾದಿತ ವರದಿ ಪಡೆಯಲು ಆತುರ ಏಕೆ ಎಂದು ಪ್ರಶ್ನಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸರ್ಕಾರ ಕೋಟಿಗಟ್ಟಲೆ ಹಣ ಖರ್ಚು ಮಾಡಿ ಸಿದ್ಧಪಡಿಸಿದ ವರದಿ ಕಳುವಾಗಲು ಯಾರು ಕಾರಣ, ಅದರ ಹೊಣೆ ಯಾರು ಹೊತ್ತುಕೊಳ್ಳುತ್ತಾರೆ.

ಕಳವು ಪ್ರಕರಣದ ಬಗ್ಗೆ ಏಕೆ ತನಿಖೆ ನಡೆಸಲಿಲ್ಲ, ಮೂಲ ವರದಿ ಕಳುವಾಗಿದ್ದರೂ ಅದರ ದತ್ತಾಂಶ ಇದೆ. ಇದರ ಆಧಾರದ ಮೇಲೆ ಪರಿಷ್ಕೃತ ವರದಿ ಸಿದ್ಧಪಡಿಸುವುದು ಎಷ್ಟು ಸರಿ ಎಂದು ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ಹತ್ತು ವರ್ಷಗಳ ಹಿಂದಿನ ರಾಜ್ಯದ ಜನಸಂಖ್ಯೆಗೂ, ಈಗಿನ ಜನಸಂಖ್ಯೆಗೂ ಸಾಕಷ್ಟು ವ್ಯತ್ಯಾಸ ಇದೆ, ಸಾರ್ವಜನಿಕರಿಂದಲೂ ತಮ್ಮ ಮನೆಗಳಿಗೆ ಸಮೀಕ್ಷೆ ನಡೆಸುವವರು ಬಂದಿರಲಿಲ್ಲ ಎಂಬ ವ್ಯಾಪಕ ದೂರುಗಳೂ ಬಂದಿವೆ.

ಇಷ್ಟೆಲ್ಲಾ ಅವಾಂತರದ ನಡುವೆ ಸಿದ್ಧಪಡಿಸಿರುವ ವರದಿ ಸ್ವೀಕರಿಸಲು ಆತುರವೇಕೆ ಎಂದಿದ್ದಾರೆ. ಇದಕ್ಕೆ ಮುಖ್ಯಮಂತ್ರಿ ಪ್ರತಿಕ್ರಿಯಿಸಿ, ವರದಿ ಸಲ್ಲಿಕೆಯಾದ ನಂತರ ನೋಡೋಣ, ಸುಮ್ಮನೆ ಊಹೆಗಳ ಮೇಲೆ ಮಾತನಾಡುವುದು ಒಳ್ಳೆ ಬೆಳವಣಿಗೆ ಅಲ್ಲ ಎಂದಿದ್ದಾರೆ. ಜಾತಿ ಗಣತಿ ಸಮಾಜವನ್ನು ಒಡೆಯುತ್ತದೆ ಎಂದಿರುವ ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಹೇಳಿಕೆಗೆ ಖಾರವಾಗಿ ಪ್ರತಿಕ್ರಿಯಿಸಿದ ಅವರು, ಅವರಿಗೆ ವರದಿಯಲ್ಲಿ ಏನಿದೆ ಎಂದು ತಿಳಿದಿದೆಯೇ?

ನಮ್ಮದು ಸಮಾಜ ಕಟ್ಟುವ ಕೆಲಸ, ಒಡೆಯುವುದಲ್ಲ. ಬಿಹಾರದಲ್ಲಿ ಆಯೋಗದ ವರದಿ ಸ್ವೀಕರಿಸಿದರೂ ಅಲ್ಲೇನು ಸಮಾಜ ಒಡೆದು ಬಿಟ್ಟಿತೆ ಎಂದು ಪ್ರಶ್ನಿಸಿದ್ದಾರೆ. ಮೂಲ ವರದಿ ಕಳೆದಿದೆ ಎಂದು ಆಯೋಗದ ಅಧ್ಯಕ್ಷ ಜಯಪ್ರಕಾಶ್ ಹೆಗಡೆ ನೀಡಿರುವ ಹೇಳಿಕೆ ಬಗ್ಗೆ ಪ್ರಸ್ತಾಪಿಸಿದ ಮುಖ್ಯಮಂತ್ರಿ ಅವರು, ಅವರನ್ನು ಕರೆದು ಚರ್ಚಿಸುವುದಾಗಿ ತಿಳಿಸಿದರು.

ನಿವೇಶನ ಮಾರಾಟಕ್ಕಿದೆ
RT ನಗರದ 100 ಅಡಿ ರಸ್ತೆಗೆ ಹೊಂದಿರುವಂತಹ ಬಡಾವಣೆಯಲ್ಲಿ 60x40 ಅಳತೆಯ ಉತ್ತರ ದಿಕ್ಕಿನ (ರೆಸಿಡೆನ್ಷಿಯಲ್ / ನಿವೇಶನ ಮಾರಾಟಕ್ಕಿದೆ
ಸಂಪರ್ಕಿಸಿ:
9448322601, 8147434097

DGF JEWELLERS
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಾವೇ ಹಣಕೊಟ್ಟು ಬಿಡಿಸಿ ಉಳಿದ ಹಣ ತಕ್ಷಣ ಕೊಡುತ್ತೇವೆ.
ಒಂದು ಗ್ರಾಂ ಚಿನ್ನಕ್ಕೆ 6600
8884171888

ಬೇಕಾಗಿದ್ದಾರೆ
ಮೈಸೂರಿನ ಹೆಸರಾಂತ ಜ್ಯುಯಲ್ಲರಿ ಸಂಸ್ಥೆಗೆ ಮಹಿಳೆ ಮತ್ತು ಪುರುಷರು ಟೆಲಿಕಾಲರ್ಸ್ ಬೇಕಾಗಿದ್ದಾರೆ.
ಪಿಕ್‌ಅಪ್ ಡ್ರಾಪ್ ಮತ್ತು ಉಳಿದುಕೊಳ್ಳಲು ಸೌಲಭ್ಯವಿರುತ್ತದೆ. ಮೈಸೂರಿನಲ್ಲಿ
ಸಂಬಳ:25,000
8884304444

ಮಾನವ–ವನ್ಯಜೀವಿ ಸಂಘರ್ಷ ತಡೆಗೆ ಮೈಸೂರು ಸೇರಿದಂತೆ 9 ಜಿಲ್ಲೆಗಳಿಗೆ ನೋಡಲ್ ಅಧಿಕಾರಿ ನೇಮಕ

- ವಾರಕ್ಕೆ ಮೂರು ದಿನ ಪ್ರಗತಿ ಪರಿಶೀಲನೆಗೆ ಸೂಚನೆ
- ಸಂತ್ರಸ್ತರಿಗೆ ಸಕಾಲದಲ್ಲಿ ಪರಿಹಾರ ವಿತರಣೆಗೂ ಕ್ರಮ

ಮೈಸೂರು, ನ.23(ಎಂಟಿವೈ)– ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಹೆಚ್ಚುತ್ತಿರುವ ಮಾನವ–ವನ್ಯಜೀವಿ ಸಂಘರ್ಷ ತಡೆಗೆ ಕೈಗೊಳ್ಳಬೇಕಾದ ಕ್ರಮಗಳನ್ನು ಅವಲೋಕಿಸಲು ಮೈಸೂರು, ಚಾಮರಾಜನಗರ, ಕೊಡಗು ಜಿಲ್ಲೆ ಸೇರಿದಂತೆ ರಾಜ್ಯದ 9 ಜಿಲ್ಲೆಗಳಿಗೆ ಹಿರಿಯ ಅಧಿಕಾರಿಗಳನ್ನು ನೋಡಲ್ ಅಧಿಕಾರಿಗಳನ್ನಾಗಿ ಸರ್ಕಾರ ನಿಯೋಜಿಸಿ ಆದೇಶಿಸಿದೆ. ಇತ್ತೀಚಿನ ದಿನಗಳಲ್ಲಿ ರಾಜ್ಯದ ಕೆಲ ಜಿಲ್ಲೆಗಳಲ್ಲಿ ವನ್ಯಜೀವಿಗಳ ಹಾವಳಿಯಿಂದ ಕಾಡಂಚಿನ ಗ್ರಾಮಸ್ಥರು ತತ್ತರಿಸಿದ್ದು, ಕೆಲವೆಡೆ ಜೀವ, ಆಸ್ತಿ ಹಾನಿಯೂ ಸಂಭವಿಸಿದೆ. ಇದರಿಂದ ಸಾರ್ವಜನಿಕ ವಲಯದಲ್ಲಿ ಆಕ್ರೋಶ ವ್ಯಕ್ತವಾಗುತ್ತಿದ್ದು, ವನ್ಯಜೀವಿಗಳ ಹಾವಳಿಗೆ ಕಡಿವಾಣ ಹಾಕುವಂತೆ ಜನ ಒತ್ತಾಯಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಅರಣ್ಯ ಸಚಿವ ಈಶ್ವರ್ ಖಂಡ್ರೆ ಸೂಚನೆ ಮೇರೆಗೆ ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳು ಆದೇಶ ಹೊರಡಿಸಿ, 9 ಜಿಲ್ಲೆಗಳಿಗೆ ಹಿರಿಯ ಅಧಿಕಾರಿಗಳನ್ನು ನೋಡಲ್ ಅಧಿಕಾರಿಯಾಗಿ ನಿಯೋಜಿಸಿ ಆದೇಶ ಹೊರಡಿಸಿದ್ದಾರೆ.

ಮೈಸೂರು ಜಿಲ್ಲೆಗೆ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿ ಶಾಶ್ವತಿ ಮಿಶ್ರ, ಚಾಮರಾಜನಗರ ಜಿಲ್ಲೆಗೆ ಬಿಶ್ವಜಿತ್ ಮಿಶ್ರ, ಕೊಡಗು ಜಿಲ್ಲೆಗೆ ಬ್ರಿಜೇಶ್ ಕುಮಾರ್, ಕೋಲಾರ ಜಿಲ್ಲೆಗೆ ಗೀತಾಂಜಲಿ, ತುಮಕೂರು ಜಿಲ್ಲೆಗೆ ಸ್ಮಿತಾ ಬಿಜ್ಜೂರ್, ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ವನಶ್ರೀ ವಿಪಿನ್ ಸಿಂಗ್, ರಾಮನಗರ ಜಿಲ್ಲೆಗೆ ಅನಿಲ್ ಕುಮಾರ್ ರತನ್, ಹಾಸನ ಜಿಲ್ಲೆಗೆ ಕುಮಾರ್ ಪುಷ್ಕರ್, ಚಿಕ್ಕಮಗಳೂರು ಜಿಲ್ಲೆಗೆ ವಿಜಯ್ ಮೋಹನ್ ರಾಜ್ ಅವರನ್ನು ನೇಮಿಸಲಾಗಿದೆ. ಅರಣ್ಯ ಇಲಾಖೆಯಲ್ಲಿ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಈ ಅಧಿಕಾರಿಗಳು ನೇಮಕವಾದ ●9ನೇ ಪುಟಕ್ಕೆ

ಬಿಜೆಪಿ ಹೈಕಮಾಂಡ್ ಸೂಚನೆ ಪಾಲಿಸಿದ್ದೆ ನನಗೆ ಶೂಲವಾಯ್ತು!

ಮೈಸೂರಿನಲ್ಲಿ ಮಾಜಿ ಸಚಿವ ಸೋಮಣ್ಣ ಕಿಡಿ

- ಡಿಸೆಂಬರ್ 6ರ ನಂತರ ಎಲ್ಲವನ್ನೂ ಬಹಿರಂಗ ಮಾಡುತ್ತೇನೆ
- ಬಿಜೆಪಿಯಲ್ಲಿ ಸೋಮನಹಳ್ಳಿ ಮುದುಕಿ ಕಥೆಯಾಗಿದೆ
- ರಾಜಕಾರಣ ಒಂದು ಮನೆತನಕ್ಕೆ ಸೀಮಿತವಾಗಬಾರದು
- ಸೋಮಣ್ಣ ಹಿಂದೆ ಮುಂದೆ ಸುತ್ತುತ್ತಿದ್ದವರು ಈಗ ನಾಪತ್ತೆ
- ಕಾಂಗ್ರೆಸ್ ಸೇರ್ಪಡೆ ಸಾಧ್ಯತೆ; ತುಮಕೂರಿನಿಂದ ಲೋಕಸಭೆಗೆ ಸ್ಪರ್ಧೆ



ಮೈಸೂರು, ನ.23(ಬಿಎಲ್‌ಯು)– ಬಿಜೆಪಿ ಹೈಕಮಾಂಡ್ ನೀಡಿದ ಸೂಚನೆ ಪಾಲನೆ ಮಾಡಿದ್ದರಿಂದ ಯಾವ ರೀತಿ ಹೊಡೆತ ಬಿತ್ತು ಎಂಬುದನ್ನು ಡಿ.6ರ ಬಳಿಕ ಹೇಳುತ್ತೇನೆ ಎಂದು ಮಾಜಿ ಸಚಿವ ವಿ.ಸೋಮಣ್ಣ ತಿಳಿಸಿದ್ದಾರೆ.

ಮೈಸೂರಿನಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ಬಿಜೆಪಿ ರಾಜ್ಯಾಧ್ಯಕ್ಷರಾಗಿ ಬಿ.ವೈ.ವಿಜಯೇಂದ್ರ ಹಾಗೂ ವಿರೋಧ ಪಕ್ಷದ ನಾಯಕರಾಗಿ ಆರ್.ಅಶೋಕ್ ಹೊಂದಾಣಿಕೆ ರಾಜಕಾರಣ ಮಾಡುತ್ತಾರೆ. ಹೊಂದಾಣಿಕೆಯಿಂದಲೇ ಲೋಕಸಭಾ ಚುನಾವಣೆಯಲ್ಲಿ ಹೆಚ್ಚಿನ ಸ್ಥಾನ ಗೆಲ್ಲಲಿದ್ದಾರೆ ಎಂಬ ಕಾರಣದಿಂದ ಬಿಜೆಪಿ ವರಿಷ್ಠರು ಇವರಿಬ್ಬರನ್ನು ಆಯ್ಕೆ ಮಾಡಿರಬಹುದು ●9ನೇ ಪುಟಕ್ಕೆ

ಸೋಮನಹಳ್ಳಿ ಮುದುಕಿ...



‘ಸೋಮನಹಳ್ಳಿ ಮುದುಕಿ’ ವಿಚಾರವನ್ನು ಸಾಂದರ್ಭಿಕವಾಗಿ ಆಗಾಗ ಬಳಸುವುದುಂಟು. ಇದರ ಅರ್ಥ ಇಷ್ಟೆ, ಈ ಗ್ರಾಮದ ಮುದುಕಿಯೊಬ್ಬಳು ತಾನು ಸಾಕಿರುವ ಕೋಳಿ ಕೂಗಿದರಷ್ಟೇ ಬೆಳಗಾಗುವುದು ಎಂಬ ಭ್ರಮೆಯಲ್ಲಿದ್ದಳು. ಇದನ್ನು ಸಾಮಾನ್ಯವಾಗಿ ರಾಜಕಾರಣಿಗಳು ಎದುರಾಳಿಗಳನ್ನು ಟೀಕಿಸಲು ವ್ಯಂಗ್ಯೋಕ್ತಿಯಾಗಿ ಬಳಸುತ್ತಾರೆ. ಅದರಂತೆ ಕೆಲ ವರ್ಷಗಳ ಹಿಂದೆ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಬಳಸಿದ್ದರು. ಕೆಪಿಸಿಸಿ ಅಧ್ಯಕ್ಷರಾಗಿ ನೇಮಕಗೊಂಡಾಗ ಕಾಂಗ್ರೆಸ್‌ನಲ್ಲಿದ್ದ ಹಿರಿಯ ರಾಜಕೀಯ ಮುತ್ಸದ್ದಿ ಎಂ.ರಾಜಶೇಖರಮೂರ್ತಿಯವರು ಪಕ್ಷ ತೊರೆದು ಬಿಜೆಪಿ ಸೇರ್ಪಡೆಗೊಂಡರು. ರಾಜಶೇಖರಮೂರ್ತಿಯವರು ಪಕ್ಷ ತೊರೆದ ಬಗ್ಗೆ ಸುದ್ದಿಗಾರರು ಪ್ರಶ್ನಿಸಿದಾಗ ಎಸ್.ಎಂ.ಕೃಷ್ಣ ಅವರು ‘ಸೋಮನಹಳ್ಳಿ ಮುದುಕಿ ನನ್ನ ಕೋಳಿ ಕೂಗಿದರೇನೇ ಬೆಳಗಾಗುತ್ತೆ ಅಂತ ಹೇಳಿದ್ಲಂತೆ’. ರಾಜಶೇಖರಮೂರ್ತಿಯವರು ನನ್ನಿಂದಲೇ ಕಾಂಗ್ರೆಸ್ ಎಂಬ ಭ್ರಮೆಯಲ್ಲಿದ್ದಾರೆ ಎಂಬುದನ್ನು ಪರೋಕ್ಷವಾಗಿ ಕೃಷ್ಣ ಉಲ್ಲೇಖಿಸಿದ್ದರು.

ನಮ್ಮ ಪಕ್ಷದ ಮಹಾ ನೇತಾರರೇ ನನ್ನ ಸೋಲಿಸಿದರು...

ಕಳೆದ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್‌ನವರು ನನ್ನನ್ನು ಸೋಲಿಸಿಲ್ಲ. ನಮ್ಮ ಪಕ್ಷದ ಮಹಾನೇತಾರರೇ ನನ್ನನ್ನು ಸೋಲಿಸಿದರು ಎಂದು ಮಾಜಿ ಸಚಿವ ಸೋಮಣ್ಣ ಆರೋಪಿಸಿದರು. ತಾಲೂಕಿನ ಹೆಗ್ಗೊಠಾರ ಗ್ರಾಮದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ನಮ್ಮ ಪಕ್ಷದ ಮಹಾನೇತಾರರೂ ಎನಿಸಿಕೊಂಡವರು, ಜೊತೆಯಲ್ಲಿದ್ದವರೇ ನನ್ನನ್ನು ಸೋಲಿಸಿದರು. ಅವರ ಎಲ್ಲರ ಪಾಪದ ಕೆಲಸವನ್ನು ವರಿಷ್ಠರಿಗೆ ಹೇಳುತ್ತೇನೆ. ಒಂದಂತೂ ಸತ್ಯ, ರಾಜಕೀಯ ನಿಂತ ನೀರಲ್ಲ. ನನಗೆ ಉದ್ದೇಶಪೂರ್ವಕವಾಗಿ ತೊಂದರೆ ಕೊಟ್ಟವರಿಗೆ ಡಿ.6ರಂದು ಉತ್ತರ ಕೊಡುತ್ತೇನೆ. ನಾನು ಶಕ್ತಿ ಪ್ರದರ್ಶನ ಮಾಡುತ್ತಿಲ್ಲ. ಎಲ್ಲವೂ ನನ್ನಿಂದಲೇ ಎಂಬುದು ಭ್ರಮೆ. ಸೋಮನಹಳ್ಳಿ ಮುದುಕಿ ಕತೆ ನಾನಾಗಲ್ಲ. ಆದರೆ ತಪ್ಪು ಮಾಡಿದವರನ್ನು ಅರ್ಥೈಸುವ ಕೆಲಸ ಮಾಡುತ್ತೇನೆ ಎಂದರು.

“ನೂರು ಮತದ ಹೊಟ್ಟ ತೂರಿ, ಎಲ್ಲ ತತ್ವದೆಲ್ಲೆ ಮೀರಿ,
ನಿರ್ದಿಗಂತವಾಗಿ ಏರಿ, ಓ ನನ್ನ ಚೇತನ-ಆಗು ನೀ ಅನಿಕೇತನ”
- ಕುವೆಂಪು

ಸಮಾನತೆ-ಸ್ವಾಭಿಮಾನ-ಸ್ವಾವಲಂಬನೆ ಪ್ರತಿಷ್ಠಾನ (ರಿ.)
ಸಮಾನತೆ ಪ್ರಕಾಶನ (ರಿ.) ಮೈಸೂರು
ಇವರ ಆಶ್ರಯದಲ್ಲಿ

೨೦೨೩ನೇ ಸಾಲಿನ ಸಾಹಿತ್ಯ ಕ್ಷೇತ್ರದಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ
ಪ್ರೊ.ಸಿ.ನಾಗಣ್ಣ ಅವರಿಗೆ
ಅಭಿನಂದನಾ ಸಮಾರಂಭ

ಸಮ್ಮುಖ : ಡಾ. ಕಲ್ಯಾಣಸಿರಿ ಭಂತೇಜಿ, ವಿಶ್ವಮೈತ್ರಿ ಬುದ್ಧವಿಹಾರ, ಮೈಸೂರು
ಉದ್ಘಾಟನೆ : ಶ್ರೀ ವಿ.ಶ್ರೀನಿವಾಸ ಪ್ರಸಾದ್, ಸಂಸತ್ ಸದಸ್ಯರು, ಚಾಮರಾಜನಗರ ಲೋಕಸಭಾ ಕ್ಷೇತ್ರ
ಅಭಿನಂದನ ನುಡಿ : ಪ್ರೊ.ಎನ್.ಎಸ್.ತಾರಾನಾಥ, ಹಿರಿಯ ವಿದ್ವಾಂಸರು, ವಿಶ್ರಾಂತ ಕನ್ನಡ ಪ್ರಾಧ್ಯಾಪಕರು
ಅಭಿನಂದಿತರ ನುಡಿ : ಪ್ರೊ.ಸಿ.ನಾಗಣ್ಣ, ವಿಶ್ರಾಂತ ಪ್ರಾಧ್ಯಾಪಕರು, ಮೈ.ವಿ.ವಿ
ಅಧ್ಯಕ್ಷತೆ : ಶ್ರೀ ಮಡ್ಡೀಕೆರೆ ಗೋಪಾಲ್, ಅಧ್ಯಕ್ಷರು, ಮೈಸೂರು ಜಿಲ್ಲಾ ಕ.ಸಾ.ಪ

ದಿನಾಂಕ : 25-11-2023 ಬೆಳಗ್ಗೆ 11.00 ಗಂಟೆಗೆ
ಸ್ಥಳ : ವಿಶ್ವಜ್ಞಾನಿ ಸಭಾಂಗಣ, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನ ಮತ್ತು ವಿಸ್ತರಣ ಕೇಂದ್ರ ಮಾನಸಗಂಗೋತ್ರಿ, ಮೈಸೂರು
ಎಲ್ಲರಿಗೂ ಆತ್ಮೀಯ ಸುಸ್ವಾಗತ

ಡಾ. ನೀಲಗಿರಿ ತಳವಾರ, ಗೌರವಾಧ್ಯಕ್ಷರು | ಪ್ರೊ.ಸಿ.ಬಸವರಾಜು, ಅಧ್ಯಕ್ಷರು | ಡಾ.ಮುಳ್ಳೂರು ನಂಜುಂಡಸ್ವಾಮಿ, ಕಾರ್ಯದರ್ಶಿ | ಶ್ರೀ ಭರತ್ ರಾಮಸ್ವಾಮಿ, ಖಜಾಂಚಿ ಮತ್ತು ಪ್ರಕಾಶಕ

ಮೈಸೂರು ಮಿತ್ರ

ಶುಕ್ರವಾರ 24 ನವೆಂಬರ್ 2023

ಶ್ರೀ ಸುತ್ತೂರು ಕ್ಷೇತ್ರದಲ್ಲಿ ಶಿವದೀಪೋತ್ಸವ

ಮೈಸೂರು,ನ.23–ಶ್ರೀ ಸುತ್ತೂರು ಕ್ಷೇತ್ರದಲ್ಲಿ ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃ ಗದ್ದುಗೆಯಲ್ಲಿ ನ.26ರಂದು ಸಂಜೆ ಶಿವದೀಪೋತ್ಸವ (ಕೃತ್ತಿಕೋತ್ಸವ)ವನ್ನು ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರ ಸಾನ್ನಿಧ್ಯದಲ್ಲಿ ಏರ್ಪಡಿಸಲಾಗಿದೆ.



ಅಂದು ಸಂಜೆ 6ಕ್ಕೆ ಜೆಎಸ್‌ಎಸ್ ವಸತಿ ಶಾಲಾ ಸಂಗೀತ ಶಿಕ್ಷಕರು ಹಾಗೂ ಮಕ್ಕಳಿಂದ ಸಾಮೂಹಿಕ ಪ್ರಾರ್ಥನೆ, ರಾತ್ರಿ 7ಕ್ಕೆ ವಿಶ್ರಾಂತ ಕನ್ನಡ ಪ್ರಾಧ್ಯಾಪಕರಾದ ಡಾ.ಕೆ. ಅನಂತರಾಮು ಅವರು ಉಪನ್ಯಾಸ ನೀಡಲಿದ್ದಾರೆ. ರಾತ್ರಿ 8ಕ್ಕೆ ಮಹಾಮಂಗಳಾರತಿ, ಪ್ರಾಕಾರೋತ್ಸವ, ದೀಪೋತ್ಸವದ ನಂತರ ಪ್ರಸಾದ ವ್ಯವಸ್ಥೆ ಮಾಡಲಾಗಿದೆ. ಅಲ್ಲದೆ, ಶ್ರೀ ಕ್ಷೇತ್ರದ ಶ್ರೀ ಮಹದೇಶ್ವರ, ಶ್ರೀಸೋಮೇಶ್ವರ, ಶ್ರೀವೀರಭದ್ರೇಶ್ವರ ದೇವಸ್ಥಾನಗಳಲ್ಲಿಯೂ ವಿಶೇಷ ಪೂಜೆ ಏರ್ಪಡಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.



ಮೈಸೂರಿನಲ್ಲಿ ಜಿಲ್ಲಾಡಳಿತದ ವತಿಯಿಂದ ನಡೆದ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ಕುರುಬಾರಹಳ್ಳಿ ಬಿ.ಧನಪಾಲ್ ಅವರಿಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಜಿಲ್ಲಾ ಮಟ್ಟದ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಮಾಡಿದರು. ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಕನ್ನಡ–ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಈ ವೇಳೆ ಉಪಸ್ಥಿತರಿದ್ದರು.

ನ.28, ವಂಚಕ ಸುಕೇಶ್ ಚಂದ್ರಶೇಖರ್ ಐಷಾರಾಮಿ ಕಾರುಗಳ ಹರಾಜು!



ಬೆಂಗಳೂರು: 200 ಕೋಟಿ ವಂಚನೆ ಪ್ರಕರಣದಲ್ಲಿ ಜೈಲು ಸೇರಿರುವ ಸುಕೇಶ್ ಚಂದ್ರಶೇಖರ್, ಸರಿಯಾಗಿ ತೆರಿಗೆ ಕಟ್ಟದೆ ಕಳ್ಳಾಟವಾಡಿದ್ದಾರೆ. ಇದೀಗ ಐಟಿ ಅಧಿಕಾರಿಗಳು ಸುಕೇಶ್ ಐಷಾರಾಮಿ ಕಾರುಗಳನ್ನು ಹರಾಜಿಗಿಟ್ಟಿದ್ದಾರೆ.

ಬಹುಕೋಟಿ ತೆರಿಗೆ ವಂಚನೆ ಆರೋಪ ಪ್ರಕರಣದಲ್ಲಿ ಸದ್ಯ ನ್ಯಾಯಾಂಗ ಬಂಧನದಲ್ಲಿರುವ ಉದ್ಯಮಿ ಸುಕೇಶ್ ಚಂದ್ರಶೇಖರ್‌ಗೆ ಸೇರಿದ ದುಬಾರಿ ಬೆಲೆಯ ಕಾರುಗಳನ್ನು ನವೆಂಬರ್ 28ರಂದು ಆದಾಯ ತೆರಿಗೆ ಇಲಾಖೆಯು(ಐಟಿ) ಹರಾಜು ಹಾಕಲು ಮುಂದಾಗಿದೆ.

ಹಲವು ಸಂಸ್ಥೆಗಳಿಗೆ ತೆರಿಗೆ ಬಾಕಿ ಉಳಿಸಿಕೊಂಡಿರುವ ಸುಕೇಶ್ ಅವರನ್ನು ಐಟಿ ಅಧಿಕಾರಿಗಳು ಈ ಹಿಂದೆ ಬಂಧಿಸಿದ್ದರು. ಸುಮಾರು 308 ಕೋಟಿ ರೂಪಾಯಿ ತೆರಿಗೆ ಬಾಕಿ ಉಳಿಸಿಕೊಂಡಿರುವ ಗಂಭೀರ ಆರೋಪ ಸುಕೇಶ್ ಮೇಲಿದೆ. ಹೀಗಾಗಿ ತೆರಿಗೆ ಅಧಿಕಾರಿಗಳು ಜಪ್ತಿ ಮಾಡಿ ಕೊಂಡಿರುವ ಸ್ವತ್ತುಗಳ ಹರಾಜಿಗೆ ಮುಂದಾಗಿದ್ದಾರೆ.

ವಶಕ್ಕೆ ಪಡೆದ ವಾಹನಗಳ ಪೈಕಿ 12 ಐಷಾರಾಮಿ ಕಾರುಗಳಿವೆ. ಈ ಪೈಕಿ ಬಿಎಂಡಬ್ಲ್ಯು, ರೇಂಜ್ ರೋವರ್, ಜಾಗ್ವಾರ್, ಪೋರ್ಷೆ, ಬೆಂಟ್ಲಿ, ರೋಲ್ಸ್ ರಾಯ್ಸ್, ಲ್ಯಾಂಬೋರ್ಗಿನಿ, ಡುಕಾಟಿ ಡಿಯಾವೆಲ್ ಸೇರಿದಂತೆ ಹಲವು ಕಾರುಗಳಿವೆ. ಇವುಗಳನ್ನು ಇಲಾಖೆ ಹರಾಜು ಮಾಡಲಿದೆ. ಕೇಂದ್ರ ಕಾನೂನು ಸಚಿವಾಲಯದ ಅಧಿಕಾರಿಯ ಹೆಸರಿನಲ್ಲಿ ನೂರಾರು ಕೋಟಿ ರೂಪಾಯಿ ವಂಚಿಸಿರುವ ಆರೋಪವನ್ನು ಸುಕೇಶ್ ಎದುರಿಸುತ್ತಿದ್ದಾರೆ. ಔಷಧ ಕಂಪನಿ ಪ್ರವರ್ತಕರಿಗೆ ಜಾಮೀನು ಕೊಡಿಸುವುದಾಗಿ ನಂಬಿಸಿ ಅವರ ಪತ್ನಿಯರಿಂದ 200 ಕೋಟಿ ರೂ. ಪಡೆದು ವಂಚಿಸಿ ರುವ ಅಕ್ರಮ ಹಣ ವರ್ಗಾವಣೆ ಕುರಿ ತಂತೆ ಜಾರಿ ನಿರ್ದೇಶಾನಾಲಯ ಇವರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದೆ.

2012ರಿಂದ 2018ರವರೆಗಿನ ಅವಧಿಗೆ ಸಂಬಂಧಿಸಿದಂತೆ 308.48 ಕೋಟಿ ರೂ.ಯನ್ನು ಸುಕೇಶ್ ಬಾಕಿ ಇರಿಸಿಕೊಂಡಿದ್ದರು. ಈ ಹಣ ವಸೂಲಿಗಾಗಿ ಅವರ ಕಾರುಗಳನ್ನು ಹರಾಜು ಮಾಡಲಾಗುತ್ತಿದೆ. ತಮಿಳುನಾಡು, ಕೇರಳ ಸೇರಿದಂತೆ ವಿವಿಧೆಡೆ ವಶಪಡಿಸಿಕೊಂಡ ವಾಹನಗಳನ್ನು ಬೆಂಗಳೂರಿಗೆ ತಂದು, ಆದಾಯ ತೆರಿಗೆ ಕಚೇರಿಯಲ್ಲಿ ಇರಿಸಲಾಗಿದೆ.

ಬ್ರಾಹ್ಮಣ ವಿದ್ಯಾರ್ಥಿನಿಗೆ ಮೊಟ್ಟೆ ತಿನ್ನಿಸಿದ ಶಿಕ್ಷಕ!

ಶಿವಮೊಗ್ಗ: ಸರ್ಕಾರಿ ಶಾಲೆಯಲ್ಲಿ 2ನೇ ತರಗತಿ ವಿದ್ಯಾರ್ಥಿನಿಗೆ ಶಿಕ್ಷಕರೊಬ್ಬರು ಶಾಲೆಯಲ್ಲಿ ಬಲವಂತವಾಗಿ ಮೊಟ್ಟೆ ತಿನ್ನಿಸಿದ ಆರೋಪ ಶಿವಮೊಗ್ಗ ಜಿಲ್ಲೆ ಹೊಸನಗರ ತಾಲೂಕಿನ ಅಮೃತ ಗ್ರಾಮದಲ್ಲಿ ಕೇಳಿ ಬಂದಿದೆ. ಬಲವಂತವಾಗಿ ಮೊಟ್ಟೆ ತಿನ್ನಿಸಿ ನಂತರ ಶಹಬ್ಬಾಶ್‌ಗಿರಿ ಕೊಟ್ಟು ಚಪ್ಪಾಳೆ ತಟ್ಟಿಸಿದ್ದಾರೆ ಎಂದು ತಿಳಿದು ಬಂದಿದೆ. ಅಮೃತ ಗ್ರಾಮದ ಕೆಪಿಎಸ್ ಪ್ರಾಥಮಿಕ ಶಾಲೆಯಲ್ಲಿ ಬ್ರಾಹ್ಮಣ ವಿದ್ಯಾರ್ಥಿನಿಗೆ ಶಿಕ್ಷಕರೊಬ್ಬರು ಮೊಟ್ಟೆ ತಿನ್ನಿಸಿದ್ದಕ್ಕೆ ಎಂದು ಪೋಷಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಇದರಿಂದ ವಿದ್ಯಾರ್ಥಿನಿಯ ಆರೋಗ್ಯ ಏರುಪೇರಾಗಿದ್ದು, ಧಾರ್ಮಿಕ ಆಚರಣೆಗೆ ಧಕ್ಕೆಯಾಗಿದೆ ಪೋಷಕರಾದ ಶ್ರೀಕಾಂತ್ ಆರೋಪಿಸಿದ್ದಾರೆ. ಮೊಟ್ಟೆ ತಿನ್ನಲು ಬಲವಂತ ಮಾಡಿದ ಶಿಕ್ಷಕನ ವಿರುದ್ಧ ಕ್ರಮ ಕೈಗೊಳ್ಳಲು ಆಗ್ರಹಿಸಿದ್ದಾರೆ. ಇಂತಹ ಘಟನೆಗಳು ಮಕ್ಕಳ ಮನಸ್ಸಿನ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಆದ್ದರಿಂದ ಶಿಕ್ಷಕನ ವಿರುದ್ಧ ಕ್ರಮ ಕೈಗೊಳ್ಳುವಂತೆ ವಿದ್ಯಾರ್ಥಿನಿಯ ತಂದೆ ಶ್ರೀಕಾಂತ್ ಸ್ಥಳೀಯ ಶಾಸಕ ಆರಗ ಜ್ಞಾನೇಂದ್ರ ಹಾಗೂ ಡಿಡಿಪಿಐ ಅವರಿಗೆ ಪತ್ರದ ಮೂಲಕ ಮನವಿ ಮಾಡಿದ್ದಾರೆ.

ಎಂ.ವಿ.ಜೀವಿತ ಗಂಗಾಗೆ ಕರಾಟೆಯಲ್ಲಿ ಬಹುಮಾನ



ಶಿವಮೊಗ್ಗದ ನೆಹರೂ ಮೈದಾನದಲ್ಲಿ ನಡೆದ ರಾಜ್ಯ ಮಟ್ಟದ ಶಾಲಾ ಮಕ್ಕಳ ಆಟೋಟಗಳ ಸ್ಪರ್ಧೆಯಲ್ಲಿ ಮೈಸೂರಿನ ವಿಜಯ ವಿಠ್ಠಲ ವಿದ್ಯಾಶಾಲೆಯ ವಿದ್ಯಾರ್ಥಿನಿ ಎಂ.ವಿ.ಜೀವಿತಾ ಗಂಗಾ 64 ಕೆ.ಜಿ. ವಿಭಾಗದ ಕರಾಟೆಯಲ್ಲಿ ತೃತೀಯ ಬಹುಮಾನ ಪಡೆದುಕೊಂಡಿದ್ದಾರೆ. ಈಕೆ ಮೈಸೂರಿನ ದಟ್ಟಗಳ್ಳಿ, ಕನಕದಾಸನಗರ ನಿವಾಸಿ ಎಂ.ಜಿ. ವಿಶ್ವಾರಾಧ್ಯ ಮತ್ತು ಪ್ರೀತಿ ದಂಪತಿ ಪುತ್ರಿ. ಚಿತ್ರದಲ್ಲಿ ಕರಾಟೆ ತರಬೇತುದಾರರಾದ ಸಿದ್ದಶೆಟ್ಟಿ ಮತ್ತು ರಾಜೇಶ್ ಅವರನ್ನು ಕಾಣಬಹುದು.

ಕನ್ನಡ ರಾಜ್ಯೋತ್ಸವ, ಭಾರತೀಯ ಭಾಷಾ ಉತ್ಸವ

ಮೈಸೂರು,ನ.23–ಮೈಸೂರಿನ ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜು, ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದ ಕಲಾ–ಸಾಹಿತ್ಯಿಕ ಸಂಘವಾದ ಸಂಪಾದಕ ಮಂಡಳಿಯು ಕಾಲೇಜಿನ ಎನ್‌ಎಸ್‌ಎಸ್ ಘಟಕದ ಸಹಯೋಗದಲ್ಲಿ ನ.25ರಂದು ಬೆಳಗ್ಗೆ 10.30ಕ್ಕೆ ಕನ್ನಡ ರಾಜ್ಯೋತ್ಸವ, ಭಾರತೀಯ ಭಾಷಾ ಉತ್ಸವವನ್ನು ಎಸ್‌ಜೆಸಿಇ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ. ಮುಖ್ಯ ಅತಿಥಿಗಳಾಗಿ ಸಂಗೀತ ಸಂಯೋಜಕ ಎಂ.ಆರ್.ಹರ್ಷ, ಜೆಎಸ್‌ಎ ವಿಶ್ವವಿದ್ಯಾನಿಲಯ ಕುಲಪತಿ ಪ್ರೊ.ಡಾ.ಎ.ಎನ್.ಸಂತೋಷ್‌ಕುಮಾರ್, ಉಸ್ತುವಾರಿ ಪ್ರಾಂಶುಪಾಲರಾದ ಡಾ.ಸಿ.ನಟರಾಜು, ಡಾ.ವಾಣಿಶ್ರೀ, ಎನ್.ಶಿವಪ್ರಸಾದ್ ಉಪಸ್ಥಿತರಿರುವರು.

ಬಡ ಕುಷ್ಠರೋಗಿಗಳಿಗೆ ಪೌಷ್ಟಿಕಾಂಶಯುಕ್ತ ಆಹಾರ ನೀಡಿ

ಕೇಂದ್ರ ರಾಸಾಯನಿಕ-ರಸಗೊಬ್ಬರ ಖಾತೆ ರಾಜ್ಯ ಸಚಿವ ಭಗವಂತ ಖೂಬ ಸಲಹೆ



ಮೈಸೂರಿನ ಬನ್ನಿಮಂಟಪದ ಜೆಎಸ್‌ಎಸ್ ಮೆಡಿಕಲ್ ಕಾಲೇಜಿನ ಶ್ರೀ ರಾಜೇಂದ್ರ ಸಭಾಂಗಣದಲ್ಲಿ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾಲಯ ಅಕಾಡೆಮಿ ಆಯೋಜಿಸಿದ್ದ ಕುಷ್ಠರೋಗ ಕುರಿತ ಅಂತರರಾಷ್ಟ್ರೀಯ ಸಮಾವೇಶವನ್ನು ಕೇಂದ್ರ ಸಚಿವ ಭಗವಂತ ಖೂಬ ಗುರುವಾರ ಉದ್ಘಾಟಿಸಿದರು.

ಮೈಸೂರು, ನ.23(ಬಿಎಲ್‌ಯು)–ಕುಷ್ಠರೋಗದಿಂದ ಬಳಲುವ ಬಡ ರೋಗಿಗಳಿಗೆ ಪೌಷ್ಟಿಕಾಂಶಯುಕ್ತ ಆಹಾರ ನೀಡಿ ಸಾವಿನಿಂದ ಪಾರು ಮಾಡಬೇಕು ಎಂದು ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಖಾತೆ ರಾಜ್ಯ ಸಚಿವ ಭಗವಂತ ಖೂಬ ಸಲಹೆ ನೀಡಿದ್ದಾರೆ.

ಮೈಸೂರಿನ ಬನ್ನಿಮಂಟಪದ ಜೆಎಸ್‌ಎಸ್ ಮೆಡಿಕಲ್ ಕಾಲೇಜಿನ ಶ್ರೀ ರಾಜೇಂದ್ರ ಸಭಾಂಗಣದಲ್ಲಿ ಇಂದು ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾಲಯ ಅಕಾಡೆಮಿ ಆಯೋಜಿಸಿದ್ದ ಕುಷ್ಠರೋಗ ಕುರಿತ ಅಂತರರಾಷ್ಟ್ರೀಯ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ಕುಷ್ಠರೋಗದಿಂದ ಬಳಲುವವರಿಗೆ ಔಷಧ ಜೊತೆಗೆ ಪೌಷ್ಟಿಕಾಂಶ ಆಹಾರ ಕೂಡ ನೀಡಬೇಕು. ಆದರೆ ಪೌಷ್ಟಿಕಾಂಶ ಆಹಾರವಿಲ್ಲದೆ ಬಹಳಷ್ಟು ಕುಷ್ಠರೋಗಿಗಳು ಸಾವನ್ನಪ್ಪುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಕುಷ್ಠರೋಗ ನಿರ್ಮೂಲನೆ ಮಾಡುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಬಹಳಷ್ಟು ಯೋಜನೆಗಳನ್ನು ರೂಪಿಸಿದೆ. ಕುಷ್ಠರೋಗಿಗಳಿಗೆ ಉಚಿತ ವೈದ್ಯಕೀಯ ಸೌಲಭ್ಯ ನೀಡುತ್ತಿದೆ. ಕುಷ್ಠರೋಗ ಕುರಿತ ಇಂತಹ ಸಮಾವೇಶಗಳಲ್ಲಿ ಅರ್ಥಪೂರ್ಣ ಚರ್ಚೆ, ಸಂವಾದ ನಡೆದು ಜನರಿಗೆ ಅನುಕೂಲಕರವಾದ ಫಲಿತಾಂಶ ಪ್ರಕಟವಾಗಬೇಕು ಎಂದು ಭಗವಂತ ಖೂಬ ಸಲಹೆ ನೀಡಿದರು.

ಜೆಎಸ್‌ಎಸ್ ಸಂಸ್ಥೆಯು ಕುಷ್ಠರೋಗ ಕುರಿತು ಆಯೋಜಿಸಿರುವ ಸಮಾವೇಶ ಪ್ರಸ್ತುತವಾಗಿದೆ. ಈ ರೋಗ ನಿರ್ಮೂಲನೆ ಮಾಡುವ ನಿಟ್ಟಿನಲ್ಲಿ ಸವಾಲು ಎದುರಿಸಲು ಆಳವಾದ ಅಧ್ಯಯನವಾಗಬೇಕು. ಕುಷ್ಠರೋಗದ ಬಗ್ಗೆ ಆಗಿರುವ ಹಾಗೂ ಆಗಬೇಕಾದ ಸಂಶೋಧನೆಗಳ ಬಗ್ಗೆ ವಿದ್ಯಾರ್ಥಿಗಳಿಗೂ ತಿಳುವಳಿಕೆ ಬರಬೇಕು ಎಂದು ಹೇಳಿದರು. ಕೋವಿಡ್ ನಂತರ ಆರೋಗ್ಯ ಕ್ಷೇತ್ರದಲ್ಲಿ ಹೊಸ ರೀತಿಯ ಸಂಶೋಧನೆಗಳು ನಡೆದಿದೆ. ಹೊಸ ಕಲ್ಪನೆಯಿಂದ ತಂತ್ರಜ್ಞಾನದಲ್ಲಿ ಹಲವು ಆವಿಷ್ಕಾರಗಳಾಗಿದೆ ಎಂದರು.

ಭಾರತ ಕುಷ್ಠರೋಗ ಮುಕ್ತವಾಗಬೇಕು. ಈ ನಿಟ್ಟಿನಲ್ಲಿ ಪ್ರಧಾನಿ ನರೇಂದ್ರ ಮೋದಿ ಸರ್ಕಾರ ರೂಪಿಸಿರುವ ಆರೋಗ್ಯ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕು ಎಂದು ಪಾಂಡಿಚೇರಿಯ ಇಂಧನ ಮತ್ತು ಶಿಕ್ಷಣ ಸಚಿವ ಎ.ನಮಃಶಿವಾಯಂ ಅವರು ಸಲಹೆ ನೀಡಿದರು.

> ಆರ್ಥಿಕವಾಗಿ ದುರ್ಬಲರಾಗಿರುವವರ ಅನುಕೂಲಕ್ಕಾಗಿ ಕೇಂದ್ರ ಸರ್ಕಾರ ಜನೌಷಧ್ ಮಳಿಗೆಗಳನ್ನು ತೆರೆದಿದೆ. ಜನೌಷಧ್‌ನಲ್ಲಿ 1,856 ಔಷಧಿಗಳು ದೊರೆಯುತ್ತವೆ. ಜನರು ಈ ಮಳಿಗೆಗಳಲ್ಲಿ ದೊರೆಯುವ ಔಷಧಿಗಳನ್ನು ಪಡೆಯಬೇಕು. ವೈದ್ಯರು ಕೂಡ ಜನೌಷಧ್‌ನಲ್ಲಿ ದೊರೆಯುವ ಔಷಧಿಗಳನ್ನು ಪಡೆಯುವಂತೆ ಶಿಫಾರಸು ಮಾಡಬೇಕು. ಆರಂಭಕ್ಕಿಂತ ಈಗ ಬಹಳಷ್ಟು ವೈದ್ಯರು ಜನೌಷಧ್‌ನಲ್ಲಿರುವ ಔಷಧಿ ಪಡೆಯುವಂತೆ ಶಿಫಾರಸು ಮಾಡುತ್ತಿದ್ದಾರೆ. ಇದು ಒಳ್ಳೆಯ ಬೆಳವಣಿಗೆ. ಇದರಿಂದ ಆರ್ಥಿಕವಾಗಿ ದುರ್ಬಲರಾಗಿರುವ ಜನರಿಗೆ ಅನುಕೂಲವಾಗಲಿದೆ. **–ಸಚಿವ ಭಗವಂತ ಖೂಬ**

ಸಮಾವೇಶದಲ್ಲಿ ವಿಷಯ ಮಂಡಿಸುವ ಉಪನ್ಯಾಸಕರು, ಸಾವಿರಾರು ವಿದ್ಯಾರ್ಥಿಗಳು ಭಾಗವಹಿಸಿದ್ದರು. ನಾಳೆ ಕೂಡ ಸಮಾವೇಶ ನಡೆಯಲಿದೆ.

ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದ ಸಮಾವೇಶದಲ್ಲಿ ಮಧ್ಯಪ್ರದೇಶದ ಭೂಪಾಲ್‌ನ ಗಾಂಧಿ ಮೆಡಿಕಲ್ ಕಾಲೇಜಿನ ಡೀನ್ ಡಾ.ಸಲೀಲ್ ಭಾರ್ಗವ, ಜೆಎಸ್‌ಎಸ್ ಮಹಾ ವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರಮಠ್, ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾಲಯ ಅಕಾಡೆಮಿಯ ಕುಲಪತಿ ಡಾ.ಬಿ.ಸುರೇಶ್, ಉಪಕುಲಪತಿ ಡಾ.ಸುರೀಂಧರ್ ಸಿಂಗ್, ರಿಜಿಸ್ಟ್ರಾರ್ ಡಾ.ಬಿ.ಮಂಜುನಾಥ್, ಜೆಎಸ್‌ಎಸ್ ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲ್ ಡಾ.ಹೆಚ್.ಬಸವಣ್ಣಗೌಡಪ್ಪ, ಕಾಲೇಜಿನ ವಿವಿಧ ವಿಭಾಗದ ಮುಖ್ಯಸ್ಥರಾದ ಡಾ.ಡಿ.ಸುನೀಲ್ ಕುಮಾರ್, ಡಾ.ಬಿ.ಎಸ್.ಜಯರಾಜ್, ಡಾ.ನಾರಾಯಣ ಶಬಾದಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಜಾತಿ ಗಣತಿಯಿಂದ ರಾಜಕೀಯ ಲಾಭ ಪಡೆಯಲು ಸಿದ್ದರಾಮಯ್ಯ ಹುನ್ನಾರ

ಮೈಸೂರಲ್ಲಿ ಕೇಂದ್ರ ಸಚಿವ ಭಗವಂತ ಖೂಬ ಆರೋಪ

- ಜಾತಿ ಗಣತಿ ವರದಿಗೆ ಕಾಂಗ್ರೆಸ್‌ನಲ್ಲೇ ವಿರೋಧ
- ಗ್ಯಾರಂಟಿಯೂ ಇಲ್ಲ, ಅಭಿವೃದ್ಧಿಯೂ ಇಲ್ಲ
- ರಾಹುಲ್ ಗಾಂಧಿ ಅಪ್ರಬುದ್ಧ ನಾಯಕ

ಮೈಸೂರು, ನ.23 (ಬಿಎಲ್‌ಯು)–ಜಾತಿ ಗಣತಿ ವರದಿಯಿಂದ ವಿವಾದ ಹುಟ್ಟು ಹಾಕಿ, ಲೋಕಸಭಾ ಚುನಾವಣೆಯಲ್ಲಿ ರಾಜಕೀಯ ಲಾಭ ಪಡೆಯಲು ಮುಖ್ಯಮಂತ್ರಿ ಸಿದ್ದರಾಮಯ್ಯ ಮುಂದಾಗಿದ್ದಾರೆ ಎಂದು ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಖಾತೆ ರಾಜ್ಯ ಸಚಿವ ಭಗವಂತ ಖೂಬ ಇಂದಿಲ್ಲಿ ಆರೋಪಿಸಿದ್ದಾರೆ.

ಮೈಸೂರಿನ ಜೆಎಸ್‌ಎಸ್ ಮೆಡಿಕಲ್ ಕಾಲೇಜಿನಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ತಮ್ಮ ವೈಫಲ್ಯಗಳನ್ನು ಮುಚ್ಚಿಕೊಳ್ಳಲು ಸಿದ್ದರಾಮಯ್ಯ ಜಾತಿಗಣತಿ ವರದಿ ಸ್ವೀಕಾರಕ್ಕೆ ಮುಂದಾಗಿದ್ದಾರೆ ಎಂದು ಆಪಾದಿಸಿದರು.

ಜಾತಿ ಗಣತಿ ವರದಿಗೆ ವಿರೋಧ ಪಕ್ಷಗಳಿರಲಿ, ಕಾಂಗ್ರೆಸ್ ಪಕ್ಷದಲ್ಲೇ ಬಹಳಷ್ಟು ವಿರೋಧವಿದೆ. ವರದಿ ಸ್ವೀಕಾರಕ್ಕೆ ಒಮ್ಮತವಿಲ್ಲ ಎಂಬುದು ಇದರಿಂದ ಸ್ಪಷ್ಟ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಬಹಳಷ್ಟು ಸಚಿವರು ವರದಿ ಸ್ವೀಕಾರವನ್ನು ವಿರೋಧಿಸುತ್ತಿದ್ದಾರೆ ಎಂದರು.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಜನಪ್ರಿಯತೆ ಕಳೆದುಕೊಂಡಿದೆ. ಮುಂದಿನ ಲೋಕಸಭಾ ಚುನಾವಣೆಯಲ್ಲಿ ಸೋಲುವ ಭೀತಿ ಎದುರಾಗಿದೆ. ಈ ಕಾರಣದಿಂದ ಜಾತಿಗಣತಿ ವರದಿಯಿಂದ ವಿವಾದ ಹುಟ್ಟು ಹಾಕಿ ಅದರಿಂದ ರಾಜಕೀಯ ಲಾಭ ಪಡೆಯಲು ಸಿದ್ದರಾಮಯ್ಯ ಮುಂದಾಗಿದ್ದಾರೆ ಎಂದು ಭಗವಂತ ಖೂಬ ದೂರಿದರು.

ಅಧಿಕಾರಕ್ಕೆ ಬಂದ ಕೇವಲ ಒಂದು ತಿಂಗಳಲ್ಲೇ ಜನಪ್ರಿಯತೆ ಕಳೆದುಕೊಂಡ ಯಾವ ಸರ್ಕಾರವನ್ನು ನಾನು ನೋಡಿಲ್ಲ. ರಾಜ್ಯ ಸರ್ಕಾರ ಎಲ್ಲಾ ಕ್ಷೇತ್ರಗಳಲ್ಲಿ ವಿಫಲತೆ ಹೊಂದಿದೆ. ಅಧಿಕಾರಕ್ಕೆ ಬಂದ ಒಂದು ತಿಂಗಳಲ್ಲೇ ಭಿನ್ನಮತ ಆರಂಭವಾಯಿತು. ಗ್ಯಾರಂಟಿ ಯೋಜನೆಗಳು ಪರಿಪೂರ್ಣವಾಗಿ ಜನರನ್ನು ತಲುಪಿಲ್ಲ, ಅಭಿವೃದ್ಧಿ ಕಾರ್ಯಗಳು ಆಗುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಎನ್‌ಡಿಆರ್‌ಎಫ್ ಮಾರ್ಗಸೂಚಿ ಪ್ರಕಾರ ಬರ ಪರಿಹಾರ ನೀಡಲು ಕೇಂದ್ರ ಸರ್ಕಾರ ಈಗಲೂ ಬದ್ಧವಾಗಿದೆ. ಆದರೆ ಸರ್ಕಾರದ ಮಟ್ಟದಲ್ಲಿ ಹಲವು ಪ್ರಕ್ರಿಯೆ ಪೂರ್ಣಗೊಳಿಸಿ ಕೇಂದ್ರ ಸರ್ಕಾರಕ್ಕೆ ವರದಿ ನೀಡಿಲ್ಲ. ಹೀಗಿರುವಾಗ ಪರಿಹಾರ ಹೇಗೆ ನೀಡಲು ಸಾಧ್ಯ ಎಂದು ಪ್ರಶ್ನಿಸಿದ ಭಗವಂತ ಖೂಬ, ರಾಜ್ಯ ಸರ್ಕಾರ ಮೊದಲು ತನ್ನ ಪಾಲಿನ ಬರ ಪರಿಹಾರ ನೀಡಲಿ. ಆಮೇಲೆ ಕೇಂದ್ರ ಸರ್ಕಾರದತ್ತ ಬೊಟ್ಟು ಮಾಡಿ ತೋರಿಸಲಿ ಎಂದು ಸವಾಲು ಹಾಕಿದರು.

ಪ್ರಧಾನಮಂತ್ರಿ ನರೇಂದ್ರ ಮೋದಿಯನ್ನು ಜೇಬುಗಳ್ಳ, ಅಪಶಕುನ ಎಂದು ಟೀಕೆ ಮಾಡಿರುವ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ವಿರುದ್ಧ ಟೀಕಾಪ್ರಹಾರ ನಡೆಸಿದ ಭಗವಂತ ಖೂಬ, ನರೇಂದ್ರ ಮೋದಿಯನ್ನು ವಿಶ್ವಗುರು ಎನ್ನುತ್ತಾರೆ. ಆದರೆ ನರೇಂದ್ರ ಮೋದಿ ಮಹತ್ವ ತಿಳಿಯದ ರಾಹುಲ್ ಗಾಂಧಿ ಹೀಗೆ ಬಾಯಿಗೆ ಬಂದಂತೆ ಮಾತನಾಡುತ್ತಾರೆ ಎಂದರು.

ರಾಹುಲ್ ಗಾಂಧಿ ಅಪ್ರಬುದ್ಧ ನಾಯಕ, ಈ ರೀತಿಯ ಹೇಳಿಕೆಗಳಿಂದ ಅವರ ಯೋಗ್ಯತೆ ಏನು ಎಂದು ಬಿಂಬಿಸುತ್ತದೆ ಎಂದು ಹರಿಹಾಯ್ದರು. ದೇಶಾದ್ಯಂತ ಎರಡೂವರೆ ಲಕ್ಷ ಜನರಿಂದ ಮಾಹಿತಿ ಸಂಗ್ರಹಿಸಿ ರಾಷ್ಟ್ರೀಯ ಶಿಕ್ಷಣ ನೀತಿ ರೂಪಿಸಲಾಗಿದೆ. ಆದರೆ ಇದನ್ನು ಕೂಡ ರಾಹುಲ್ ಗಾಂಧಿ ಟೀಕಿಸುತ್ತಾರೆ. ಹಾಗಾದರೆ ಎರಡೂವರೆ ಲಕ್ಷ ಜನರಿಗಿಂತ ರಾಹುಲ್ ಗಾಂಧಿ ಬುದ್ಧಿವಂತರೇ ಎಂದು ಭಗವಂತ ಖೂಬ ಪ್ರಶ್ನಿಸಿದರು.

ಕರಾಟೆಯಲ್ಲಿ ಕೆ.ನಿರೀಕ್ಷ್‌ಗೆ ಬಹುಮಾನ




ಮೈಸೂರು,ನ.23–ಮೈಸೂರಿನಲ್ಲಿ ನಡೆದ ಶೋರಿನ್ ಕೈ ಕಪ್ ಇಂಟರ್‌ನ್ಯಾಷನಲ್ ಕರಾಟೆ ಚಾಂಪಿಯನ್‌ಶಿಪ್‌ನಲ್ಲಿ ಆರ್ಕಿಡ್ಸ್ ಪಬ್ಲಿಕ್ ಶಾಲೆಯ 8ನೇ ತರಗತಿ ವಿದ್ಯಾರ್ಥಿ ಕೆ.ನಿರೀಕ್ಷ್ ಕುಮಿತಾದಲ್ಲಿ ಪ್ರಥಮ ಬಹುಮಾನ ಮತ್ತು ಕಟಾದಲ್ಲಿ 3ನೇ ಬಹುಮಾನ ಪಡೆದುಕೊಂಡಿದ್ದಾರೆ. ಅಲ್ಲದೆ ಪಾಂಡಿಚೆರಿಯಲ್ಲಿ ನಡೆದ ಇಂಟರ್‌ನ್ಯಾಷನಲ್ ಕರಾಟೆ ಚಾಂಪಿಯನ್‌ಶಿಪ್‌ನಲ್ಲಿ ಕತಾ ಮತ್ತು ಕುಮಿತಾದಲ್ಲಿ ಪ್ರಥಮ ಬಹುಮಾನ ಪಡೆದಿದ್ದಾರೆ. ದೇಶದ ವಿವಿಧ ಮೂಲೆಗಳಿಂದ ಹಾಗೂ ವಿದೇಶಗಳಿಂದ ಸುಮಾರು 500 ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಕಾಂಗ್ರೆಸ್‌ಗೆ ನೇಮಕ



ಮೈಸೂರು: ನಂಜನಗೂಡು ತಾಲೂಕು ಕಾಂಗ್ರೆಸ್‌ನ ಅಸಂಘಟಿತ ಕಾರ್ಮಿಕರ ವಿಭಾಗದ ತಾಲೂಕು ಉಪಾಧ್ಯಕ್ಷರನ್ನಾಗಿ ರಮೇಶ್‌ರನ್ನು ನೇಮಿಸಲಾಗಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

24.11.2023 ಶುಕ್ರವಾರ, ಮಳೆ ನಕ್ಷತ್ರ: ಅನುರಾಧ, 20.11.2023ರಿಂದ 02.12.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ,
ಶುಕ್ಲ ಪಕ್ಷ, ತಿಥಿ: ದ್ವಾದಶಿ, ನಕ್ಷತ್ರ: ರೇವತಿ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

■ **ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು :** ಮಹಿಳೆಯರ ಅಂತರ ಕಾಲೇಜು ಕ್ರೀಡಾಕೂಟ, ಉದ್ಘಾಟನೆ: ಕಾಲೇಜು ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕರಾದ ಪ್ರೊ.ಎ.ಹೆಚ್.ಎಂ.ವಿಜಯಲಕ್ಷ್ಮಿ, ಮುಖ್ಯ ಅತಿಥಿಗಳು: ಅಂತಾರಾಷ್ಟ್ರೀಯ ಅಥ್ಲೆಟ್ ಎಂ.ಯೋಗೇಂದ್ರ, ಶ್ರೀಮತಿ ಹೆಚ್.ಜಾನಕಿ, ಅಧ್ಯಕ್ಷತೆ: ಕಾಲೇಜು ಪ್ರಿನ್ಸಿಪಾಲ್ ಪ್ರೊ.ಅಬ್ದುಲ್ ರೆಹಮಾನ್, ಸ್ಥಳ: ಕಾಲೇಜು ಮೈದಾನ, ಬೆಳಗ್ಗೆ 8ಕ್ಕೆ.

■ **ಸಿಗ್ಮಾ ಆಸ್ಪತ್ರೆ:** ಎಂಡೋಸ್ಕೋಪಿ ಕಾರ್ಯಾಗಾರ, ಉಪಸ್ಥಿತರು: ಲಾಪ್ರೋಸ್ಕೋಪಿ ಮತ್ತು ಎಂಡೋಸ್ಕೋಪಿ ತಜ್ಞ ಡಾ.ಜಿ.ಸಿದ್ದೇಶ್, ಸ್ಥಳ: ಸಿಗ್ಮಾ ಆಸ್ಪತ್ರೆ, ಬೆಳಗ್ಗೆ 10ಕ್ಕೆ.

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ರಿಂದ ಸಂಜೆ 7 ಗಂಟೆವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಕಣ್ಣು ಕೆಂಪಾಗುವುದು, ಕಣ್ಣಿನಿಂದ ನೀರು ಸುರಿಯುವುದು, ಕಣ್ಣು ನೋವು, ಅರ್ಧ ತಲೆನೋವು ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 10ರಿಂದ.

■ **ಮಹಾರಾಣಿ ಮಹಿಳಾ ಕಲಾ ಕಾಲೇಜು:** ಕ್ರೀಡಾ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಉದ್ಘಾಟನಾ ಸಮಾರಂಭ, ಉದ್ಘಾಟನೆ: ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಮುಖ್ಯ ಅತಿಥಿಗಳು: ಅಕ್ಕಮಹಾದೇವಿ ಮಹಿಳಾ ವಿವಿ ವಿಶ್ರಾಂತ ಕುಲಪತಿ ಡಾ.ಸಬಿಹಾ ಭೂಮಿಗೌಡ, ಅಧ್ಯಕ್ಷತೆ: ಶಾಸಕ ಹರೀಶ್‌ಗೌಡ, ಪ್ರಾಸ್ತಾವಿಕ ನುಡಿ: ಪ್ರಾಂಶುಪಾಲ ಡಾ.ಬಿ.ವಿ.ವಸಂತಕುಮಾರ್, ಉಪಸ್ಥಿತರು: ಡಾ.ಎನ್.ಪ್ರಕಾಶ್, ಎಂ.ನಂಜುಂಡಯ್ಯ, ಅಶ್ವಿನಿ, ಸ್ಥಳ: ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ವೇದಿಕೆ, ಬೆಳಗ್ಗೆ 10.30ಕ್ಕೆ.

■ **ರೋಟರಿ ಮೈಸೂರು ಉತ್ತರ, ಇನ್ನರ್‌ವ್ಹೀಲ್ ಮೈಸೂರು ಉತ್ತರ :** ಆರೋಗ್ಯವಂತ ಮಕ್ಕಳ ಸ್ಪರ್ಧೆ, ಸ್ಥಳ: ರೋಟರಿ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 10.30ಕ್ಕೆ.

■ **ಶ್ರೀ ಮಲೆ ಮಹದೇಶ್ವರಸ್ವಾಮಿ ದೇವಸ್ಥಾನ ಟ್ರಸ್ಟ್ :** 46ನೇ ವರ್ಷದ ಕಾರ್ತಿಕ ಮಾಸದ ಶ್ರೀ ಮಲೆ ಮಹದೇಶ್ವರಸ್ವಾಮಿ ಪೂಜಾ ಮಹೋತ್ಸವ, ಬೆಳಗ್ಗೆ 10ಕ್ಕೆ ಉಚಿತ ಆರೋಗ್ಯ ತಪಾಸಣಾ ಶಿಬಿರ, ಉದ್ಘಾಟನೆ: ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಮುಖ್ಯ ಅತಿಥಿಗಳು: ಮಾಜಿ ಶಾಸಕ ಯತೀಂದ್ರ, ಶಾಸಕರಾದ ತನ್ವೀರ್ ಸೇಠ್, ಹರೀಶ್‌ಗೌಡ, ಟಿ.ಎಸ್.ಶ್ರೀವತ್ಸ, ಡಿ. ರವಿಶಂಕರ್, ಕಾಂಗ್ರೆಸ್ ಮುಖಂಡ ಸುನೀಲ್‌ಬೋಸ್, ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಮಾಜಿ ಶಾಸಕರಾದ ಎಂ.ಕೆ.ಸೋಮಶೇಖರ್, ಎಲ್.ನಾಗೇಂದ್ರ, ಸ್ಥಳ: ಸ್ಪರ್ಶ ಆರೋಗ್ಯ ಮತ್ತು ಕಣ್ಣಿನ ಆಸ್ಪತ್ರೆ, ಮಧ್ಯಾಹ್ನ 12ಕ್ಕೆ ಅನ್ನಸಂತರ್ಪಣೆ, ಸಾನ್ನಿಧ್ಯ : ಶ್ರೀ ಚಿದಾನಂದ ಸ್ವಾಮೀಜಿ, ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮೀಜಿ, ಮಧ್ಯಾಹ್ನ 1ಕ್ಕೆ ಶಂಕರ ಜಯಂತಿ ಭಜನಾ ಮಂಡಳಿಯವರಿಂದ ಭಜನಾ ಕಾರ್ಯಕ್ರಮ, ಮಧ್ಯಾಹ್ನ 2ಕ್ಕೆ ಶ್ರೀ ವರಲಕ್ಷ್ಮಿ ಭಜನಾ ಮಂಡಳಿ ಅವರಿಂದ ಭಜನಾ ಕಾರ್ಯಕ್ರಮ, ಸಂಜೆ 7ಕ್ಕೆ ಶ್ರೀ ಚಿನ್ಮಯಿ ಭಜನಾ ಮಂಡಳಿ ಅವರಿಂದ ಭಜನಾ ಕಾರ್ಯಕ್ರಮ, ಸ್ಥಳ: ದೇವಸ್ಥಾನದ ಆವರಣ, ಗರಡಿಕೇರಿ, ಲಷ್ಕರ್ ಮೊಹಲ್ಲಾ.

■ **ಗೋಪಾಲಸ್ವಾಮಿ ಶಿಶುವಿಹಾರ :** ಕನ್ನಡ ರಾಜ್ಯೋತ್ಸವ, ಜಾಥಾ ಉದ್ಘಾಟನೆ : ಮೈಸೂರು ಮಹಾನಗರ ಪಾಲಿಕೆ ಉಪ ಆಯುಕ್ತ ಜಿ.ಎಸ್.ಸೋಮಶೇಖರ್, ಉಪಸ್ಥಿತರು: ಎನ್.ಆರ್.ಮಂಜುನಾಥ್, ಸುರೇಶ್ ಯಡಿಯಾಳ್, ಪ್ರೊ. ಟಿ.ಟಿ.ಥಾಮಸ್, ಡಾ.ಪಾಂಡುರಂಗ ವಿಠ್ಠಲ, ಎಸ್.ರಾಮಪ್ರಸಾದ್, ಕೆ.ಎನ್.ಕೃಷ್ಣಪ್ರಸಾದ್, ಹೆಚ್.ಎನ್.ಚಂದನ್‌ಕುಮಾರ್, ಸ್ಥಳ: ಸಂಸ್ಥೆ ಆವರಣ, ಬೆಳಗ್ಗೆ 11ಕ್ಕೆ.

■ **ಸರ್ಕಾರಿ ಪ್ರಥಮ ದರ್ಜೆ ಕಾಲೇಜು :** ಕನ್ನಡ ರಾಜ್ಯೋತ್ಸವ ಮತ್ತು ವಿವಿಧ ವೇದಿಕೆಗಳ ಉದ್ಘಾಟನಾ ಸಮಾರಂಭ, ಬೆಳಗ್ಗೆ 10ಕ್ಕೆ ತಾಯಿ ಭುವನೇಶ್ವರಿದೇವಿ ಮೆರವಣಿಗೆ ಗೌತಮಬುದ್ಧ ವೃತ್ತದಿಂದ ಆರಂಭ, ಚಾಲನೆ: ಶಾಸಕ ಟಿ.ಎಸ್.ಶ್ರೀವತ್ಸ, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಪ್ರೊ.ಸಿ. ನಾಗಣ್ಣ, ಬೆಳಗ್ಗೆ 11.30ಕ್ಕೆ ವಿವಿಧ ವೇದಿಕೆಗಳ ಉದ್ಘಾಟನಾ ಸಮಾರಂಭ, ಉದ್ಘಾಟನೆ: ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಮುಖ್ಯ ಅತಿಥಿಗಳು: ಶಾಸಕ ಟಿ.ಎಸ್.ಶ್ರೀವತ್ಸ, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಪ್ರೊ.ಸಿ. ನಾಗಣ್ಣ, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಡಾ.ಮಾಯಾದೇವಿ, ಸ್ಥಳ: ಕಾಲೇಜು ಆವರಣ.

■ **ಜೆಎಸ್‌ಎಸ್ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ:** ವಿಶಿಖಾನುಪ್ರವೇಶ, ಪದವಿ ಪ್ರದಾನ ಸಮಾರಂಭ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮುಖ್ಯ ಅತಿಥಿಗಳು : ನವದೆಹಲಿಯ ನ್ಯಾಷನಲ್ ಕಮಿಷನ್ ಫಾರ್ ಇಂಡಿಯನ್ ಸಿಸ್ಟಮ್ ಆಫ್ ಮೆಡಿಸನ್ ಅಧ್ಯಕ್ಷ ಡಾ.ಯು. ರಘುರಾಮ ಭಟ್ಟ, ಅಧ್ಯಕ್ಷತೆ : ಜೆಎಸ್‌ಎಸ್ ಮಹಾವಿದ್ಯಾಪೀಠ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ. ಬೆಟಸೂರ ಮಠ, ಗೌರವ ಅತಿಥಿಗಳು : ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್.ಮಹೇಶ್, ಸ್ಥಳ: ಜೆಎಸ್‌ಎಸ್ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ, ಲಲಿತಾದ್ರಿಪುರ ರಸ್ತೆ, ಸಂಜೆ 4ಕ್ಕೆ.

■ **ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು :** 2023–24ನೇ ಸಾಲಿನ ಸಾಂಸ್ಕೃತಿಕ ಚಟುವಟಿಕೆಗಳ ಉದ್ಘಾಟನಾ ಸಮಾರಂಭ, ಉದ್ಘಾಟನೆ: ಶಾಸಕ ಹರೀಶ್‌ಗೌಡ, ಮುಖ್ಯ ಅತಿಥಿಗಳು: ಶ್ರೀಮತಿ ಪೂರ್ಣಿಮಾ ರಾಮ್‌ಕುಮಾರ್, ಕು. ಧನ್ಯಾ ರಾಮ್‌ಕುಮಾರ್, ಸುಜಯ್ ಹುಣಸೂರು, ಅಧ್ಯಕ್ಷತೆ: ಕಾಲೇಜು ಪ್ರಿನ್ಸಿಪಾಲ್ ಪ್ರೊ.ಸೋಮಣ್ಣ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 11ಕ್ಕೆ

■ **ಗಾನಭಾರತೀ:** ಶ್ರೀಮತಿ ವಸಂತಲಕ್ಷ್ಮಿ ಸಂಸ್ಮರಣಾ ಕಾರ್ಯಕ್ರಮ, ವೇಣುವಾದನ ಕಛೇರಿ, ವಿದ್ವಾನ್ ವಂಶೀಧರ್ ಅವರಿಂದ ವೇಣುವಾದನ, ವಿದ್ವಾನ್ ಅಚ್ಯುತರಾವ್–ಪಿಟೀಲು, ವಿದ್ವಾನ್ ಬಿ.ಸಿ. ಮಂಜುನಾಥ್–ಮೃದಂಗ, ವಿದ್ವಾನ್ ಸುನಾದ್ ನೂರ್–ಖಂಜರಿ, ಸ್ಥಳ: ವೀಣೆ ಶೇಷಣ್ಣ ಭವನ, ಸಂಜೆ 6ಕ್ಕೆ.

■ **ಕಲಾ ಸುರುಚಿ :** ವಿಶ್ವನಾಥ ಮಿರ್ಲೆ ನೆನಪಿನ ಮಕ್ಕಳ ಇಂಗ್ಲಿಷ್ ನಾಟಕೋತ್ಸವ, ಉದ್ಘಾಟನೆ : ಡಾ. ನಳಿನಿ ಚಂದರ್, ವಿಶೇಷ ಅತಿಥಿಗಳು : ಶ್ರೀಮತಿ ಅನ್ನಪೂರ್ಣ, ಮೌಂಟ್ ಲಿಟೇರಜೀ ಶಾಲೆ ಮತ್ತು ಆರ್ಕಿಡ್ ಪಬ್ಲಿಕ್ ಸ್ಕೂಲ್ ವಿದ್ಯಾರ್ಥಿಗಳಿಂದ ಕಿಂಗ್ ಲಿಯರ್ ಮತ್ತು ಮಿಡ್‌ನೈಟ್ ವಿಸಿಟರ್ ನಾಟಕ ಪ್ರದರ್ಶನ, ಸ್ಥಳ: ಸುರುಚಿ ರಂಗಮನೆ, ಕುವೆಂಪುನಗರ, ಸಂಜೆ 6ಕ್ಕೆ.

ಸುತ್ತೂರು ಶ್ರೀ ಕ್ಷೇತ್ರದಲ್ಲಿಂದು, ನಂಜನಗೂಡು ತಾಲೂಕು

■ **ಶ್ರೀ ವೀರ ಸಿಂಹಾಸನ ಮಹಾಸಂಸ್ಥಾನ ಮಠ :** ಕಾರ್ತಿಕ ಮಾಸದ ವಿಶೇಷ ಪೂಜಾ ಕಾರ್ಯಕ್ರಮ, ಸ್ಥಳ: ಸುತ್ತೂರು ಶ್ರೀಕ್ಷೇತ್ರ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಬಣ್ಣದ ಬಾನಾಡಿಗಳು–ಬಾನುಲಿ ಸರಣಿ, ರಚನೆ– ಡಾ.ಎಸ್.ವಿ. ನರಸಿಂಹನ್, ಪ್ರಸ್ತುತಿ–ಜಿ.ಶಾಂತಕುಮಾರ್, 6.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ–ಜಿ.ಕೆ.ರವೀಂದ್ರಕುಮಾರ್, 6.45 ಕಲ್ಯಾಣ ಕರೆದಿದೆ ಕಲ್ಯಾಣ–ಪ್ರಾಯೋಜಿತ ಕಾರ್ಯಕ್ರಮ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು–ಬಿ.ಆರ್. ಛಾಯಾ, 9.00 ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, 10.00 ಮಧುರೈ ಜಿ.ಎಸ್.ಮಣಿ–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ, 12.45ಕಾದಂಬರಿ ವಿಹಾರ–ನಾ ಕಸ್ತೂರಿ ಅವರ ರಂಗನಾಯಕಿ ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ–ಉಮೇಶ್, 1.00 ಪ್ರಗತಿಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆ–ಬಿ.ಕೃಷ್ಣ ಕಾರಂತ್, ಕೆ.ಆರ್. ರಾಘವೇಂದ್ರ ಆಚಾರ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ಮಹಾರಾಜಪುರಂ ಎಸ್.ರಾಮಚಂದ್ರನ್–ಹಾಡುಗಾರಿಕೆ, 4.00 ಮಹಿಳಾ ರಂಗ–ಕಲಿಕಾ ನ್ಯೂನತೆ ಇರುವ ಮಕ್ಕಳು ಹಾಗೂ ಪೋಷಕರಿಗೆ ತರಬೇತಿ ನೀಡುವುದು ಹೇಗೆ–ಈ ಕುರಿತು ತರಬೇತುದಾರರು ಹಾಗೂ ಅಧ್ಯಾಪಕಿ ರೂಪಾರಾವ್ ಅವರೊಂದಿಗೆ ಸಂದರ್ಶನ, 4.30 ವೃತ್ತಿ ಮಾರ್ಗದರ್ಶನ– ಸಸ್ಯಶಾಸ್ತ್ರ ಅಂದರೆ ಬಾಟನಿ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಡಾ.ಮಹದೇವಕುಮಾರ್ ಅವರೊಂದಿಗೆ ಮಾತುಕತೆ, 6.50 ಕೃಷಿರಂಗ–ರೇಷ್ಮೆ ಆಧಾರಿತ ಸಮಗ್ರ ಕೃಷಿಯ ಪ್ರಾಮುಖ್ಯತೆ ಕುರಿತು ಸಂವಾದ ಭಾಗವಹಿಸುವವರು ಲಕ್ಷ್ಮೀಪುರದ ರಾಮು ಹಾಗೂ ಆರ್.ವಸಂತ ಕುಮಾರ್, 8.00 ಸಂಧ್ಯಾರಾಗ–ರಂಗಕಲಾವಿದೆ ಶ್ರೀಮತಿ ಹರಿಪ್ರಸಾದ್ ಅವರೊಂದಿಗೆ ಸಂದರ್ಶನ, 9.30 ಕೆ.ಎಸ್.ಗೋಪಾಲಕೃಷ್ಣನ್–ವೇಣುವಾದನ, 10.00 ತತ್ವ ಸಂಚಾರ–ತತ್ವಪದ ಗಾಯಕರ ಹಾಡುಪಾಡು–ಭಾಗವಹಿ ಸುವವರು ಹೆಚ್.ಸಿ.ಶಿವಪ್ರಕಾಶ್ ಮತ್ತು ಸಂಗಡಿಗರು ಪ್ರಸ್ತುತಿ–ಡಾ.ಮೈಸೂರು ಉಮೇಶ್, 10.30 ಸವಿನೆನಪು

ಮೈಸೂರು ಜಿಲ್ಲೆಯಲ್ಲಿ ಹಿಂಗಾರಿನ 5, ಬೇಸಿಗೆಯ 2 ಬೆಳೆಗೆ ವಿಮೆ ಅವಕಾಶ

ಹಿಂಗಾರು ಬೆಳೆ ವಿಮಾ ಸಂಬಂಧ ಈಗಾಗಲೇ 700 ಅರ್ಜಿ ನೋಂದಣಿ







ಮೈಸೂರು ತಾಲೂಕಿನ ಡಿಎಂಜಿ ಹಳ್ಳಿಯಲ್ಲಿ ಗುರುವಾರ ಮಾಜಿ ಸಚಿವರೂ ಆದ ಶಾಸಕ ಜಿ.ಟಿ.ದೇವೇಗೌಡ, ಸಂಸದ ಪ್ರತಾಪ್ ಸಿಂಹ ಮತ್ತು ಶಾಸಕ ಜಿ.ಡಿ.ಹರೀಶ್‌ಗೌಡ ಅವರು ಕರಪತ್ರಗಳನ್ನು ಬಿಡುಗಡೆ ಮಾಡುವ ಮೂಲಕ ಫ್ರೂಟ್ಸ್ ಐಡಿ ಹಾಗೂ ಬೆಳೆ ವಿಮಾ ಯೋಜನೆಗಳ ಬಗ್ಗೆ ಅರಿವು ಮೂಡಿಸಿದರು. ಇನ್ನಿತರ ಮುಖಂಡರು ಹಾಗೂ ಅಧಿಕಾರಿಗಳು ಚಿತ್ರದಲ್ಲಿದ್ದಾರೆ.

ಮೈಸೂರು,ನ.23(ಪಿಎಂ)–ಹವಾಮಾನ ವೈಪರೀತ್ಯ ಸೇರಿದಂತೆ ಮೊದಲಾದ ಕಾರಣಗಳಿಂದ ಉಂಟಾಗುವ ಬೆಳೆ ನಷ್ಟ ಸರಿದೂಗಿಸಿಕೊಳ್ಳಲು ರೈತರಿಗೆ ಅವಕಾಶ ಕಲ್ಪಿಸುವಲ್ಲಿ ಬೆಳೆ ವಿಮೆ ಮಹತ್ವದ ಪಾತ್ರ ವಹಿಸಲಿದ್ದು, ಪ್ರಸಕ್ತ ಸಾಲಿನಲ್ಲಿ (2023–24) ಹಿಂಗಾರು ಮತ್ತು ಬೇಸಿಗೆ ಹಂಗಾಮಿಗೆ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ (ವಿಮಾ) ಯೋಜನೆಯಡಿ ಮೈಸೂರು ಜಿಲ್ಲೆಯ ವಿವಿಧ ಬೆಳೆಗಳಿಗೆ ರೈತರು ವಿಮೆ ಮಾಡಿಸಲು ಅವಕಾಶ ಕಲ್ಪಿಸಲಾಗಿದೆ.

ಹಿಂಗಾರು ಹಂಗಾಮಿನಲ್ಲಿ ಟೊಮೆಟೋ, ಮುಸುಕಿನಜೋಳ, ರಾಗಿ, ಕಡಲೆ, ಹುರುಳಿ ಹಾಗೂ ಬೇಸಿಗೆ ಹಂಗಾಮಿನಲ್ಲಿ ರಾಗಿ ಮತ್ತು ಭತ್ತಕ್ಕೆ ವಿಮೆ ಮಾಡಿಸಲು ಅವಕಾಶವಿದೆ.

ಸದರಿ ವಿಮಾ ಯೋಜನೆ ಸಂಬಂಧ ರಾಜ್ಯ ಸರ್ಕಾರ ಅಧಿಸೂಚನೆ ಹೊರಡಿಸಿ ಜಾರಿಗೊಳಿಸಿದೆ. ಅದರಂತೆ ಮೈಸೂರು ಜಿಲ್ಲೆಯಲ್ಲಿ ಆರು ಬೆಳೆಗಳಿಗೆ ರೈತರು ಬೆಳೆ ವಿಮೆ ಮಾಡಿಸಬಹುದು.

ಮೈಸೂರು ಜಿಲ್ಲೆಯಲ್ಲಿ 2023–24ರ ಹಿಂಗಾರು ಹಂಗಾಮಿನಲ್ಲಿ ಬಿತ್ತನೆಯಾದ ವಿವಿಧ ಬೆಳೆಗಳು (ನ.16ರವರೆಗೆ/ವಿಸ್ತೀರ್ಣ–ಹೆಕ್ಟೇರ್‌ಗಳಲ್ಲಿ/ವಿಮಾ ವ್ಯಾಪ್ತಿಗೆ ಸೇರದ ಬೆಳೆಗಳ ವಿವರವೂ ಇದೆ/ಕೃಷಿ ಇಲಾಖೆ ಅಂಕಿ–ಅಂಶ)

ಬೆಳೆ ವಿವರ	ಬಿತ್ತನೆ ಗುರಿ	ಬಿತ್ತನೆ ಕ್ಷೇತ್ರ	ಶೇಕಡ ಬಿತ್ತನೆ
ಜೋಳ ಹೈಬ್ರಿಡ್	350	375	107
ರಾಗಿ	11,735	16,141	138
ಮುಸುಕಿನ ಜೋಳ	4,855	4,753	98
ಚಿಯಾ	0	370	100
ಹಸಿಕಡಲೆ	1,135	957	84
ಹುರುಳಿ	25,720	24,802	96
ಉದ್ದು	70	0	0
ಹೆಸರು	95	0	0
ಅಲಸಂದೆ	6,185	5,180	84
ಅವರೆ	6,615	4,725	71
ಹುಚ್ಚೆಳ್ಳು	1,356	16	1
ಕಬ್ಬು	2,348	665	28
ಒಟ್ಟು	60,464	57,984	96

ಹಿಂಗಾರಿಗೆ ಸಂಬಂಧಿಸಿದಂತೆ ಎಕರೆ ಟೊಮೆಟೋಗೆ 57,265 ರೂ. ವಿಮಾ ಮೊತ್ತ ನಿಗದಿ ಮಾಡಿದ್ದು, 2,863 ರೂ. ವಿಮಾ ಕಂತು ಪಾವತಿಸಬೇಕಿದೆ. ಎಕರೆ ಮುಸುಕಿನ ಜೋಳಕ್ಕೆ (ಮಳೆಯಾಶ್ರಿತ) 22,865 ರೂ. ವಿಮಾ ಮೊತ್ತ ನಿಗದಿಪಡಿಸಿದ್ದು, 342 ರೂ. ವಿಮಾ ಕಂತು ಪಾವತಿಸಬೇಕಿದೆ. ಅದೇ ರೀತಿ ನೀರಾವರಿಯಲ್ಲಿ ಬೆಳೆಯುವ ಎಕರೆ ಮುಸುಕಿನ ಜೋಳಕ್ಕೆ 26,103 ರೂ. ವಿಮಾ ಮೊತ್ತ ಮತ್ತು 391 ರೂ. ವಿಮಾ ಕಂತು, ನೀರಾವರಿ ಪ್ರದೇಶದ ಎಕರೆ ರಾಗಿ ಬೆಳೆಗೆ 20,538 ರೂ. ವಿಮಾ ಮೊತ್ತ ಮತ್ತು 308 ರೂ. ವಿಮಾ ಕಂತು ನಿಗದಿ ಮಾಡಿದ್ದು, ಈ ಬೆಳೆಗಳ ವಿಮೆಗೆ ನೋಂದಣಿ ಮಾಡಲು ಡಿ.15 ಅಂತಿಮ ದಿನವಾಗಿದೆ.

ಅಂತೆಯೇ ಮಳೆಯಾಶ್ರಿತದ ಎಕರೆ ರಾಗಿ ಬೆಳೆಗೆ 17,199 ರೂ. ವಿಮಾ ಮೊತ್ತ ಮತ್ತು 258 ರೂ. ವಿಮಾ ಕಂತು, ಮಳೆಯಾಶ್ರಿತ ಎಕರೆ ಕಡಲೆ ಬೆಳೆಗೆ 14,063 ರೂ. ವಿಮಾ ಮೊತ್ತ ಮತ್ತು 210 ರೂ. ವಿಮಾ ಕಂತು, ಎಕರೆ ಹುರುಳಿ (ಮಳೆಯಾಶ್ರಿತ) ಬೆಳೆಗೆ 8,296 ರೂ. ವಿಮಾ ಮೊತ್ತ ಮತ್ತು 124 ರೂ. ವಿಮಾ ಕಂತು ನಿಗದಿ ಮಾಡಿದ್ದು, ನೋಂದಣಿಗೆ ಡಿ.1 ಕಡೆ ದಿನವಾಗಿದೆ.

ಅದೇ ರೀತಿಯಲ್ಲಿ ಬೇಸಿಗೆ ಹಂಗಾಮಿನಲ್ಲಿ ಎಕರೆ ರಾಗಿ ಬೆಳೆಗೆ (ನೀರಾವರಿ) 20,538 ರೂ. ವಿಮಾ ಮೊತ್ತ ಮತ್ತು 308 ರೂ. ವಿಮಾ ಕಂತು, ಎಕರೆ ಭತ್ತಕ್ಕೆ (ನೀರಾವರಿ) 37,738 ರೂ. ವಿಮಾ ಮೊತ್ತ ಮತ್ತು 566 ರೂ. ವಿಮಾ ಕಂತು ನಿಗದಿಪಡಿಸಿದ್ದು, ನೋಂದಣಿಗೆ 2024ರ ಫೆ.28ರವರೆಗೆ ಅವಕಾಶ ಕಲ್ಪಿಸಲಾಗಿದೆ. ಮುಂಬೈನ ಫ್ಯೂಚರ್ ಜನರಲಿ ಇನ್ಸುರೆನ್ಸ್ ಕಂಪನಿಯನ್ನು ಮೈಸೂರು ಜಿಲ್ಲೆಗೆ ಆಯ್ಕೆ ಮಾಡಲಾಗಿದೆ. ಹೆಚ್ಚಿನ ಮಾಹಿತಿ ಮತ್ತು ಸಕಾಲದಲ್ಲಿ ಬೆಳೆ ವಿಮೆಗೆ ನೋಂದಾಯಿಸಲು ರೈತರು ತಮ್ಮ ಹತ್ತಿರದ ರೈತ ಸಂಪರ್ಕ ಕೇಂದ್ರ, ಬ್ಯಾಂಕ್ ಅಥವಾ ನಾಗರಿಕ ಸೇವಾ ಕೇಂದ್ರಗಳನ್ನು ಸಂಪರ್ಕಿಸಬಹುದಾಗಿದೆ. ತಾಲೂಕುವಾರು ಮುಖ್ಯ ಬೆಳೆಗಳನ್ನು ಗ್ರಾಮ ಪಂಚಾಯಿತಿ ಮಟ್ಟಕ್ಕೆ ಹಾಗೂ ಇತರೆ ಬೆಳೆಗಳನ್ನು ಹೋಬಳಿ ಮಟ್ಟಕ್ಕೆ ಅಧಿಸೂಚಿಸಲಾಗಿದೆ.

ವಿಮೆ ನೋಂದಣಿ: ಹಿಂಗಾರು ಹಂಗಾಮಿನ ಬೆಳೆಗಳಿಗೆ ವಿಮೆ ಮಾಡಿಸುವ ಸಂಬಂಧ ಮೈಸೂರು ಜಿಲ್ಲೆಯಲ್ಲಿ ಈವರೆಗೆ ಒಟ್ಟು 700 ಅರ್ಜಿಗಳು ನೋಂದಣಿಯಾಗಿವೆ. ಹುಣಸೂರು ತಾಲೂಕಿನಲ್ಲಿ 43, ಕೆಆರ್ ನಗರದಲ್ಲಿ 6, ಮೈಸೂರಲ್ಲಿ 211, ನಂಜನಗೂಡಿನಲ್ಲಿ 4, ಪಿರಿಯಾಪಟ್ಟಣದಲ್ಲಿ 323, ಸಾಲಿಗ್ರಾಮದಲ್ಲಿ 58, ಸರಗೂರಿನಲ್ಲಿ 8 ಮತ್ತು ಟಿ.ನರಸೀಪುರ ತಾಲೂಕಿನಲ್ಲಿ 47 ಅರ್ಜಿಗಳು ಸಲ್ಲಿಕೆಯಾಗಿ ನೋಂದಣಿಯಾಗಿವೆ. ಹೆಚ್‌ಡಿ ಕೋಟೆಯಲ್ಲಿ ಸದ್ಯ ಯಾವುದೇ ನೋಂದಣಿಯಾಗಿಲ್ಲ (ಕೃಷಿ ಇಲಾಖೆ ಮಾಹಿತಿ ಪ್ರಕಾರ, ನ.22ರವರೆಗೆ). ಬೆಳೆ ನಷ್ಟ ಸರಿದೂಗಿಸಿಕೊಳ್ಳಲು ವಿಮೆ ಮಾಡಿಸಿಕೊಳ್ಳುವಂತೆ ಕೃಷಿ ಇಲಾಖೆ ವತಿಯಿಂದ ಜಿಲ್ಲೆಯ ಪ್ರತಿ ಗ್ರಾಮ ಪಂಚಾಯಿತಿ ಹಂತದಲ್ಲೂ ಕರಪತ್ರ ಹಂಚಿ ಅರಿವು ಮೂಡಿಸಲಾಗುತ್ತಿದೆ.

ಜಿಲ್ಲೆಯಲ್ಲಿ ಪ್ರಸಕ್ತ ಸಾಲಿನ ಹಿಂಗಾರಿಗೆ ಸಂಬಂಧಿಸಿದಂತೆ 57,984 ಹೆಕ್ಟೇರ್ ಪ್ರದೇಶದಲ್ಲಿ ವಿವಿಧ ಬೆಳೆಗಳನ್ನು ಬಿತ್ತನೆ ಮಾಡಲಾಗಿದ್ದು, ನಿಗದಿತ ಗುರಿಯಲ್ಲಿ ಶೇ.96ರಷ್ಟು ಸಾಧನೆ ಮಾಡಲಾಗಿದೆ ಎಂದು ಕೃಷಿ ಇಲಾಖೆ ಅಂಕಿ ಅಂಶದಲ್ಲಿ ಉಲ್ಲೇಖಿಸಲಾಗಿದೆ

ಕಾಶ್ಮೀರದಲ್ಲಿ ಭಯೋತ್ಪಾದಕರ ಗುಂಡಿನ ದಾಳಿಗೆ ಕರ್ನಾಟಕದ ಕ್ಯಾಪ್ಟನ್ ಹುತಾತ್ಮ

ಮೈಸೂರು, ನ.23(ಆರ್‌ಕೆ)–ಜಮ್ಮು ಮತ್ತು ಕಾಶ್ಮೀರದ ರಜೌರಿ ಜಿಲ್ಲೆಯಲ್ಲಿ ಬುಧವಾರ ನಡೆದ ಭಯೋತ್ಪಾದಕರ ಗುಂಡಿನ ದಾಳಿಗೆ ಇಬ್ಬರು ಅಧಿಕಾರಿಗಳೂ ಸೇರಿದಂತೆ ನಾಲ್ವರು ಯೋಧರು ಹುತಾತ್ಮರಾಗಿದ್ದಾರೆ.

ಆ ಪೈಕಿ ಮೈಸೂರು ಮೂಲದವರಾದ 63 ರಾಷ್ಟ್ರೀಯ ರೈಫಲ್ಸ್‌ನ ಕ್ಯಾಪ್ಟನ್ ಎಂ.ವಿ.ಪ್ರಾಂಜಲ್ ಅವರೂ ಸಹ ವೀರ ಮರಣವನ್ನಪ್ಪಿದ್ದಾರೆ. ಅವರು ಮಂಗಳೂರು ರೀಫೈನರಿ ಅಂಡ್ ಪೆಟ್ರೋಕೆಮಿಕಲ್ಸ್ ಲಿಮಿಟೆಡ್ (MRPL) ನಿವೃತ್ತ ವ್ಯವಸ್ಥಾಪಕ ನಿರ್ದೇಶಕ ಎಂ.ವೆಂಕಟೇಶ್ ಅವರ ಏಕೈಕ ಪುತ್ರ. ಮಂಗಳೂರಿನ ಸುರತ್ಕಲ್‌ನಲ್ಲಿರುವ ಎಂಆರ್‌ಪಿಎಲ್ ಬಳಿಯ ಡೆಲ್ಲಿ ಪಬ್ಲಿಕ್ ಸ್ಕೂಲ್‌ನಲ್ಲಿ ಎಸ್‌ಎಸ್‌ಎಲ್‌ಸಿ ವ್ಯಾಸಂಗ ಮಾಡಿದ ಪ್ರಾಂಜಲ್, ನಂತರ ದಿ ನ್ಯಾಷನಲ್ ಡಿಫೆನ್ಸ್ ಅಕಾಡೆಮಿಯಲ್ಲಿ ಇಂಜಿನಿಯರಿಂಗ್ ಪದವಿ ಗಳಿಸಿದ್ದರು.



ಕ್ಯಾಪ್ಟನ್ ಎಂ.ವಿ.ಪ್ರಾಂಜಲ್

ತಂದೆ ವೆಂಕಟೇಶ್ ಅವರು ಮೂಲತಃ ಮೈಸೂರಿನವರಾಗಿದ್ದು, ನಂತರ ಕುಟುಂಬವು ಬೆಂಗಳೂರಿಗೆ ಸ್ಥಳಾಂತರಗೊಂಡಿತ್ತು ಎಂದು ಹೇಳಲಾಗಿದೆ. ಉಳಿದಂತೆ ಅವರ ಬಗ್ಗೆ ಹೆಚ್ಚಿನ ಮಾಹಿತಿ ಲಭ್ಯವಾಗಿಲ್ಲ ಎಂದು ಮಡಿಕೇರಿ ಸೈನಿಕ ಕ್ಷೇಮಾಭಿವೃದ್ಧಿ ಮತ್ತು ರೀಸೆಟ್ಲ್‌ಮೆಂಟ್ ಬೋರ್ಡ್‌ನ ಜಂಟಿ ನಿರ್ದೇಶಕ ಬಾಲಸುಬ್ರಹ್ಮಣ್ಯಂ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಜಮ್ಮು ಮತ್ತು ಕಾಶ್ಮೀರದ ಕಾಳಕೋಟೆಯ ಗುಲಭ್‌ಗರ್ ಅರಣ್ಯ ಪ್ರದೇಶದಲ್ಲಿ ಸರ್ಚ್ ಆಪರೇಷನ್‌ನಲ್ಲಿದ್ದ ವೇಳೆ ಭಯೋತ್ಪಾದಕರು ಗುಂಡಿನ ದಾಳಿ ನಡೆಸಿದಾಗ ಕ್ಯಾಪ್ಟನ್ ಎಂ.ವಿ.ಪ್ರಾಂಜಲ್ ಸೇರಿದಂತೆ ನಾಲ್ವರು ಭಾರತೀಯ ಯೋಧರು ಹುತಾತ್ಮರಾಗಿದ್ದಾರೆ. ಭಯೋತ್ಪಾದಕರ ದಾಳಿಯಲ್ಲಿ ಗಾಯಗೊಂಡವರ ನಿಖರ ಸಂಖ್ಯೆ ಬಗ್ಗೆ ಆರ್ಮಿ ಅಧಿಕಾರಿಗಳು ಸ್ಪಷ್ಟ ಮಾಹಿತಿ ನೀಡಿಲ್ಲ. ಪ್ರಾಂಜಲ್ ಮೇಜರ್ ಆಗಿ ಮುಂಬಡ್ತಿ ಹೊಂದುವವರಿದ್ದರು. ಅವರ ಪಾರ್ಥಿವ ಶರೀರವನ್ನು ಇಂದು ಸಂಜೆಯೊಳಗಾಗಿ ಬೆಂಗಳೂರಿಗೆ ತರುವ ನಿರೀಕ್ಷೆ ಇದೆ. ನಂತರ ಸಕಲ ಮಿಲಿಟರಿ ಗೌರವಗಳೊಂದಿಗೆ ಅವರ ಅಂತ್ಯಕ್ರಿಯೆ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.

ಎಲ್ಲಾ ರೀತಿಯ ವಾಣಿಜ್ಯ ವಾಹನಗಳು ಹೆಚ್‌ಎಸ್‌ಆರ್‌ಪಿ ಅಳವಡಿಕೆಗೆ ಫೆ.17ರ ಗಡುವು

ಮೈಸೂರು, ನ.23(ಎಂಕೆ)– 2019ರ ಏ.1ಕ್ಕಿಂತ ಮೊದಲು ನೋಂದಣಿಯಾದ ಎಲ್ಲಾ ಬಗೆಯ ವಾಹನಗಳಿಗೆ (ದ್ವಿ–ಚಕ್ರ, ತ್ರಿ–ಚಕ್ರ, ಲಘು ಮೋಟಾರು ವಾಹನಗಳು, ಕಾರುಗಳು, ಮಧ್ಯಮ ಮತ್ತು ಭಾರಿ ವಾಣಿಜ್ಯ ವಾಹನಗಳು, ಟ್ರೈಲರ್, ಟ್ರಾಕ್ಟರ್ ಇತ್ಯಾದಿ) 'ಅತಿ ಸುರಕ್ಷಿತ ನೋಂದಣಿ ಫಲಕಗಳನ್ನು' (ಹೆಚ್‌ಎಸ್‌ಆರ್‌ಪಿ) ಅಳವಡಿಸುವುದು ಕಡ್ಡಾಯವಾಗಿದ್ದು, 2024ರ ಫೆ.17ರವರೆಗೆ ಕಾಲಾವಕಾಶ ನೀಡಲಾಗಿದೆ.


ಹೆಚ್‌ಎಸ್‌ಆರ್‌ಪಿ ಅಳವಡಿಕೆಗೆ https://transport/karnataka.gov.in ಅಥವಾ www.siam.in ಗೆ ಭೇಟಿ ನೀಡಿ Book HSRP ಅನ್ನು ಕ್ಲಿಕ್ ಮಾಡುವುದು. ನಂತರ ನಿಮ್ಮ ವಾಹನ ತಯಾರಕರನ್ನು ಆಯ್ಕೆ ಮಾಡಿ, ವಾಹನದ ಮೂಲ ವಿವರಗಳನ್ನು ಭರ್ತಿ ಮಾಡುವುದು. ಹೆಚ್‌ಎಸ್‌ಆರ್‌ಪಿ ಅಳವಡಿಕೆಗಾಗಿ ನಿಮ್ಮ ಅನುಕೂಲಕ್ಕೆ ತಕ್ಕಂತೆ ಡೀಲರ್ ಸ್ಥಳವನ್ನು ಆಯ್ಕೆ ಮಾಡಿ, ಹೆಚ್‌ಎಸ್‌ಆರ್‌ಪಿ ಶುಲ್ಕವನ್ನು ಆನ್‌ಲೈನ್‌ನಲ್ಲಿ ಪಾವತಿಸಬೇಕಿದೆ. ಶುಲ್ಕವನ್ನು ನಗದು ರೂಪದಲ್ಲಿ ಪಾವತಿಸುವಂತಿಲ್ಲ.



ಬಳಿಕ ವಾಹನದ ಮಾಲೀಕರ ಮೊಬೈಲ್ ಸಂಖ್ಯೆಗೆ ಒಟಿಪಿ ಬರಲಿದ್ದು, ನಿಮ್ಮ ಅನುಕೂಲಕ್ಕೆ ಅನುಗುಣವಾಗಿ ದಿನಾಂಕ ಹಾಗೂ ಸಮಯದ ಜೊತೆಗೆ ವಾಹನದ ತಯಾರಿಕ ಅಥವಾ ಡೀಲರ್ ಸಂಸ್ಥೆ ಅಥವಾ ವಾಹನ ಮಾಲೀಕರಿರುವ ಸ್ಥಳವನ್ನು ಆಯ್ಕೆ ಮಾಡುವುದು ಹೆಚ್‌ಎಸ್‌ಆರ್‌ಪಿ ಅಳವಡಿಕೆಗಿರುವ ಕಾರ್ಯ ವಿಧಾನವಾಗಿದೆ. ಹೆಚ್‌ಎಸ್‌ಆರ್‌ಪಿ ಅಳವಡಿಕೆಯಲ್ಲಿ ತೊಂದರೆಗಳಾದಲ್ಲಿ ಸಹಾಯವಾಣಿ 9449863429/9449863426ಗೆ ಸಂಪರ್ಕಿಸುವಂತೆ ಕೋರಲಾಗಿದೆ.



ಉತ್ತರ ಕ್ರಿಯಾದಿ ಭೂಶಾಂತಿ



ಶ್ರೀಮಾನ್ ಕೃಷ್ಣೇಗೌಡರು
ನಿಧನ: 14–11–2023

ಇವರು ದಿ.14–11–2023 ಮಂಗಳವಾರ ದೈವಾಧೀನರಾಗಿದ್ದು ತತ್ಸಂಬಂಧ ದಿ. 24–11–2023 ಶುಕ್ರವಾರ ಬೆ.11.30ಕ್ಕೆ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ಕಗ್ಗಲೀಪುರ ಗ್ರಾಮದ ನಮ್ಮ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ. ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತರು: ಮೃತರ ಪತ್ನಿ ಶ್ರೀಮತಿ ಟಿ.ಪದ್ಮ ಮತ್ತು ಮಕ್ಕಳು ನಾದಿನಿ ಶ್ರೀಮತಿ ನಾಗಮ್ಮ ಮತ್ತು ಮಕ್ಕಳು ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು

ಭೋವಿ ಅಧ್ಯಯನ ಪೀಠ ಸ್ಥಾಪನೆ; ಜನಾಂಗದವರಿಗೆ ಕೆಪಿಎಸ್‌ಸಿ ಸದಸ್ಯತ್ವ

ಬೆಂಗಳೂರು,ನ.23(ಕೆಎಂಶಿ)–ಭೋವಿ ಅಧ್ಯಯನ ಪೀಠ ಸ್ಥಾಪನೆ ಮತ್ತು ಸಮುದಾಯದ ಒಬ್ಬರನ್ನು ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಸದಸ್ಯರನ್ನಾಗಿ ನೇಮಕ ಮಾಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದ್ದಾರೆ. ಮೊದಲ ಬಾರಿ ಸಿಎಂ ಆದಾಗ ನೀಡಿದ ಭರವಸೆಯಂತೆ ಬೋವಿ ಅಭಿವೃದ್ಧಿ ನಿಗಮ ಸ್ಥಾಪನೆ ಮಾಡಿದೆ. ಭೋವಿ ಸಮಾಜದ ಹಿತ ಕಾಯುವ ಪಕ್ಷ ನಮ್ಮದು, ಸಮುದಾಯಕ್ಕೆ ಆರ್ಥಿಕ ಶಕ್ತಿ ನೀಡುವೆ, ಸಿದ್ದರಾಮೇಶ್ವರರ ವಚನಗಳಲ್ಲಿ ನಂಬಿಕೆ ಇಟ್ಟುಕೊಂಡಿದ್ದೇನೆ ಎಂದರು. ಬಸವಣ್ಣನವರಿಗಿಂತ ಮೊದಲು ಧರ್ಮ ಬೋಧನೆ ಜನರ ಭಾಷೆಯಲ್ಲಿ ಆಗುತ್ತಿರಲಿಲ್ಲ. ಶರಣರು ಬಂದ ಬಳಿಕ ಜನರ ಭಾಷೆಯಲ್ಲಿ ಧಾರ್ಮಿಕ ಬೋಧನೆ ಶುರುವಾಯಿತು. ಜನರಿಗಾಗಿ ಧರ್ಮ ಇರುವುದು, ಧರ್ಮಕ್ಕಾಗಿ ನಾವು ಇರುವುದಲ್ಲ ಎಂದು.

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ. ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು



ಕಾಂಗ್ರೆಸ್ ಸದಾ ದಲಿತ ಸಮುದಾಯವನ್ನು ಮತ ಬ್ಯಾಂಕ್ ಆಗಿ ಬಳಸಿಕೊಂಡಿದೆ; ಅವರಿಗೆ ಸಾಮಾಜಿಕ ನ್ಯಾಯ ಕೊಡಿಸಲೇ ಇಲ್ಲ

- ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ವಾಗ್ದಾಳಿ
- ಪಕ್ಷದ ಕಚೇರಿಯಲ್ಲಿ ಎಸ್‌ಸಿ ಮೋರ್ಚಾ ವಿಶೇಷ ಸಭೆ
- ಡಾ.ಅಂಬೇಡ್ಕರ್ ಹೆಸರಲ್ಲಿ ಮತ ಪಡೆದು ಆಡಳಿತ ನಡೆಸಿದ ಕಾಂಗ್ರೆಸ್ ದಲಿತ ಸಮುದಾಯಕ್ಕೆ ನ್ಯಾಯ ಕಲ್ಪಿಸಲಿಲ್ಲ

ಬೆಂಗಳೂರು,ನ.23(ಕೆಎಂಶಿ)– ದಲಿತ ಸಮುದಾಯವನ್ನು ಕಾಂಗ್ರೆಸ್ ಮತ ಬ್ಯಾಂಕಾಗಿ ಬಳಸಿಕೊಂಡಿದೆಯೇ ಹೊರತು ಅವರಿಗೆ ಸಾಮಾಜಿಕ ನ್ಯಾಯ ಕೊಡಿಸುವಲ್ಲಿ ವಿಫಲವಾಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದ್ದಾರೆ.

ದಲಿತ ಸಮುದಾಯಕ್ಕೆ ನ್ಯಾಯ ಕೊಡುವ ಕಳಕಳಿ, ಬದ್ಧತೆ ಯಾವತ್ತೂ ಕಾಂಗ್ರೆಸ್‌ಗೆ ಇರಲಿಲ್ಲ. ಆ ಸಮಾಜದ ಶಿಕ್ಷಿತರು ಇದನ್ನು ಸಮುದಾಯಕ್ಕೆ ಮನವರಿಕೆ ಮಾಡಿಕೊಡಬೇಕು ಎಂದರು.

ಪಕ್ಷದ ಕಚೇರಿಯಲ್ಲಿ ಎಸ್‌ಸಿ ಮೋರ್ಚಾದ ವಿಶೇಷ ಸಭೆಯಲ್ಲಿ ಮಾತನಾಡಿದ ಅವರು, ಚುನಾವಣೆ ವೇಳೆ ಡಾ.ಅಂಬೇಡ್ಕರ್ ಹೆಸರಿನಲ್ಲಿ ಮತ ಕೇಳಿ ಕಳೆದ 5 ದಶಕ ನಿರಂತರವಾಗಿ ಆಡಳಿತ ನಡೆಸಿದ ಕಾಂಗ್ರೆಸ್ ಆ ಸಮುದಾಯಕ್ಕೆ ನ್ಯಾಯವನ್ನೇ ಕಲ್ಪಿಸಿಲ್ಲ. ಕಟ್ಟಕಡೆಯ ವ್ಯಕ್ತಿಗೂ ನ್ಯಾಯ ಕೊಡುವ ಅಂತ್ಯೋದಯ ಪರಿಕಲ್ಪನೆಯನ್ನು ಬಿಜೆಪಿ ಹೊಂದಿದೆ. ದಲಿತ ಶಾಸಕ ಅಖಂಡ ಶ್ರೀನಿವಾಸಮೂರ್ತಿ ಅವರ ಮನೆಗೆ ಬೆಂಕಿ ಹಾಕಿದ್ದರೂ ಅವರಿಗೆ ನ್ಯಾಯ ಕೊಡಲಿಲ್ಲ. ಬದಲಾಗಿ ಅಲ್ಪಸಂಖ್ಯಾತರ ಮತಕ್ಕಾಗಿ ಅಖಂಡ ಅವರಿಗೆ ಟಿಕೆಟ್ ಅನ್ನೂ ನಿರಾಕರಿಸಿದರು. ಕಾಂಗ್ರೆಸ್ ಪಕ್ಷದ ನಡವಳಿಕೆ ಹೀಗಿದ್ದರೂ ಅವರನ್ನು ಯಾಕೆ ಕ್ಷಮಿಸಬೇಕು, ಕಾಂಗ್ರೆಸ್ ಸಚಿವ ಜಮೀರ್ ಅಹ್ಮದ್ ಅವರು ಮತ್ತೊಂದೆಡೆ ರಾಜ್ಯದಲ್ಲಿ ಸಮುದಾಯದ ಎಷ್ಟು ಸಚಿವರಿದ್ದೇವೆ, ಸ್ಪೀಕರ್ ಸ್ಥಾನದಲ್ಲಿ ನಮ್ಮ ಕೋಮಿನವರೇ ಕೂತಿದ್ದಾರೆ ಎಂದು ಹೇಳುತ್ತಾರೆ. ಇದು ಉದ್ಧಟತನದ ಮಾತಲ್ಲವೇ? ಇದು ಪ್ರಜಾಪ್ರಭುತ್ವ ವಿರೋಧಿ, ಸಂವಿಧಾನ ವಿರೋಧಿ, ದಲಿತ ವಿರೋಧಿಯಲ್ಲವೇ ಎಂದು ಕೇಳಿದರು.

ದಲಿತರು ಎಂದಿಗೂ ಬಿಜೆಪಿ ಬೆಂಬಲಿಸುವುದಿಲ್ಲ, ಕಾಂಗ್ರೆಸ್ಸಿಗೇ ಮತ ಕೊಡುತ್ತಾರೆ ಎಂಬುದೇ ಅವರ ದುರಹಂಕಾರಿ ನಡವಳಿಕೆಗೆ ಕಾರಣ ಎಂದು ಆಕ್ಷೇಪಿಸಿದರು. ರೈತರ ಪರ, ಬಡವರ ಪರ, ಎಲ್ಲ ಸಮುದಾಯದ ಪರವಾಗಿ ಹೋರಾಡಿದ ಯಡಿಯೂರಪ್ಪ ಅವರ ಮಗ ಎನ್ನಲು ನನಗೆ ಹೆಮ್ಮೆ ಇದೆ. ಅವರು ಯಾವತ್ತೂ ಒಂದು ಜಾತಿಗೆ ಸೀಮಿತ ಆಗಿರಲಿಲ್ಲ.



ನಾಯಕನಾಗಿ ಹೊರಹೊಮ್ಮಲು ಸ್ಥಾನ ಸಿಕ್ಕಿದರೆ ಸಾಲದು. ಅಧಿಕಾರ ಇರುತ್ತದೆ, ಅಧಿಕಾರ ಹೋಗುತ್ತದೆ. ಎಲ್ಲ ಸಮುದಾಯದವರು ಇವತ್ತೂ ಕೂಡ ಯಡಿಯೂರಪ್ಪ ಅವರನ್ನು ಯಾಕೆ ನೆನಪು ಮಾಡುತ್ತಾರೆ. ಅವರು ಎಲ್ಲ ಸಮುದಾಯದ ಪರವಾಗಿ ಕೆಲಸ ಮಾಡಿದ್ದಾರೆ ಅದಕ್ಕೆ ಎಂದರು.

ಕೇವಲ ಸಾಮಾಜಿಕ ಜಾಲತಾಣ, ಪತ್ರಿಕೆಗಳಲ್ಲಿ ಫೋಟೋ ಬಂದರೆ ಯಶಸ್ಸು ಪಡೆಯುವುದು ಅಸಾಧ್ಯ. ದಲಿತ ಸಮುದಾಯದವರ ಮಧ್ಯೆ ಕಟ್ಟೆ ಮೇಲೆ ಕುಳಿತು ಹರಟೆ ಹೊಡೆದು ಪ್ರಚಲಿತ ರಾಜ್ಯ, ರಾಜಕಾರಣದ ಕುರಿತು ಚರ್ಚೆ ಮಾಡಬೇಕು. ರಾಜ್ಯ ಸರಕಾರದ ವೈಫಲ್ಯ, ಪ್ರಧಾನಿ ನರೇಂದ್ರ ಮೋದಿ ಅವರು ಕಳೆದ 9.5 ವರ್ಷಗಳ ಆಡಳಿತದಲ್ಲಿ ಮಾಡಿದ ಕಾರ್ಯಗಳು, ವಿಶ್ರಾಂತಿ ತೆಗೆದುಕೊಳ್ಳದೆ ದೇಶದ ಅಭಿವೃದ್ಧಿಗಾಗಿ ಮಾಡಿದ ಪ್ರಯತ್ನವನ್ನು ತಿಳಿಸಬೇಕು. ಕಿಸಾನ್ ಸಮ್ಮಾನ್ ಯೋಜನೆ, ಪ್ರತಿ ಹಳ್ಳಿಗೂ, ಪ್ರತಿ ಮನೆಗೂ ವಿದ್ಯುತ್ ಸಂಪರ್ಕ, ಪ್ರತಿ ಮನೆಗೂ ಶೌಚಾಲಯ ಇರಬೇಕೆಂಬ ಅವರ ಕಾರ್ಯವೈಖರಿಯನ್ನು ತಿಳಿಸುವ ಕಾರ್ಯ ಆಗಬೇಕಿದೆ ಎಂದು ಬಿ.ವೈ. ವಿಜಯೇಂದ್ರ ಸಲಹೆ ನೀಡಿದರು.

ಯಡಿಯೂರಪ್ಪ ಅವರ ಸರಕಾರ ನೀಡಿದ ಭಾಗ್ಯಲಕ್ಷ್ಮಿ ಯೋಜನೆ ಜಾತಿಗೆ ಸೀಮಿತವಾಗಿತ್ತೇ, ಅವರ ಬೈಸಿಕಲ್ ಯೋಜನೆ ಒಂದು ಜಾತಿ, ಸಮುದಾಯಕ್ಕೆ ಸೀಮಿತವಾಗಿತ್ತೇ ಎಂದು ಕೇಳಿದ ಅವರು, ಮೋದಿ ಅವರು, ರಾಜ್ಯದ ಬಿಜೆಪಿ ಸರಕಾರದ ಸಾಧನೆ, ರಾಜ್ಯ ಸರಕಾರದ ನಡವಳಿಕೆಯನ್ನು ಜನರಿಗೆ ಮನವರಿಕೆ ಮಾಡಿಕೊಡಬೇಕು, ಇಲ್ಲವಾದರೆ, ಸಮಾಜ ನಮ್ಮಿಂದ ದೂರವೇ ಇರುತ್ತದೆ. ನಾವೆಲ್ಲ ವಿಸಿಟಿಂಗ್ ಕಾರ್ಡ್ ಜೊತೆ ಓಡಾಡುತ್ತಲೇ ಇರಬೇಕಾದೀತು ಎಂದು ಎಚ್ಚರಿಸಿದರು.

ಪ್ರಜಾಪ್ರಭುತ್ವ ಎಂದರೆ ಕೇವಲ ಬಹುಮತದ ಅಧಿಕಾರ ಅಲ್ಲ, ಪ್ರಜಾಪ್ರಭುತ್ವ ಎಂದರೆ ಸಮಾಜದಲ್ಲಿರುವ ಕಟ್ಟಕಡೆಯ ವ್ಯಕ್ತಿಗೂ ನ್ಯಾಯ ಸಿಗುವಂತೆ ಮಾಡುವುದೇ ಆಡಳಿತ ಪಕ್ಷದ ಕೆಲಸ, ಆಗ ಮಾತ್ರ ಪ್ರಜಾಪ್ರಭುತ್ವಕ್ಕೆ ನೈಜ ಅರ್ಥ ಸಿಗುತ್ತದೆ ಎಂದರು.

ಹೆಚ್ಚು–ಹೆಚ್ಚು ಯುವಕರನ್ನು ಮುಂದೆ ತನ್ನಿ, ಯುವಕರನ್ನು ಮುಂದೆ ತರುವುದರಿಂದ ತಮಗೆ ಹಿನ್ನಡೆ ಆಗುತ್ತದೆ ಎಂಬ ಭಾವನೆ ಬೇಡ, ಎಲ್ಲಾ 28 ಲೋಕಸಭಾ ಸ್ಥಾನಗಳಲ್ಲಿ ಬಿಜೆಪಿ ಗೆಲ್ಲಲು ಶ್ರಮಿಸಬೇಕಿದೆ ಎಂದು ತಿಳಿಸಿದರು.

ಕರ್ನಾಟಕ ಸರ್ಕಾರ
ಜಲ ಸಂಪನ್ಮೂಲ ಇಲಾಖೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ನಂ.1, ನೀರಾವರಿ ತನಿಖಾ ವಿಭಾಗ, ಕಾವೇರಿ ಭವನ ಸಂಕೀರ್ಣ, ಗೋಕುಲಂ, 4ನೇ ಹಂತ, ಮೈಸೂರು–570020.
ದೂರವಾಣಿ : 0821–2411420

ಟೆಂಡರ್ ಪ್ರಕಟಣೆ ಸಂಖ್ಯೆ: 06/2023–24, ದಿನಾಂಕ: 21.11.2023

ಕಾರ್ಯಪಾಲಕ ಇಂಜಿನಿಯರ್, ನಂ.1, ನೀರಾವರಿ ತನಿಖಾ ವಿಭಾಗ, ಮೈಸೂರು, ಇವರು ರಾಜ್ಯಪಾಲರು, ಕರ್ನಾಟಕ ಸರ್ಕಾರ ಇವರ ಪರವಾಗಿ ಈ ಕೆಳಕಂಡ ಕಾಮಗಾರಿಗೆ ಕಾರ್ಮಿಕ ಇಲಾಖೆಯಲ್ಲಿ ನೋಂದಾಯಿಸಿದ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಶೇಕಡವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಟೆಂಡರ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://kppp.karnataka.gov.in ಮೂಲಕ ತಮ್ಮ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬಹುದು. ಸೇವೆಯ ಹೆಸರು : ನವದೆಹಲಿಯ ಕೃಷ್ಣ/ಕಾವೇರಿ ಜಲ ಕೋಶದಲ್ಲಿ 2023–24ನೇ ಸಾಲಿಗೆ ಹೊರಗುತ್ತಿಗೆ ಆಧಾರದ ಮೇಲೆ (8 ತಿಂಗಳ ಅವಧಿಗೆ) ಮಾನವ ಸಂಪನ್ಮೂಲಗಳನ್ನು ಒದಗಿಸುವ ಕೆಲಸ **(KC-6)** (ಏಕ ಲಕೋಟೆ), ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ (ರೂ.ಗಳಲ್ಲಿ): **15,02,200/–**, ಅವಧಿ : **8 ತಿಂಗಳು**, ಟೆಂಡರ್ ಪ್ರೊಸೆಸಿಂಗ್ ಶುಲ್ಕ (ರೂ.ಗಳಲ್ಲಿ) : ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನಲ್ಲಿ ಸೂಚಿಸಿರುವಂತೆ, ಟೆಂಡರ್ ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ **ದಿ: 21.11.2023ರ ಸಂಜೆ 4.00** ಗಂಟೆಯ ನಂತರ ಪಡೆಯಬಹುದಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಬಿಡ್ ಸಲ್ಲಿಸಲು ಕೊನೆ **ದಿ: 05.12.2023, ಸಂಜೆ 4.00** ಗಂಟೆ, ಆರ್ಥಿಕ ಬಿಡ್ ತೆರೆಯುವ **ದಿ: 06.12.2023, ಸಂಜೆ 4.30** ಗಂಟೆಗೆ, ಹೆಚ್ಚಿನ ಮಾಹಿತಿಗಾಗಿ ಮೇಲ್ಕಾಣಿಸಿದ ವಿಳಾಸ ಸಂಪರ್ಕಿಸಬಹುದು.

ಸಹಿ/–
ಕಾರ್ಯಪಾಲಕ ಇಂಜಿನಿಯರ್,
ನಂ.1, ನೀರಾವರಿ ತನಿಖಾ ವಿಭಾಗ, ಮೈಸೂರು

CADA
ಕರ್ನಾಟಕ ಸರ್ಕಾರ
ಅಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರ
ಕಾವೇರಿ ಜಲಾನಯನ ಯೋಜನೆಗಳು–ಮೈಸೂರು
ಕಾರ್ಯಪಾಲಕ ಅಭಿಯಂತರರವರ ಕಛೇರಿ,
ನಂ–2 ವಿಭಾಗ, ಕಾಜಯೋ
ವಿಜಯನಗರ 1 ನೇ ಹಂತ, ಮೈಸೂರು–17
Ph: 0821-2414090 Email: eecada2mysore@gmail.com

ಟೆಂಡರ್ ಪ್ರಕಟಣೆ ಸಂಖ್ಯೆ:02/2023–24 ದಿನಾಂಕ: 09.11.2023

ಮೈಸೂರು ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಮೈಸೂರು ತಾಲ್ಲೂಕಿನ–03, ಕೆ.ಆರ್.ನಗರ ತಾಲ್ಲೂಕಿನ–02, ನಂಜನಗೂಡು ತಾಲ್ಲೂಕಿನ–01, ಹೆಚ್.ಡಿ.ಕೋಟೆ ತಾಲ್ಲೂಕಿನ–02, ಟಿ.ನರಸೀಪುರ ತಾಲ್ಲೂಕಿನ–02 ಮತ್ತು ಹುಣಸೂರು ತಾಲ್ಲೂಕಿನ–01 ಒಟ್ಟು 11 ಆಯಕಟ್ಟು ರಸ್ತೆ ಕಾಮಗಾರಿಗಳಿಗೆ ಹಾಗೂ ಮೈಸೂರು ತಾಲ್ಲೂಕಿನ–01, ಹುಣಸೂರು ತಾಲ್ಲೂಕಿನ–01 ಒಟ್ಟು 02 ಬಸಿಗಾಲುವೆ ಕಾಮಗಾರಿಗಳಿಗೆ K/W-1 & K/W-2 ರ ಪ್ರಕಾರ e-portal ಮೂಲಕ ಐಟಂವಾರು ಟೆಂಡರ್‌ಅನ್ನು ಏಕಲಕೋಟೆ ಪದ್ಧತಿಯಲ್ಲಿ ಕರೆಯಲಾಗಿದೆ. ಭಾಗವಹಿಸಲು ಇಚ್ಛಿಸುವ ಗುತ್ತಿಗೆದಾರರು ಟೆಂಡರ್‌ಗೆ ಸಂಬಂಧಿಸಿದಂತೆ ಎಲ್ಲಾ ಮಾಹಿತಿಗಳನ್ನು http://kppp.karnataka.gov.in ನಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿ: 13.11.2023 ರಿಂದ ಟೆಂಡರ್‌ದಾರರು ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿ: 28.11.2023 ಸಂಜೆ 4.00 ಗಂಟೆಯವರೆಗೆ. ಟೆಂಡರ್ ತೆರೆಯುವ ದಿ: 29.11.2023 ಸಂಜೆ 4.30 ಗಂಟೆಯ ನಂತರ.

ಸಹಿ/– ಕಾರ್ಯಪಾಲಕ ಅಭಿಯಂತರರು
DIPR/DDMYS/KSMCA/678/2023-24

ನಕ್ಕರೆ ಅದೇ ಸ್ವರ್ಗ

ಗಂಡ (ಹೆಂಡತಿಗೆ) : "ಕೆಲಸದವಳನ್ನು ಹೊರ ಹಾಕು"
ಹೆಂಡತಿ : "ಯಾಕ್ರೀ ಏನಾಯ್ತು?"
ಗಂಡ : "ಆಕೆ ಕಳ್ಳತನ ಮಾಡಿದ್ದಾಳೆ"
ಹೆಂಡತಿ : "ಏನನ್ನು?"
ಗಂಡ : ಆ ದಿನ ನಾನು–ನೀನು ಹೋಟೆಲಿಗೆ ಹೋಗಿದ್ದಾಗ ತಂದ ಜಗ್ಗು, 15 ಪ್ಲೇಟುಗಳನ್ನು!"

ಮೈಸೂರು ಮಿತ್ರ
ಶುಕ್ರವಾರ, 24 ನವೆಂಬರ್ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಸವಾಲುಗಳು ಎದುರಾದಾಗಲೇ ನೀವೆ ಕಂಡಿರದ ಯೋಗ್ಯತೆ ನಿಮ್ಮಲ್ಲಿರುವುದನ್ನು ತಿಳಿಯುವಿರಿ. – ಡೋರಾ ಅಲ್ಬರ್ಟ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಧಾನ್ಯ ಹೆಚ್ಚಿದವನಿಗೆ ಮಾನ್ಯವೂ ಹೆಚ್ಚು

ನಿಮ್ಮ ಪತ್ರಗಳು

ಬೇಲದಕುಪ್ಪೆ ಜಾತ್ರೆಯಲ್ಲಿ ಪ್ರಾಣಿಗಳಿಗೆ ತೊಂದರೆಯಾಗದಿರಲಿ

ಮಾನ್ಯರೆ,

ಬಂಡೀಪುರ ಹುಲಿ ಸಂರಕ್ಷಿತ ಅರಣ್ಯ ಪ್ರದೇಶದಲ್ಲಿರುವ ಶ್ರೀ ಬೇಲದಕುಪ್ಪೆ ಮಹದೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಕಡೆ ಕಾರ್ತಿಕದಂದು ಸುಮಾರು ಮೂರು ದಿನ ಬಹಳ ಅದ್ದೂರಿಯಾಗಿ ಜಾತ್ರೆ ಮಾಡಲು ದೇವಸ್ಥಾನದ ಸಮಿತಿ ಮತ್ತು ಸರ್ಕಾರ ನಿರ್ಧರಿಸಿದ್ದು, ಕಾಡಿನಲ್ಲಿರುವ ಪ್ರಾಣಿಗಳಿಗೆ ತೊಂದರೆಯಾಗದಂತೆ ಎಚ್ಚರವಹಿಸಬೇಕು.

ಕಾಡಿನಲ್ಲಿ ಹೆಚ್ಚು ಪ್ರಾಣಿ ಪಕ್ಷಿಗಳು ಇರುವುದರಿಂದ ದೇವಸ್ಥಾನಕ್ಕೆ ಆಗಮಿಸುವ ಭಕ್ತಾದಿಗಳು ಪ್ಲಾಸ್ಟಿಕ್ ಕವರ್, ಪ್ಲಾಸ್ಟಿಕ್ ಕವರ್‌ನಲ್ಲಿ ಕರ್ಪೂರ, ಗಂಧದಕಡ್ಡಿ ಹಾಗೂ ಇತರ ಪ್ಲಾಸ್ಟಿಕ್ ವಸ್ತುಗಳನ್ನು ತರದಂತೆ ಎಚ್ಚರವಹಿಸಬೇಕು. ಭಕ್ತಾದಿಗಳು ಪ್ಲಾಸ್ಟಿಕ್ ವಸ್ತುಗಳನ್ನು ಬಳಸಿ ಕಾಡಿನಲ್ಲೇ ಬಿಸಾಡುವುದರಿಂದ ಕಾಡಿನಲ್ಲಿರುವ ಪ್ರಾಣಿಗಳಿಗೆ ತೊಂದರೆಯಾಗುತ್ತದೆ. ಆದ್ದರಿಂದ ಅರಣ್ಯಾಧಿಕಾರಿಗಳು ಇದರ ಬಗ್ಗೆ ಹೆಚ್ಚಿನ ಗಮನಹರಿಸಿ ಭಕ್ತಾದಿಗಳು ಪ್ಲಾಸ್ಟಿಕ್ ವಸ್ತುಗಳನ್ನು ತರದೆ ಬಟ್ಟೆ ಅಥವಾ ಇತರ ಬ್ಯಾಗ್‌ಗಳಲ್ಲಿ ಪೂಜಾ ಸಾಮಗ್ರಿಗಳನ್ನು ತರಲು ಸೂಚಿಸಬೇಕು. ನಿರಾಕರಿಸಿದಲ್ಲಿ ದಂಡವನ್ನು ವಿಧಿಸಬೇಕು.

ಜಾತ್ರೆಗೆ ಖಾಸಗಿ ವಾಹನಗಳನ್ನು ನಿಷೇಧಿಸಿರುವುದರಿಂದ ಭಕ್ತಾದಿಗಳಿಗೆ ಅನುಕೂಲವಾಗುವಂತೆ ಹೆಚ್ಚಿನ ಸರ್ಕಾರಿ ಬಸ್‌ಗಳ ಸೇವೆ ಕಲ್ಪಿಸಬೇಕು. ಭಕ್ತಾದಿಗಳು ಕೂಡ ಇದರ ಬಗ್ಗೆ ಗಮನಹರಿಸಿ ಪ್ಲಾಸ್ಟಿಕ್ ವಸ್ತುಗಳನ್ನು ತರಬಾರದೆಂದು ಮನವಿ.

–ಮಹಾಂತೇಶ್ ಬಸಪ್ಪ, ಬಳ್ಳೂರು ಹುಂಡಿ, ನಂಜನಗೂಡು ತಾ.

ಆಗಬಹುದಾದ ಅನಾಹುತ ತಪ್ಪಿಸಿ



ಮಾನ್ಯರೆ,

ಮೈಸೂರಿನ ಕೆ.ಜಿ.ಕೊಪ್ಪಲಿನ ಬಳಿ ಇರುವ ಚಾಮರಾಜಪುರಂ ರೈಲ್ವೆ ನಿಲ್ದಾಣದಲ್ಲಿ ವಿದ್ಯುತ್ ಗಾಡಿಗಳ ಸಂಚಾರಕ್ಕಾಗಿ ಅಧಿಕ ವೋಲ್ಟೇಜ್‌ವುಳ್ಳ ವಿದ್ಯುತ್ ತಂತಿಗಳನ್ನು ಅಳವಡಿಸಲಾಗಿದೆ. ಆ ತಂತಿಗಳು ಹಾಗೂ ಅದಕ್ಕೆ ಜೋಡಣೆಯಾಗಿರುವ ಸಾಧನಗಳಿಂದ ಸಾರ್ವಜನಿಕರು ಹಾಗೂ ಪ್ರಯಾಣಿಕರನ್ನು ದೂರವಿಡಲು ಎಚ್ಚರಿಕೆಯ ಫಲಕವನ್ನು ಹಾಕಲಾಗಿದೆ. ಆದರೆ, ಈ ವಿದ್ಯುತ್ ತಂತಿಗಳಿಗೆ ಜೋಡಣೆಯಾಗಿರುವ ಕಬ್ಬಿಣದ ಸಲಕರಣೆಯು ಫ್ಲಾಟ್‌ಫಾರ್ಮ್‌ನ ಟೈಲ್ಸ್ ಕೆಳಗೆ ಹಾದು ಹೋಗಿದ್ದು, ಅದರ ಮೇಲಿನ ಕಾಂಕ್ರಿಟ್ ಕಿತ್ತು ಆ ಕಬ್ಬಿಣದ ಸಲಕರಣೆಯು ಹೊರಬಂದಿರುವುದರಿಂದ ಇದು ರೈಲ್ವೆ ಪ್ರಯಾಣಿಕರು ಹಾಗೂ ಸಾರ್ವಜನಿಕರಿಗೆ ಬಹಳ ಅಪಾಯಕಾರಿಯಾಗಿ ಪರಿಣಮಿಸಿರುವುದರ ಜೊತೆಗೆ ರೈಲನ್ನು ಹತ್ತುವಾಗ ಮತ್ತು ಇಳಿಯುವಾಗ ಎಡವಿ ಬಿದ್ದು ರೈಲಿನ ಹಳಿಗೆ ಆಹಾರವಾಗುವ ಸಾಧ್ಯತೆಯು ಹೆಚ್ಚಿದೆ. ಹೀಗಾಗಿ, ಸಂಬಂಧಪಟ್ಟವರು ಕಬ್ಬಿಣದ ಸಲಕರಣೆಯನ್ನು ವ್ಯವಸ್ಥಿತವಾಗಿ ದುರಸ್ತಿಗೊಳಿಸಿ ಆಗಬಹುದಾದ ಅನಾಹುತವನ್ನು ತಪ್ಪಿಸಬೇಕಿದೆ.

–ಬಿ.ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.

ಕ್ರಿಕೆಟ್ ಆಟದಲ್ಲೂ ಬೇಕಾಗಿದೆ ಮೀಸಲಾತಿ

ಮಾನ್ಯರೆ,

ಭಾರತವು ಈ ಬಾರಿ ಆಸ್ಟ್ರೇಲಿಯಾ ದೇಶದ ವಿರುದ್ಧ ವಿಶ್ವಕಪ್ ಪಂದ್ಯದಲ್ಲಿ ಹೀನಾಯ ಸೋಲನ್ನು ಅನುಭವಿಸಿರುವುದು ನಿಜಕ್ಕೂ ಭಾರತೀಯರಾದ ನಮಗೆಲ್ಲರಿಗೂ ನೋವಿನ ಸಂಗತಿ, ಜೊತೆಗೆ ಅಚ್ಚರಿ ವಿಷಯ. ಕಾರಣ ಎಲ್ಲಾ ಪಂದ್ಯಗಳಲ್ಲೂ ಗೆಲುವನ್ನು ಕಂಡ ಭಾರತ ಕ್ರಿಕೆಟ್ ತಂಡದ ಮೇಲೆ ಅಪಾರವಾದ ನಂಬಿಕೆಯನ್ನು ಇಟ್ಟು ಈ ಬಾರಿ ವಿಶ್ವಕಪ್ ನಮ್ಮದೇ ಎಂಬುದು ಭಾರತೀಯರ ದೊಡ್ಡ ಕನಸಾಗಿತ್ತು. ದುರಂತ ಈ ನಂಬಿಕೆಯನ್ನು ಭಾರತದ ಕ್ರಿಕೆಟ್ ತಂಡ ಹುಸಿ ಮಾಡಿ ಸೋಲಿಗೆ ಶರಣಾಗಿದೆ. ಈ ಅನಿರೀಕ್ಷಿತ ಸೋಲಿಗೆ ದೇಶದಾದ್ಯಂತ ಅನೇಕರು ಸಾಕಷ್ಟು ಕಾರಣಗಳನ್ನು ನೀಡಿದರು. ಅದರಲ್ಲಿ ವಿಶೇಷವಾಗಿ ಬುದ್ಧ ಬಸವ ಅಂಬೇಡ್ಕರ್ ತತ್ವ ಸಿದ್ಧಾಂತಗಳನ್ನು ಮೈಗೂಡಿಸಿಕೊಂಡು ಸದಾ ಸಾಮಾಜಿಕ ಬದಲಾವಣೆಗಾಗಿ ಹೋರಾಟ ಮಾಡುತ್ತಿರುವ ನಟ ಚೇತನ್ ಅಹಿಂಸಾ ಅವರು ಭಾರತದ ಕ್ರಿಕೆಟ್ ತಂಡ ಈ ಬಾರಿ ವಿಶ್ವಕಪ್‌ನಲ್ಲಿ ಸೋತಿರುವ ಬಗ್ಗೆ ನೀಡಿರುವ ಕಾರಣ "ಕ್ರಿಕೆಟ್‌ನಲ್ಲಿ ಮೀಸಲಾತಿ ಇದ್ದರೆ ಭಾರತದ ಕ್ರಿಕೆಟ್ ತಂಡ ಸೋಲುತ್ತಿರಲಿಲ್ಲ" ಎಂಬುದು. ಬಹುಶಃ ಇದು ಸತ್ಯ. ಏಕೆಂದರೆ ಕ್ರಿಕೆಟ್ ಆಟಗಾರರ ಹಿನ್ನೆಲೆಯನ್ನು ಗಮನಿಸಿದಾಗ ಕೆಲವೇ ವರ್ಗದ ಆಟಗಾರರು, ಶ್ರೀಮಂತರ ಮಕ್ಕಳು ಮತ್ತು ರಾಜಕಾರಣಿಗಳ ಕುಟುಂಬದವರು ಭಾರತದ ಕ್ರಿಕೆಟ್ ತಂಡದಲ್ಲಿ ಇರುವುದು ಎದ್ದು ಕಾಣುತ್ತಿದೆ. ಸಾಕಷ್ಟು ಪ್ರತಿಭಾನ್ವಿತ ಕ್ರಿಕೆಟ್ ಆಟಗಾರರು ಎಲ್ಲಾ ಸಮುದಾಯದ ವರ್ಗಗಳಲ್ಲೂ ಇದ್ದರೂ ಕೂಡ ಅವರನ್ನು ಜಾತಿ ತಾರತಮ್ಯದಿಂದ ಹೊರಗಿಟ್ಟಿರುವುದು ಶೋಚನೀಯ ಮತ್ತು ವಾಸ್ತವವಾಗಿದೆ. ಹೀಗಿರುವಾಗ ಕ್ರಿಕೆಟ್ ಆಟಗಾರರ ನೇಮಕ ಮಾಡಿಕೊಳ್ಳುವ ವಿಷಯದಲ್ಲಿ ಈ ತಾರತಮ್ಯ ಮಾಡದೇ ಭಾರತದ ಎಲ್ಲಾ ಧರ್ಮ, ಜಾತಿ ಮತ್ತು ಬುಡಕಟ್ಟು ಆದಿವಾಸಿ ಪ್ರತಿಭಾನ್ವಿತ ಕ್ರಿಕೆಟ್ ಆಟಗಾರರಿಗೆ ಅವಕಾಶ ನೀಡಿದ್ದರೆ ಇಂದು ಭಾರತ ಅತಿ ಹೆಚ್ಚು ವಿಶ್ವಕಪ್ ಗೆದ್ದ ದೇಶಗಳ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿ ಇರುವುದರ ಜೊತೆಗೆ 2023ರ ವಿಶ್ವಕಪ್ ಅನ್ನು ಸಹ ಗೆಲ್ಲುವ ಸಾಧ್ಯತೆ ಬಹಳಷ್ಟು ಇರುತ್ತಿತ್ತು. ಕೇವಲ ಒಂದೇ ವರ್ಗಕ್ಕೆ ಸೀಮಿತವಾಗದೇ ಎಲ್ಲರಿಗೂ ಅವಕಾಶ ನೀಡಿ ಮುಂದಿನ ದಿನಗಳಲ್ಲಾದರೂ ಆಸ್ಟ್ರೇಲಿಯಾ ದೇಶದಂತೆ ನಮ್ಮ ಭಾರತ ಅತಿ ಹೆಚ್ಚು ವಿಶ್ವಕಪ್ ಗೆಲ್ಲುವುದರ ಮೂಲಕ ನಮ್ಮ ದೇಶದ ಕ್ರಿಕೆಟ್‌ಗೆ ಅಂಟಿರುವ ಕಳಂಕ ದೂರವಾಗಲಿ.

–ಪವನ್ ಜಯರಾಂ, ಸಿದ್ದಯ್ಯನಪುರ, ಚಾ. ನಗರ.

ಪೌರಕಾರ್ಮಿಕರಿಗೆ ವಿದೇಶ ಪ್ರವಾಸ ಶ್ಲಾಘನೀಯ

ಮಾನ್ಯರೆ.

ಇಡೀ ದೇಶವೇ ಸ್ವಚ್ಛತೆವಾಗಿರಲು ಪ್ರಮುಖ ಕಾರಣ ಪೌರಕಾರ್ಮಿಕರು. ಸಿಂಗಾಪುರದ ಪೌರಕಾರ್ಮಿಕರ ಹಾಗೂ ನಗರವನ್ನು ಸ್ವಚ್ಛವಾಗಿಡಲು ಅಲ್ಲಿನ ಆಡಳಿತ ಅನುಸರಿಸುತ್ತಿರುವ ಕ್ರಮಗಳ ಬಗ್ಗೆ ಅಧ್ಯಯನ ನಡೆಸಲು ರಾಜ್ಯದ ವಿವಿಧ ನಗರ ಸ್ಥಳೀಯ ಸಂಸ್ಥೆ ಹಾಗೂ ಮೈಸೂರು ಮಹಾ ನಗರ ಪಾಲಿಕೆಯ ಒಂಬತ್ತು ಪೌರಕಾರ್ಮಿಕರು ಒಳಗೊಂಡಂತೆ ಸಿಂಗಾಪುರಕ್ಕೆ ಸಫಾಯಿ ಕರ್ಮಚಾರಿ ಆಯೋಗ ಕಳುಹಿಸಿ ಕೊಟ್ಟಿರುವುದು ಶ್ಲಾಘನೀಯ.

–ಪಿ ಸಿ ಕಂಗಾಣಿಸೋಮು, ಕ್ಯಾತಮಾರನಹಳ್ಳಿ, ಮೈಸೂರು



ರಾಘವೇಂದ್ರ ಸಿ.ಎಸ್.
ಉಪನ್ಯಾಸಕರು,
ರಾಮಕೃಷ್ಣ ವಿದ್ಯಾಶಾಲೆ,
ಮೈಸೂರು. ಮೊ.: 9036389640

ಈ ಜೀವನ...

'ಅಕ್ಕ'ನ ನೀತಿ ಅಕ್ಷರಶಃ ನಿಜ ಸಂಗತಿ...!



ಅಕ್ಕಮಹಾದೇವಿ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಒಂದು ಮರೆಯಲಾಗದ ಮಾಣಿಕ್ಯದೀಪ್ತಿಯಂತೆ ಪ್ರಸಿದ್ಧಳಾದವಳು. ಕನ್ನಡ ಸಾಹಿತ್ಯದ ಮೊಟ್ಟ ಮೊದಲ ಕವಯತ್ರಿಯಾಗಿ ಮಾತ್ರವಲ್ಲದೆ ಆದರ್ಶವನೀವ ತನ್ನ ವಚನಗಳ ಮೂಲಕ ಅಂದಿನಿಂದ ಇಂದಿನವರೆಗೂ ಅನೇಕರಿಗೆ ಸ್ಫೂರ್ತಿಯ ಚಿಲುಮೆಯಾಗಿದ್ದಾಳೆ.

ಹರಿಹರನ ಪ್ರಕಾರ ಅಕ್ಕಮಹಾದೇವಿ ಅಪ್ರತಿಮ ಸುಂದರಿ. ಬಾಲ್ಯದಿಂದಲೇ ಶಿವನ ಮೇಲೆ ಅಪಾರವಾದ ಪ್ರೇಮವನ್ನು ಹೊಂದಿದ್ದವಳು. ಯವ್ವನಾವಸ್ಥೆಗೆ ಬಂದಾಗ ಶಿವನನ್ನೇ ಪತಿಯೆಂದು–ಇಷ್ಟದೈವವೆಂದು ಸ್ವೀಕರಿಸಿದವಳು. ಇಂತಹ ಮಹಾದೇವಿ ಕೌಶಿಕ ಮಹಾರಾಜನ ಕಣ್ಣಿಗೆ ಬಿದ್ದಳು. ಕೌಶಿಕ ಮಹಾರಾಜ ಅಕ್ಕಮಹಾದೇವಿಯ ಸೌಂದರ್ಯಕ್ಕೆ ಮರುಳಾಗಿ ಅವಳನ್ನು ಮದುವೆಯಾಗಬೇಕು ಎಂದು ಬಯಸಿದ. ಮಹಾದೇವಿ ಇದಕ್ಕೆ ಒಪ್ಪದಿದ್ದರೂ ರಾಜನ ಮಾತನ್ನು ವಿರೋಧಿಸಿದರೆ ತನ್ನ ಪೋಷಕರಿಗೆ ಒದಗಬಹುದಾದ ಅಪಾಯವನ್ನು ಅರಿತು ಅನಿವಾರ್ಯವಾಗಿ ವಿಧಿಯಿಲ್ಲದೆ ಆದರೆ ಷರತ್ತಿನೊಂದಿಗೆ ಕೌಶಿಕನೊಡನೆ ಮದುವೆ ಕಾರ್ಯ ಜರುಗುತ್ತದೆ. ಮುಂದೆ ಕೌಶಿಕ ಮಹಾರಾಜ ಮೂರು ತಪ್ಪುಗಳನ್ನು ಮಾಡಿದ ನಂತರ ಅವನನ್ನು ಬಿಟ್ಟು, ಅರಮನೆಯನ್ನು ತ್ಯಜಿಸಿ, ಹುಟ್ಟುಡುಗೆಯಲ್ಲಿಯೇ ತನ್ನ ಕೇಶ ರಾಶಿಯನ್ನು ಸೀರೆಯನ್ನಾಗಿಸಿಕೊಂಡು ಕಲ್ಯಾಣಕ್ಕೆ ಹೊರಟವಳು. ಕಲ್ಯಾಣದಲ್ಲಿ ಬಸವಣ್ಣನ ಆಶ್ರಯದಲ್ಲಿ ಅನುಭವ ಮಂಟಪದಲ್ಲಿ ತನ್ನ ವಚನಗಳ ಮೂಲಕ ಸಮಾಜವನ್ನು ತಿದ್ದುವ, ಜೊತೆಗೆ ತನ್ನ ಆತ್ಮವಿಮರ್ಶೆ ಮಾಡಿಕೊಳ್ಳುವ ಮೂಲಕ ಮಹಾದೇವಿ ಎಲ್ಲರಿಗೂ ಅಕ್ಕಮಹಾದೇವಿಯಾಗಿ ಪ್ರಖ್ಯಾತಿ ಹೊಂದಿದಳು. ಅಕ್ಕಮಹಾದೇವಿಯ ವಚನಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಅದರಲ್ಲಿ ಸಮಾಜಕ್ಕೆ ನೀತಿಯನ್ನು ಬೋಧಿಸುವ ಜೊತೆಗೆ ತನ್ನ ಮನಸ್ಸಿನ ಹೊಯ್ದಾಟಗಳನ್ನು ವ್ಯಕ್ತಪಡಿಸುವಂತಹ ವಚನಗಳನ್ನು ಗುರುತಿಸಬಹುದು.

ಬೆಟ್ಟದ ಮೇಲೊಂದು ಮನೆಯ ಮಾಡಿ
ಮೃಗಗಳಿಗಂಜಿದಡೆಂತಯ್ಯಾ,
ಸಮುದ್ರದ ತಡಿಯಲೊಂದು ಮನೆಯ ಮಾಡಿ
ನೊರೆತೆರೆಗಳಿಗಂಜಿದಡೆಂತಯ್ಯಾ,
ಸಂತೆಯೊಳಗೊಂದು ಮನೆಯ ಮಾಡಿ ಶಬ್ದಕ್ಕೆ
ನಾಚಿದಡೆಂತಯ್ಯಾ, ಚೆನ್ನಮಲ್ಲಿಕಾರ್ಜುನದೇವ ಕೇಳಯ್ಯಾ
ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿನಿಂದೆಗಳು
ಬಂದಡೆಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು.

ಈ ವಚನದಲ್ಲಿ ಅಕ್ಕಮಹಾದೇವಿಯು ಈ ಧರೆಯಲ್ಲಿ ಜನ್ಮ ತಾಳಿದ ನಂತರ ಕಷ್ಟ–ನಷ್ಟಗಳು, ನೋವು ಅವಮಾನಗಳನ್ನು ಎದುರಿಸಲೇಬೇಕು. ಅವುಗಳಿಗೆ ಹೆದರಿ ಹಿಮ್ಮೆಟ್ಟುವುದು ಸರಿಯಲ್ಲ ಎಂಬುದನ್ನು ಮಾರ್ಮಿಕವಾಗಿ ತಿಳಿಸುತ್ತಾಳೆ.

ಪ್ರಸ್ತುತ ದಿನಗಳಲ್ಲಿ ಒಂದು ಸಣ್ಣ ಮಾತನ್ನು ಬೇರೆಯವರಿಂದ ಕೇಳಲು ಇಷ್ಟಪಡದ ನಮ್ಮ ಯುವಜನಾಂಗಕ್ಕೆ ನೀತಿಯನ್ನು ಹೇಳಿದಂತಿದೆ ಈ ವಚನ. ಮನುಷ್ಯನಾಗಿ ಹುಟ್ಟಿ ಬಂದ ಮೇಲೆ ಏನೇ ಅವಮಾನ–ನಿಂದೆಗಳು ಬಂದರೂ, ಒಂದು ವೇಳೆ ಹೊಗಳಿಕೆಗಳು ಬಂದರೂ ಎರಡನ್ನೂ ಸಮಾನವಾಗಿ ಸ್ವೀಕರಿಸುವ ಗುಣ ನಮ್ಮದಾಗಬೇಕೆಂಬ ನೀತಿ ಈ ವಚನದಲ್ಲಿದೆ. ಹೊಗಳಿಕೆಗೆ ಹಿಗ್ಗದೇ, ತೆಗಳಿಕೆಗೆ ಕುಗ್ಗದೆ ಎರಡನ್ನೂ ಸಮಾನ ಚಿತ್ತವಾಗಿ ಸ್ವೀಕರಿಸಿದರೆ ಬದುಕು ಸುಂದರವಾಗಿರುತ್ತದೆ.

ತಮ್ಮ ಮುಂದಿನ ಭವಿಷ್ಯವನ್ನು ನೆನೆದು ಆತಂಕ ಪಡುವಂತಹ ಅಥವಾ ಸಣ್ಣಪುಟ್ಟ ನಕಾರಾತ್ಮಕ ಚಿಂತನೆಗಳಿಂದ ಹತಾಶೆಗೆ ಒಳಗಾಗುವಂತಹ ಜನರಿಗೆ ಸ್ಫೂರ್ತಿಯನ್ನು ನೀಡಬಲ್ಲ ವಚನ ಇದಾಗಿದೆ ಎಂದು ಹೇಳಬಹುದು.

ಹಸಿವಾದೊಡೆ ಭಿಕ್ಷಾನ್ನಗಳುಂಟು,
ತೃಷೆಯಾದೊಡೆ ಕೆರೆ ಹಳ್ಳ ಬಾವಿಗಳುಂಟು,
ಶಯನಕ್ಕೆ ಹಾಳು ದೇಗುಲಗಳುಂಟು,
ಚೆನ್ನಮಲ್ಲಿಕಾರ್ಜುನಯ್ಯ ಆತ್ಮಸಂಗಾತಕ್ಕೆ ನೀನೆನಗುಂಟು.

ಒಬ್ಬ ವ್ಯಕ್ತಿಯಾಗಿ ಶಕ್ತಿಯಾಗಿ ರೂಪಿತವಾಗಿ ಅವರಿಂದ ದೊರೆಯಬಹುದಾದ ಕಾಣ್ಕೆ ಬದುಕನ್ನು ಹೀಗೂ ಬದುಕಬಹುದು ಎಂಬ ಸಂದೇಶ. ಅಂತೆಯೇ ಮಹಿಳೆಯಾಗಿ ಪುರುಷರ ಸಹಾಯವಿಲ್ಲದೆ ಹೇಗೆ ಬದುಕಬಲ್ಲಳು ಎಂಬುದಕ್ಕೆ ಅಕ್ಕಮಹಾದೇವಿಯ ಜೀವನ ಸಂಗಾತವೇ ಉದಾಹರಣೆಯಂತಿದೆ. ಹಸಿವಾದರೆ ಹಸಿವನ್ನು ನೀಗಿಸಲು ಭಿಕ್ಷಾನ್ನಗಳುಂಟು, ತೃಷೆ (ಬಾಯಾರಿಕೆ)ಯಾದರೆ ದಾಹವನ್ನು ನೀಗಿಸಲು ಕೆರೆ ಹಳ್ಳ ಬಾವಿಗಳು ಇರುವುದು, ಶಯನಕ್ಕೆ (ಮಲಗಲು) ಪಾಳು ಬಿದ್ದ ದೇವಾಲಯಗಳು ಉಂಟು, ನನ್ನ ಆತ್ಮಸಂಗಾತಕ್ಕೆ ಚನ್ನಮಲ್ಲಿಕಾರ್ಜುನ ಉಂಟು ಹೀಗಿರುವಾಗ ತನಗೆ ಯಾವುದೇ ಭಯವಿಲ್ಲವೆಂದು ಏಕಾಂಗಿಯಾಗಿ ಶಿವನ ಧ್ಯಾನದಲ್ಲಿ ತಾನಿರಬಲ್ಲೆ ಎಂಬುದನ್ನು ಈ ವಚನ ಸಾರಿ ಹೇಳುವಂತಿದೆ.

ಮಹಿಳೆ ಮನಸ್ಸು ಮಾಡಿದರೆ ಅಸಾಧ್ಯವಾದ ಕಾರ್ಯವನ್ನು ಸಾಧಿಸಬಲ್ಲಳು ಎಂಬುದನ್ನು ಅಕ್ಕಮಹಾದೇವಿಯ ಈ ವಚನದ ಮೂಲಕ ತಿಳಿಯಬಹುದು. ಯಾವುದಕ್ಕೂ ಭಯಪಡದೆ ಬದುಕು ಬಂದಂತೆ ಸ್ವೀಕರಿಸುವ ಗುಣ ಛಲ ಹಠ ಇದ್ದರೆ ಏನು ಬೇಕಾದರೂ ಸಾಧಿಸಬಹುದು ಎಂಬುದನ್ನು ಈ ವಚನ ಇಂದಿನ ಯುವ ಜನಾಂಗಕ್ಕೆ ತಿಳಿಸಿದಂತಿದೆ.

ಬಿಟ್ಟೆನೆಂದಡೆ ಬಿಡದೀ ಮಾಯೆ, ಬಿಡದಿದ್ದಡೆ ಬೆಂಬತ್ತಿತ್ತು ಮಾಯೆ.
ಯೋಗಿಗೆ ಯೋಗಿಣಿಯಾಯಿತ್ತು ಮಾಯೆ, ಸವಣಂಗೆ
ಸವಣಿಯಾಯಿತ್ತು ಮಾಯೆ.
ಯತಿಗೆ ಪರಾಕಿಯಾಯಿತ್ತು ಮಾಯೆ. ನಿನ್ನ ಮಾಯೆಗೆ
ನಾನಂಜುವಳಲ್ಲ, ಚೆನ್ನಮಲ್ಲಿಕಾರ್ಜುನದೇವಾ ನಿಮ್ಮಾಣೆ.

ನಿರ್ದಿಷ್ಟವಾದ ಗುರಿಯನ್ನು ಹೊಂದಿರುವವರಿಗೆ ಗುರಿಯೆಡೆಗೆ ಸಾಗುವ ದಾರಿಯಲ್ಲಿ ಬರುವ ಅಡೆತಡೆಗಳು ಯಾವುದೇ ರೀತಿಯ ಸಮಸ್ಯೆಯನ್ನು ಉಂಟುಮಾಡಲಾರದು ಹಾಗೆಯೇ ದೃಢವಾದ ಚಿತ್ತವನ್ನು ಹೊಂದಿದವರಿಗೆ ಈ ಮಾಯೆಯೆಂಬ ಅಗೋಚರ ಶಕ್ತಿ ಯಾವುದೇ ತೊಂದರೆಯನ್ನು ನೀಡಲಾರದು ಎಂಬುದನ್ನು ಅಕ್ಕಮಹಾದೇವಿಯ ಈ ವಚನದ ಮೂಲಕ ತಿಳಿಯಬಹುದು ನಮ್ಮ ಮನಸ್ಸು ದೃಢವಾಗಿದ್ದರೆ ಮಾಯೆ ಯಾವುದೇ ರೂಪದಲ್ಲೂ ಬಂದರು ಅದರ ಬಲೆಗೆ ಬೀಳುವ ಅನಿವಾರ್ಯತೆಯಾಗಲೀ, ಅಗತ್ಯವಾಗಲೀ ಸಂಭವ ಬರಲಾರದು ಎಂಬುದನ್ನು ಈ ವಚನ ಪರೋಕ್ಷವಾಗಿ ತಿಳಿಸಿದಂತಿದೆ. ವಚನ 12ನೇ ಶತಮಾನದಾದರೂ ಅದರಲ್ಲಿನ ಸತ್ವ ಇಂದಿಗೂ ಪ್ರಸ್ತುತವಾಗಬಲ್ಲದು.

ಸಂಗದಿಂದಲ್ಲದೆ ಅಗ್ನಿ ಹುಟ್ಟದು, ಸಂಗದಿಂದಲ್ಲದೆ ಬೀಜ
ಮೊಳೆದೋರದು
ಸಂಗದಿಂದಲ್ಲದೆ ಹೂವಾಗದು, ಸಂಗದಿಂದಲ್ಲದೆ
ಸರ್ವಸುಖದೋರದು,
ಚೆನ್ನಮಲ್ಲಿಕಾರ್ಜುನಯ್ಯಾ, ನಿಮ್ಮ ಮಹಾನುಭಾವಿಗಳ
ಸಂಗದಿಂದಲಾನು ಪರಮಸುಖಿಯಾದೆನಯ್ಯಾ.

ಬದುಕಿನಲ್ಲಿ ಪರಸ್ಪರ ಸಂಗಗಳಿಲ್ಲದೇ ಯಾವುದೇ ಕೆಲಸ ನಡೆಯಲಾರದು ಎಂಬುದನ್ನು ಈ ವಚನ ತಿಳಿಸುತ್ತದೆ. ಅಗ್ನಿ ಹುಟ್ಟಲು ಎರಡು ಕಲ್ಲುಗಳ ಸಂಗ ಹೇಗೆ ಬೇಕೋ ಹಾಗೆಯೇ ಬೀಜವು ಮೊಳಕೆಯೊಡೆದು ಗಿಡವಾಗಿ ಮರವಾಗಿ ಬೆಳೆಯಲು ಸಂಗವು ಕೂಡ ಅಗತ್ಯವಾಗಿದೆ. ಏಕೆಂದರೆ ಕೇವಲ ಬೀಜದಿಂದ ಮರವಾಗಲು ಸಾಧ್ಯವಿಲ್ಲ. ಆ ಬೀಜಕ್ಕೆ ಮಣ್ಣಿನ ಸಂಗಬೇಕು ಮಣ್ಣಿನ ಸಂಘ ದೊರೆತು ಬೀಜ ಮೊಳಕೆವೊಡೆದು, ಗಿಡವಾಗಿ ಮರವಾಗಿ ಬೆಳೆದು, ದಣಿದು ಬಂದವರಿಗೆ ನೆರಳನ್ನು ನೀಡುವ ಹಸಿದು ಬಂದವರಿಗೆ ಹಣ್ಣು, ಕಾಯನ್ನು ನೀಡುವ ಕೆಲಸ ಮಾಡಬಲ್ಲದು. ಹಾಗೆಯೇ ನಿಮ್ಮ ಶರಣರ ಸಂಘದಿಂದ ನಾನು ಪರಮಸುಖಿಗಿರುವೆ ಎಂದು ಅಕ್ಕಮಹಾದೇವಿ ಈ ವಚನದಲ್ಲಿ ಹೇಳಿದ್ದಾರೆ.

ಇದನ್ನು ಪ್ರಸ್ತುತ ಕಾಲಕ್ಕೂ ಅನ್ವಯಿಸಿ ನೋಡುವುದಾದರೆ ಒಬ್ಬ ವ್ಯಕ್ತಿ ಮಾಡಿಕೊಳ್ಳಬೇಕಾದ ಸಹವಾಸವನ್ನು ಈ ವಚನ ತಿಳಿಸುತ್ತದೆ ಸಜ್ಜನರೊಂದಿಗೆ ಬೆರೆತರೆ ಸಜ್ಜನರಾಗಿ ನಮ್ಮ ವ್ಯಕ್ತಿತ್ವವನ್ನು ಬದಲಿಸಿಕೊಳ್ಳಬಹುದು. ಅದೇ ದುರ್ಜನರ ಸಹವಾಸವನ್ನು ಮಾಡಿದರೆ ನಮ್ಮ ವ್ಯಕ್ತಿತ್ವವು ಕೊಳೆತು ನಾರುವ ನಾತದ ವಾಸನೆಯ ಆಗರವಾಗುತ್ತದೆ. ಇದನ್ನು ಒಂದು ಉದಾಹರಣೆಯ ಮೂಲಕ ಹೇಳುವುದಾದರೆ ಒಂದು ಹಂಡೆ ಹಾಲಿಗೆ ಸ್ವಲ್ಪ ನಿಂಬೆಹಣ್ಣಿನ ಹುಳಿಯನ್ನು ಹಿಂಡಿದರೆ ಇಡೀ ಹಂಡೆಯ ಹಾಲು ಒಡೆದು ಹಾಳಾಗುತ್ತದೆ. ಅದೇ ರೀತಿ ಒಂದು ಹಂಡೆಯ ವಿಷಕ್ಕೆ ಒಂದು ಲೋಟ ಹಾಲನ್ನು ಸೇರಿಸಿದರೆ ಆ ಹಾಲು ಕೂಡ ವಿಷವಾಗುತ್ತದೆ ವಿನಹಃ ಹಾಲಾಗಲಾರದು. ಅಂದರೆ ನಾವು ಮಾಡುವ ಸಹವಾಸ ನಮ್ಮ ವ್ಯಕ್ತಿತ್ವವನ್ನು ಯಾವ ರೀತಿ ರೂಪುಗೊಳ್ಳಲು ಸಹಾಯ ಮಾಡುತ್ತದೆ ಎಂಬ ವಿಚಾರವನ್ನು ಈ ವಚನ ತಿಳಿಸಿದಂತಿದೆ. ಒಳ್ಳೆಯವರ ಸಹವಾಸವನ್ನು ಮಾಡಿದರೆ ಒಳ್ಳೆಯವರಾಗಿ ಕೆಟ್ಟವರ ಸಹವಾಸವನ್ನು ಮಾಡಿದರೆ ಕೆಟ್ಟವರಾಗಿ ರೂಪುಗೊಳ್ಳುತ್ತೇವೆ ಆದ್ದರಿಂದ ನಾವು ಮಾಡುವ ಸಂಗ ಅಥವಾ ಸಹವಾಸ ಉತ್ತಮವಾಗಿರುವಂತೆ ನೋಡಿಕೊಳ್ಳುವುದು ನಮ್ಮ ಕರ್ತವ್ಯ ಎಂಬುದನ್ನು ಈ ವಚನ ತಿಳಿಸುತ್ತದೆ. ವಚನ 12ನೇ ಶತಮಾನದಲ್ಲಿ ರಚಿತವಾಗಿದ್ದರೂ ಕೂಡ 21ನೇ ಶತಮಾನಕ್ಕೂ ಕೂಡ ಅನ್ವಯವಾಗಬಲ್ಲದು. ದುರ್ಗಸಿಂಹನ ಪಂಚತಂತ್ರದಲ್ಲಿ ಬರುವ ಎರಡು ಗಿಣಿಗಳ ಕಥೆಯೂ ಕೂಡ ವ್ಯಕ್ತಿತ್ವ ನಿರ್ಮಾಣದಲ್ಲಿ ಪರಿಸರದ ಪ್ರಾಮುಖ್ಯತೆಯನ್ನು ತಿಳಿಸುತ್ತದೆ.

ಲೋಕದ ಚೇಷ್ಟೆಗೆ ರವಿ ಬೀಜವಾದಂತೆ,
ಕರಣಂಗಳ ಚೇಷ್ಟೆಗೆ ಮನವೇ ಬೀಜ,
ಎನಗುಳ್ಳದೊಂದು ಮನ, ಆ ಮನ ನಿಮ್ಮಲ್ಲಿ ಸಿಲುಕಿದ ಬಳಿಕ
ಎನಗೆ ಭವವುಂಟೆ ಚೆನ್ನಮಲ್ಲಿಕಾರ್ಜುನಾ?

ಈ ವಚನದಲ್ಲಿ ಅಕ್ಕಮಹಾದೇವಿಗೆ ಶಿವನ ಮೇಲಿರುವ ಭಕ್ತಿ, ಅದರ ಭಾವ ತೀವ್ರತೆಯು ವ್ಯಕ್ತವಾಗುತ್ತಿದೆ. ಲೋಕದ ಚಟುವಟಿಕೆಗಳಿಗೆ ಸೂರ್ಯ ಹೇಗೆ ಕಾರಣನಾಗುತ್ತಾನೋ ಹಾಗೆಯೇ ಮನಸ್ಸಿನಲ್ಲಿ ಉದ್ಭವವಾಗುವ ಚೇಷ್ಟೆಗಳಿಗೆ ಮನವೇ ಕಾರಣವಾಗಿರುತ್ತದೆ, ನನ್ನಲ್ಲಿಯೂ ಒಂದು ಮನಸ್ಸು ಇರುವುದು. ಆದರೆ ಆ ಮನಸ್ಸು ನಿಮ್ಮಲ್ಲಿ ಸೇರಿದ ಬಳಿಕ ನನಗೆ ಈ ಕ್ಷಣಿಕವಾದ ಲೌಕಿಕ ಬಂಧನದ ಭವವುಂಟೇ ಎಂದು ಪ್ರಶ್ನಿಸುವ ಮೂಲಕ ತನ್ನ ಮನಸ್ಸು ಶಿವನಲ್ಲಿ ಐಕ್ಯವಾಗಿರುವುದನ್ನು ಅಕ್ಕಮಹಾದೇವಿ ತಿಳಿಸಿದ್ದಾಳೆ.

ನಿರ್ದಿಷ್ಟವಾದ ಗುರಿಯನ್ನು ಹೊಂದಿದವರಿಗೆ ಆ ದಾರಿಯಲ್ಲಿ ಸಾಗುವಾಗ ಎದುರಾಗುವ ಅಡೆತಡೆಗಳು ಸಮಸ್ಯೆಯನ್ನು ಉಂಟುಮಾಡಲಾರದು. ಗುರಿಯ ತಲುಪುವುದೊಂದೇ ಅವರ ಉದ್ದೇಶವಾಗಿರುತ್ತದೆ. ಚಂಚಲತೆಯನ್ನು ಉಂಟುಮಾಡುವ ಮನಸನ್ನು ನಿಯಂತ್ರಿಸುವ ಮೂಲಕ ನಮ್ಮ ದಾರಿಯೆಡೆಗೆ ಸಾಗುವ ಮಾರ್ಗವನ್ನು ತೋರಿಸುವಂತಹ ಕೆಲಸವನ್ನು ಈ ವಚನ ಮಾಡುತ್ತದೆ. ಅಕ್ಕಮಹಾದೇವಿಯ ಮನಸ್ಸು ಕ್ಷಣಿಕ ಸುಖಗಳಿಗೆ ಮಾರುಹೋಗುವದಂತದ್ದಲ್ಲ, ಅದು ಶಾಶ್ವತವಾದ ಸುಖಕ್ಕೆ ಹಂಬಲಿಸುವಂತದ್ದು. ಅದನ್ನೇ ಅಕ್ಕಮಹಾದೇವಿ ನನ್ನ ಮನ ನಿಮ್ಮಲ್ಲಿ ಸಿಲುಕಿದ ಬಳಿಕ ನನಗೆ ಭವವಿಲ್ಲ ಎಂದು ದೃಢವಾಗಿ ತಿಳಿಸಿದ್ದಾರೆ.

ಇಹಕ್ಕೊಬ್ಬ ಗಂಡನೆ ಪರಕ್ಕೊಬ್ಬ ಗಂಡನೆ?
ಲೌಕಿಕಕ್ಕೊಬ್ಬ ಗಂಡನೆ ಪಾರಮಾರ್ಥಕ್ಕೊಬ್ಬ ಗಂಡನೆ?
ಎನ್ನ ಗಂಡ ಚೆನ್ನಮಲ್ಲಿಕಾರ್ಜುನದೇವರಲ್ಲದೆ
ಮಿಕ್ಕಿನ ಗಂಡರೆಲ್ಲ ಮುಗಿಲಮರೆಯ ಬೊಂಬೆಯಂತೆ

ಈ ವಚನದಲ್ಲಿ ತನ್ನ ಪತಿ ಆ ಶಿವನೇ ಹೊರತು ಬೇರೆ ಯಾರು ಅಲ್ಲ ಎಂಬುದನ್ನು ಸ್ಪಷ್ಟವಾಗಿ ತಿಳಿಸಿದ್ದಾಳೆ. ನನ್ನ ಗಂಡ ಚೆನ್ನಮಲ್ಲಿಕಾರ್ಜುನ ದೇವರಲ್ಲದೆ ಉಳಿದವರಲ್ಲ ಎನ್ನುವ ಮೂಲಕ ಅಲೌಕಿಕ ಪತಿಯನ್ನೇ ತನ್ನ ನಿಜವಾದ ಪತಿಯೆಂದು ದೃಢಪಡಿಸಿದ್ದಾಳೆ ಶಿವನನ್ನು ಹೊರತುಪಡಿಸಿ ಉಳಿದವರು ಯಾರು ಕೂಡ ತನ್ನ ಗಂಡನಾಗಲು ಸಾಧ್ಯವಾಗಲಾರದೆಂಬ ಅಕ್ಕನ ಈ ದೃಢ ನಿಲುವು ಯಾವುದೇ ಸಂದರ್ಭದಲ್ಲಿಯೂ ಬದಲಾಗದು ಎಂಬುದನ್ನು ಖಚಿತಪಡಿಸುತ್ತದೆ. ಅಕ್ಕಮಹಾದೇವಿಯ ಜೀವನದ ಪ್ರಮುಖ ತತ್ವವನ್ನು ತಿಳಿಸುವ ವಚನ ಇದಾಗಿದೆ ಅವಳಿಗೆ ಶಿವನೇ ವಿನಃ ಮತ್ತೊಂದು ಜೀವನವಿಲ್ಲ, ಶಿವನೇ ಎಲ್ಲಾ ಎಂಬುದನ್ನು ಈ ವಚನ ಮತ್ತೆ ಮತ್ತೆ ದೃಢಪಡಿಸುತ್ತದೆ.

ಚಿಲಿಮಿಲಿ ಎಂದು ಓದುವ ಗಿಳಿಗಳಿರಾ, ನೀವು ಕಾಣಿರೆ, ನೀವು ಕಾಣಿರೆ, ಸರವೆತ್ತಿ ಪಾಡುವ ಕೋಗಿಲೆಗಳಿರಾ, ನೀವು ಕಾಣಿರೆ, ನೀವು ಕಾಣಿರೆ, ಎರಗಿ ಬಂದಾಡುವ ದುಂಬಿಗಳಿರಾ, ನೀವು ಕಾಣಿರೆ, ನೀವು ಕಾಣಿರೆ. ಕೊಳನತಡಿಯೊಳಾಡುವ ಹಂಸಗಳಿರಾ, ನೀವು ಕಾಣಿರೆ, ನೀವು ಕಾಣಿರೆ. ಗಿರಿ ಗಹ್ವರದೊಳಗಾಡುವ ನವಿಲುಗಳಿರಾ, ನೀವು ಕಾಣಿರೆ, ನೀವು ಕಾಣಿರೆ. ಚೆನ್ನಮಲ್ಲಿಕಾರ್ಜುನನೆಲ್ಲಿದ್ದಹನೆಂದು ಹೇಳಿರೆ

ಈ ವಚನ ಶಿವನ ಮೇಲಿರುವ ಅವಳ ಅಗಾಧವಾದ ಪ್ರೇಮವನ್ನು ಪ್ರಕಟಿಸುವಂತದ್ದಾಗಿದೆ. ಅವಳು ಸ್ವೀಕರಿಸಿರುವ ಪತಿ ಲೌಕಿಕದಲ್ಲಿ ಸಿಗುವವನಲ್ಲ, ಅಲೌಕಿಕದ ಪತಿಯನ್ನೇ ಹಂಬಲಿಸಿ ಹುಡುಕುವ ಅವಳ ಉತ್ಕಟವಾದ ಪ್ರೇಮ ಇಲ್ಲಿ ಅಭಿವ್ಯಕ್ತವಾಗಿರುವುದನ್ನು ಗಮನಿಸಬಹುದು.

ಗಿಳಿಗಳನ್ನು, ಕೋಗಿಲೆಗಳನ್ನು, ತುಂಬಿಗಳನ್ನು, ಹಂಸಗಳನ್ನು, ನವಿಲುಗಳನ್ನು ಕುರಿತು ಪ್ರಶ್ನಿಸುವ ಅಕ್ಕಮಹಾದೇವಿ ತನ್ನ ಒಡೆಯನಾದ ಚನ್ನಮಲ್ಲಿಕಾರ್ಜುನನ್ನು ಕಂಡರೆ ತಿಳಿಸಿ ಎನ್ನುವ ಮೂಲಕ ಆ ಶಿವನನ್ನು ಸದಾ ಕಾಲ ಹುಡುಕುವ ಅವಳ ಪ್ರಯತ್ನವನ್ನು ಜೊತೆಗೆ ಅವಳ ಹಂಬಲದ ತೀವ್ರತೆಯನ್ನು ಗಮನಿಸಬಹುದು.

ಹೀಗೆ ಅಕ್ಕಮಹಾದೇವಿ ತನ್ನ ಬದುಕಿನುದ್ದಕ್ಕೂ ಭಕ್ತಿಯೊಂದಿಗೆ ತನ್ನ ವ್ಯಕ್ತಿತ್ವದೊಂದಿಗೆ ಸದಾ ಕಾಲ ಕುತೂಹಲವನ್ನು ಮೂಡಿಸುವಂತಹ ಆದರ್ಶಪ್ರಾಯವಾಗಿ ಕಂಡುಬರುತ್ತಾಳೆ.

ಅಕ್ಕಮಹಾದೇವಿಯನ್ನು ಕುರಿತು ಮೊದಲು ಬರೆದವನು ಹರಿಹರ. ಹರಿಹರನ ಉಡುತಡಿಯ ಮಹಾದೇವಿಯಕ್ಕನ ರಗಳೆ, ಚೆನ್ನಬಸವಾಂಕನ ಮಹಾದೇವಿಯಕ್ಕನ ಪುರಾಣ, ಕವಿ ರಾಚನು ಬರೆದ ಮಹಾದೇವಿಯಕ್ಕನ ಸಾಂಗತ್ಯ, ಚಾಮರಸನ ಪ್ರಭುಲಿಂಗಲೀಲೆ, ಶೂನ್ಯ ಸಂಪಾದನೆಗಳಲ್ಲಿ ಅಕ್ಕಮಹಾದೇವಿ, ಬಾಲ ಪಾಪಾಂಬಳ ಅಕ್ಕಮಹಾದೇವಿ ಚರಿತ್ರೆ ಇವುಗಳಲ್ಲಿ ಅಕ್ಕಮಹಾದೇವಿಯ ಜೀವನ ಚಿತ್ರಣವನ್ನು ವಿವರಿಸಲಾಗಿದೆ. ಇವುಗಳಷ್ಟೇ ಅಲ್ಲದೇ ಹೊಸಗನ್ನಡ ಕಾಲದಲ್ಲಿಯೂ ಕೂಡ ಎಚ್.ತಿಪ್ಪೇರುದ್ರಸ್ವಾಮಿ ಅವರು ಬರೆದಿರುವ ಕದಳಿಯ ಕರ್ಪೂರ ಕಾದಂಬರಿ, ತೀರಾ ಇತ್ತೀಚೆಗೆ ಡಾ.ಎಚ್.ಎಸ್.ಅನುಪಮಾ ಅವರು ಬರೆದಿರುವ ಬೆಳಗಿನೊಳಗು ಮಹಾದೇವಿಯಕ್ಕ ಕಾದಂಬರಿಗಳು ಮತ್ತೆ ಮತ್ತೆ ಅಕ್ಕಮಹಾದೇವಿಯನ್ನು ಓದುವಂತೆ ಮಾಡಬಲ್ಲ, ಅವಳ ಬದುಕನ್ನು ತಮ್ಮದೇ ಆದ ರೀತಿಯಲ್ಲಿ ಚಿತ್ರಿಸಬಲ್ಲ ಕುತೂಹಲವನ್ನುಂಟು ಮಾಡುವಂತಹ ಪ್ರೇರಣೆದಾಯಕ, ಆಸಕ್ತಿದಾಯಕ ಸಂಗತಿಗಳನ್ನು ಹೊಂದಿರುವ ಆದರ್ಶ ಸಾರ್ಥಕ ಬದುಕು ಅಕ್ಕನದು.

ಅಕ್ಕಮಹಾದೇವಿ ಮನಸು ಮಾಡಿದ್ದರೆ ಕೌಶಿಕ ಮಹಾರಾಜನ ಸಾಮ್ರಾಜ್ಯ ಸುಖವನ್ನು ಅನುಭವಿಸುತ್ತಾ ನೆಮ್ಮದಿಯಾಗಿ ಹಾಗೂ ಲೌಕಿಕದ ಭೌತಿಕ ವಸ್ತುಗಳಾದ ಹಣ, ಐಶ್ವರ್ಯ, ಆಸ್ತಿಗಳನ್ನು ಮೈ ಮನಸ್ಸಿಗೆ ಅಂಟಿಸಿಕೊಂಡು ತೃಪ್ತಿಯಾಗಿ ಬದುಕಬಹುದಿತ್ತು. ಆದರೆ ಅವಳ ವ್ಯಕ್ತಿತ್ವ ಕ್ಷಣಿಕವಾದ ಲೌಕಿಕ ಅಪೇಕ್ಷೆಯನ್ನು ಹೊಂದಿಲ್ಲ. ಅಲೌಕಿಕವಾದ ಶಾಶ್ವತವಾದ ಸಂತೋಷವನ್ನು ಹೊಂದಿರುವಂತದ್ದು, ಅದಕ್ಕಾಗಿಯೇ ಅವಳು ಎಲ್ಲವನ್ನೂ ತ್ಯಜಿಸಿ ಅಕ್ಕನಾಗಿ ಅವತ್ತಿಗೆ ಮಾತ್ರವಲ್ಲದೆ ಇವತ್ತಿಗೂ ಅಕ್ಕನಾಗಿಯೇ ನಾಡಿನ ಕಣ್ಮಣಿಗಳ ಹೃದಯಾಂತರಾಳದಲ್ಲಿ ಅಲಂಕೃತಳಾಗಿದ್ದಾಳೆ. ಅಂತೆಯೇ ವಿರಾಗಿಣಿಯಾಗಿ ಬದುಕಿದರೂ ತನ್ನಂತಹ ಹಲವು ಮಹಿಳೆಯರು ಸಾಹಿತ್ಯ ರಚನೆ ಮಾಡಲು ಸ್ಫೂರ್ತಿ ನೀಡಿ ದಾರಿದೀಪವಾದವಳು ಎಂದರೆ ಬಹುಶಃ ತಪ್ಪಾಗಲಾರದು. ಕಂಡಿರುವ ಮುಖಗಳು ಒಂದಷ್ಟು ಕಾಣಬೇಕಾಗಿರುವ ಮುಖಗಳು ಲೆಕ್ಕವಿಲ್ಲದಷ್ಟು, ಅಕ್ಕಮಹಾದೇವಿಯ ಸದಗವಿಚಾರದಲ್ಲಿ ಮತ್ತಷ್ಟು ಕಾಣುವ ಭಾಗ್ಯಕ್ಕೆ ಹಾತೊರೆಯುವ ಮನಸ್ಸು ನನದು.

ಬಯಸದೇ ಬಂದ ಭಾಗ್ಯವ ಬಿಗಿದಪ್ಪಿಕೊಳ್ಳದೆ
ದಿಟ್ಟತನದಿಬಂದ ಕಷ್ಟಗಳ ಎದುರಿಸಿ
ನಿಂತು ನಿಂದೆಯ ಮಾತುಗಳಿಗೆ ಸೊಪ್ಪು
ಹಾಕದೆ ಅಂದುಕೊಂಡಂತೆ ಬಾಳಿ ಬದುಕಿದ
ಅಸಂಖ್ಯಾತಮಹಿಳೆಯರಪಾಲಿನ ನಂದಾದೀಪವಾಗಿ
ಬೆಳಕ ನೀಡಿ ಸದಾಕಾಲ ಮರೆಯಲಾಗದ ವೀರ
ಮಹಿಳೆಯಾಗಿ, ಸೀಮಾತೀತ ವ್ಯಕ್ತಿತ್ವದ ಅಕ್ಕನಾಗಿ,
ಸಾಹಿತ್ಯ ಬೆಳಕಿನ ರೊಕ್ಕವಾಗಿ, ಅನುಗಾಲ ಪ್ರಜ್ವಲಿಸುವ
ಜ್ಯೋತಿಯಾದವಳು ಅವಳೇ ಅಕ್ಕಮಹಾದೇವಿ.

ಜಿಲ್ಲಾ ಹಂತದಲ್ಲಿ ಜಿಲ್ಲಾ ಪಂಚಾಯಿತಿ ಸಿಇಓ ಪದವಿ ಪೂರ್ವ ಶಿಕ್ಷಣ ಉಸ್ತುವಾರಿ ಖಂಡಿಸಿ

ಮೈಸೂರಲ್ಲಿ ವಿವಿಧ ಸಂಘಟನೆಗಳು, ರಾಜಕಾರಣಿಗಳ ಪ್ರತಿಭಟನೆ

ಮೈಸೂರು,ನ.23(ಎಸ್‌ಬಿಡಿ)– ಜಿಲ್ಲಾ ಹಂತದಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆ ಮೇಲುಸ್ತುವಾರಿಯನ್ನು ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ(ಸಿಇಓ)ಗೆ ವಹಿಸಿ, ಅಧಿಕಾರ ನೀಡಿರುವ ಸರ್ಕಾರದ ಸುತ್ತೋಲೆಯನ್ನು ವಾಪಸ್ ಪಡೆಯುವಂತೆ ಆಗ್ರಹಿಸಿ ಮೈಸೂರಲ್ಲಿ ಗುರುವಾರ ವಿವಿಧ ಸಂಘಟನೆಗಳು ಜಂಟಿಯಾಗಿ ಪ್ರತಿಭಟನೆ ನಡೆಸಿದವು.



ರಾಜ್ಯ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರ ಸಂಘ, ರಾಜ್ಯ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘ, ಪದವಿ ಪೂರ್ವ ಶಿಕ್ಷಣ ಇಲಾಖೆ ಬೋಧಕೇತರ ಸಂಘದ ಸಹಯೋಗದಲ್ಲಿ ಸಿದ್ಧಾರ್ಥ ನಗರದಲ್ಲಿರುವ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಿ, ಸರ್ಕಾರದ ಕ್ರಮವನ್ನು ಖಂಡಿಸಿದ್ದಲ್ಲದೆ ಸುತ್ತೋಲೆಯನ್ನು ಹಿಂಪಡೆಯಬೇಕೆಂದು ಘೋಷಣೆ ಕೂಗಿದರು.

ಕೊಠಾರಿ ಆಯೋಗದ ಶಿಫಾರಸಿನಂತೆ +2 ಹಂತವನ್ನು ರಾಜ್ಯದಲ್ಲಿ ಅಳವಡಿಸುವ ಸಲುವಾಗಿ ಪಿ.ಮಲ್ಲಿಕಾರ್ಜುನಪ್ಪ ನೇತೃತ್ವದ ಸಮಿತಿ ವರದಿ ನೀಡಿದ ಆಧಾರದಲ್ಲಿ 1971ರ ಜನವರಿಯಲ್ಲಿ ಪದವಿ ಪೂರ್ವ ಶಿಕ್ಷಣ ಮಂಡಳಿಯನ್ನು ಅಸ್ತಿತ್ವಕ್ಕೆ ತರಲಾಗಿದೆ. ಎಲ್ಲ ವರ್ಗದ ಬಡ ಮಕ್ಕಳಿಗೂ ಗುಣಾತ್ಮಕ ಮತ್ತು ಮೌಲ್ಯಿಕ ಶಿಕ್ಷಣ ದೊರಕಬೇಕೆಂಬ ಎಸ್.ಬಂಗಾರಪ್ಪ ಅವರ ಆಶಯದೊಂದಿಗೆ ರೂಪುಗೊಂಡ ಪದವಿ ಪೂರ್ವ ಶಿಕ್ಷಣ ಇಲಾಖೆ ಸದ್ಯ, ಮರಣಶಯ್ಯೆಯಲ್ಲಿದೆ. ಅವರ ಪುತ್ರ ಮಧು ಬಂಗಾರಪ್ಪ ಇಲಾಖೆಯ ಸಚಿವರಾಗಿರುವ ಸಂದರ್ಭದಲ್ಲೇ ಇಲಾಖೆ ಶವಪೆಟ್ಟಿಗೆಗೆ ಮೊಳೆ ಹೊಡೆಯುತ್ತಿರುವುದು ದುರ್ದೈವದ ಸಂಗತಿ ಎಂದು ಬೇಸರ ವ್ಯಕ್ತಪಡಿಸಿದರು. ಪದವಿ ಪೂರ್ವ ಶಿಕ್ಷಣ ಇಲಾಖೆ ಹೆಸರನ್ನು ಶಾಲಾ ಶಿಕ್ಷಣ(ಪದವಿ ಪೂರ್ವ) ಇಲಾಖೆ ಎಂದು ಬದಲಿಸಲಾಗಿದೆ. ಅಲ್ಲದೆ ಕರ್ನಾಟಕ ಪಬ್ಲಿಕ್ ಸ್ಕೂಲ್(ಕೆಪಿಎಸ್) ಹೆಸರಿನಲ್ಲಿ ಪಿಯು ಹಂತವನ್ನು ಪ್ರೌಢಶಾಲೆಗಳಲ್ಲಿ ವಿಲೀನಗೊಳಿಸುವ ಪ್ರಕ್ರಿಯೆ ಹಿಂದಿನಿಂದಲೂ ನಡೆಯುತ್ತಿದೆ. ಈ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಿ ಪದವಿ ಪೂರ್ವ ಶಿಕ್ಷಣ ಇಲಾಖೆ ಹೆಸರನ್ನೇ ಮುಂದುವರಿಸಬೇಕು. ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯಲ್ಲಿ ವಿಲೀನಗೊಳಿಸಿರುವ ಪರೀಕ್ಷಾ ವಿಭಾಗವನ್ನು ಮುಕ್ತಗೊಳಿಸಿ, ಪುನಃ ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲೇ ಉಳಿಸುವ ಮೂಲಕ ಪರೀಕ್ಷಾ ಮೌಲ್ಯ ಹಾಗೂ ಪಾವಿತ್ರ್ಯತೆ ಕಾಪಾಡಬೇಕು ಎಂದು ಆಗ್ರಹಿಸಿದರು.

3 ಪರೀಕ್ಷೆ ಅವೈಜ್ಞಾನಿಕ: ಪಿಯು ವಿದ್ಯಾರ್ಥಿಗಳಿಗೆ ವರ್ಷದಲ್ಲಿ ಮೂರು ಪರೀಕ್ಷೆ ನಡೆಸುವ ಸರ್ಕಾರದ ತೀರ್ಮಾನ ಅವೈಜ್ಞಾನಿಕವಾಗಿದೆ. ಈ ಸಂಬಂಧ ಯಾವುದೇ ಶಿಕ್ಷಕರ ಸಂಘಟನೆಗಳ ಜತೆಗಾಗಲೀ, ಶಿಕ್ಷಣ ತಜ್ಞರೊಂದಿಗಾಗಲೀ ಸಮಾಲೋಚನೆ ನಡೆಸಿಲ್ಲ. ಕೂಡಲೇ ಈ ತೀರ್ಮಾನವನ್ನು ಕೈಬಿಡಬೇಕು. ನಮ್ಮ ನ್ಯಾಯಬದ್ಧ ಬೇಡಿಕೆಗಳಿಗೆ ಸರ್ಕಾರ ಸಕಾರಾತ್ಮಕವಾಗಿ ಸ್ಪಂದಿಸದಿದ್ದರೆ ಡಿ.1ರಂದು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಮಾಜಿ ಎಂಎಲ್‌ಸಿ ಕೆ.ಟಿ.ಶ್ರೀಕಂಠೇಗೌಡ, ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಟಿ.ಆರ್.ಸಿದ್ದರಾಜು, ರಾಜ್ಯ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘದ ಜಿಲ್ಲಾಧ್ಯಕ್ಷ ಎಂ.ಎಂ.ಮಹದೇವ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಬೋಧಕೇತರ ಸಂಘದ ಜಿಲ್ಲಾಧ್ಯಕ್ಷ ರಾಜಕುಮಾರ್, ನಿವೃತ್ತ ಡಿಡಿಪಿಯು ನಾಗಮಲ್ಲೇಶ್, ಪುಟ್ಟು ಸೇರಿದಂತೆ ನೂರಾರು ಪ್ರಾಂಶುಪಾಲರು ಹಾಗೂ ಉಪನ್ಯಾಸಕರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ಪ್ರತಿಭಟನೆ ನಂತರ ಡಿಸಿ ಕಚೇರಿಗೆ ಮನವಿ ಸಲ್ಲಿಸಲಾಯಿತು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಶುಕ್ರವಾರ 24 ನವೆಂಬರ್ 2023

ನಮ್ಮ ಅಂಗಾಂಗ ಮಾರಾಟ ಮಾಡಿ ನಿಮ್ಮ ಸಾಲಕ್ಕೆ ಜಮಾ ಮಾಡಿಕೊಳ್ಳಿ

ಮಹಾರಾಷ್ಟ್ರದ 10 ರೈತರಿಂದ ಸಿಎಂಗೆ ಪತ್ರ

ಹಿಂಗೋಲಿ (ಮಹಾರಾಷ್ಟ್ರ): ವಿಲಕ್ಷಣ ಘಟನೆಯೊಂದರಲ್ಲಿ, ಬೆಳೆ ನಷ್ಟವಾಗಿ ಸಾಲ ಮಾಡಿಕೊಂಡ ರೈತರು ತಮ್ಮ ದೇಹದ ಅಂಗಾಂಗಗಳನ್ನು ಮಾರಾಟ ಮಾಡಿ ಸಾಲದ ಹಣವನ್ನು ಭರ್ತಿ ಮಾಡಿಕೊಳ್ಳಿ ಎಂದು ಮುಖ್ಯಮಂತ್ರಿ ಏಕನಾಥ್ ಶಿಂಧೆ ಅವರಿಗೆ ಗುರುವಾರ ಪತ್ರ ಬರೆದಿದ್ದಾರೆ. ಜೊತೆಗೆ ಇದರಲ್ಲಿ ಯಾವ ಅಂಗಕ್ಕೆ ಎಷ್ಟು ಹಣ ಎಂಬುದನ್ನೂ ನಮೂದಿಸಿದ್ದಾರೆ.

ಅಂಗಾಂಗಕ್ಕೂ ರೇಟ್ ಫಿಕ್ಸ್

ಸರ್ಕಾರಕ್ಕೆ ಬರೆದಿರುವ ಪತ್ರದಲ್ಲಿ ರೈತರು ತಮ್ಮ ದೇಹದ ಅಂಗಗಳನ್ನು ಮಾರಾಟ ಮಾಡಲು ಒಪ್ಪಿಗೆ ಸೂಚಿಸಿರುವ ಜೊತೆಗೆ ಯಾವ ಅಂಗಕ್ಕೆ ಎಷ್ಟು ಹಣ ಎಂಬುದನ್ನೂ ನಮೂದಿಸಿದ್ದಾರೆ. ಲಿವರ್‌ಗೆ 90 ಸಾವಿರ ರೂ, ಮೂತ್ರಪಿಂಡಕ್ಕೆ 75 ಸಾವಿರ ರೂ., ಕಣ್ಣನ್ನು 25,000 ರೂ.ಗೆ ಪಡೆದುಕೊಳ್ಳಬಹುದು ಎಂದಿದ್ದಾರೆ.

ಮಹಾರಾಷ್ಟ್ರದ ಹಿಂಗೋಲಿ ಜಿಲ್ಲೆಯ ಗೋರೆಗಾಂವ್ ಗ್ರಾಮದ 10 ಜನ ರೈತರು ತಮ್ಮ ದೇಹದ ಅಂಗಾಂಗಗಳ ಮಾರಾಟಕ್ಕೆ ಸಿದ್ಧರಾದರು. ತಮ್ಮ ಕಣ್ಣು, ಯಕೃತ್ತು, ಮೂತ್ರಪಿಂಡಗಳು ಮತ್ತು



ಇತರ ಅಂಗಗಳನ್ನು ಮಾರಾಟ ಮಾಡಿ, ಅದರಿಂದ ಬಂದ ಹಣವನ್ನು ಪಡೆದ ಸಾಲಕ್ಕೆ ಚುಕ್ತಾ ಮಾಡಿಕೊಳ್ಳಬಹುದು ಎಂದು ಹೇಳಿದ್ದಾರೆ.

ರೈತರಿಗೆ ಸಾಲ ಎಷ್ಟಿದೆ: ದೀಪಕ್ ಕಾವರ್ಕೆ (3 ಲಕ್ಷ ರೂ.), ನಾಮದೇವ್ ಪತಂಗೆ (2.99 ಲಕ್ಷ ರೂ.), ಧೀರಜ್ ಮಾಪಾರಿ (2.25 ಲಕ್ಷ ರೂ.), ಗಜಾನನ ಕವರ್ಖೆ (2 ಲಕ್ಷ ರೂ.), ರಾಮೇಶ್ವರ ಕವರ್ಖೆ, ಅಶೋಕ್ ಕವರ್ಕೆ, ಗಜಾನನ್ ಜಾಧವ್ (ತಲಾ 1.50 ಲಕ್ಷ ರೂ.). ದಶರತ್ ಮುಳೆ (1.20 ಲಕ್ಷ ರೂ.), ವಿಜಯ್ ಕವರ್ಕೆ (1.10 ಲಕ್ಷ ರೂ.), ರಾಮೇಶ್ವರ ಕವರ್ಖೆ (90 ಸಾವಿರ ರೂ.) ಅವರು ಸರ್ಕಾರಿ ಬ್ಯಾಂಕ್‌ಗಳು ಮತ್ತು ಖಾಸಗಿ ಲೇವಾದೇವಿದಾರರಲ್ಲಿ ಸಾಲ ಮಾಡಿಕೊಂಡಿದ್ದಾರೆ.

ಪತ್ರದಲ್ಲಿ ಸಹಿ ಹಾಕಿರುವ ನೊಂದ ರೈತರೊಬ್ಬರು ಹೇಳುವಂತೆ, ನಾವು 10 ಮಂದಿ ರೈತರು ಸಾಲ ನೀಡಿರುವ ಬ್ಯಾಂಕ್‌ಗಳ ಮತ್ತು ಖಾಸಗಿ ಲೇವಾದೇವಿದಾರರ ಕಿರುಕುಳಕ್ಕೆ ಬೇಸತ್ತಿದ್ದೇವೆ. ಹೀಗಾಗಿ ನಮ್ಮ ದೇಹದ ಅಂಗಾಂಗಗಳನ್ನು ಮಾರಾಟ ಮಾಡಿ ಸಾಲ ತೀರಿಸಲು ಮುಂದಾಗಿದ್ದೇವೆ. ಸಿಎಂಗೆ ನಮ್ಮ ಮನವಿ ಪತ್ರವನ್ನು ಸಲ್ಲಿಸಲು ತಹಸೀಲ್ದಾರ್ ಮತ್ತು ಗೋರೆಗಾಂವ್ ಪೊಲೀಸ್ ಠಾಣೆಗೆ ಕೋರಿದ್ದೇವೆ ಎಂದು ಹೇಳಿದ್ದಾರೆ.

ಕುಟುಂಬಸ್ಥರು ಕೂಡ ಭಾಗಿ: ನಮ್ಮೊಂದಿಗೆ ಹೆಂಡತಿ, ಮಕ್ಕಳು ಮತ್ತು ಇತರ ಕುಟುಂಬ ಸದಸ್ಯರು ಕೂಡ ತಮ್ಮ ದೇಹದ ಅಂಗಗಳು, ಕೈಕಾಲುಗಳನ್ನು ಮಾರಾಟ ಮಾಡಲು ಸ್ವಯಂಪ್ರೇರಿತರಾಗಿ ಮುಂದಾಗಿದ್ದೇವೆ. ನಾವು ಮೊದಲು 10 ರೈತರು ಮಾತ್ರ ಈ ನಿರ್ಧಾರಕ್ಕೆ ಬಂದಿದ್ದೇವೆ. ಇನ್ಮುಂದೆ ನಮ್ಮಂತೆಯೇ ಹಲವರು ಬರುತ್ತಾರೆ ನೋಡಿ ಎಂದು ರೈತರು ತಿಳಿಸಿದ್ದಾರೆ.

ಕವರ್ಖೆ ಎಂಬ ಇನ್ನೊಬ್ಬ ರೈತ ಮಾತನಾಡಿ, ಇಲ್ಲಿನ ರೈತರು ಹತ್ತಿ ಮತ್ತು ಸೋಯಾಬೀನ್ ಅನ್ನು ಬೆಳೆಯುತ್ತಾರೆ. ಆದರೆ, ಈ ವರ್ಷ ಮಳೆ ಕೊರತೆ ಮತ್ತು ಬೆಳೆಗಳಿಗೆ ರೋಗಗಳು ತಗುಲಿದ ಕಾರಣ ಸುಮಾರು ಶೇ.80ರಷ್ಟು ಬೆಳೆ ಹಾಳಾಗಿದೆ. ಇದರಿಂದ ಮಾಡಿದ ಸಾಲವನ್ನು ತೀರಿಸಲು ಅಸಾಧ್ಯವಾಗಿದೆ. ಮುಂಗಾರು ಬೆಳೆ ನಷ್ಟವಾಗಿದೆ. ಹಿಂಗಾರು ಬೆಳೆ ಬೆಳೆಯಲೂ ನಮ್ಮಲ್ಲಿ ಹಣವಿಲ್ಲ. ಸರ್ಕಾರ ಬೆಳೆ ವಿಮೆ ಕೂಡ ನೀಡಿಲ್ಲ. ಸಾಲ ಮನ್ನಾ ಮಾಡುವ ಭರವಸೆಯೂ ಈಡೇರಿಲ್ಲ. ಬೆಳೆಗೆ ನೀಡಬೇಕಿದ್ದ ಬೆಂಬಲ ಬೆಲೆ ಕೂಡ ಸರಿಯಾಗಿ ಸಿಗುತ್ತಿಲ್ಲ ಎಂದು ಅಹವಾಲು ತೋಡಿಕೊಂಡಿದ್ದಾರೆ.

ರೈತರಿಗೆ ನೆರವಾಗಲು ಆಗ್ರಹ: ರೈತರ ಈ ಆಘಾತಕಾರಿ ಸುದ್ದಿ ಕೇಳಿ ವಿರೋಧ ಪಕ್ಷದ ನಾಯಕ ವಿಜಯ್ ವಾಡೆಟ್ಟಿ ವಾರ್ ಮತ್ತು ಶಿವಸೇನೆ (ಉದ್ಧವ್ ಬಣ) ರೈತ ನಾಯಕ ಕಿಶೋರ್ ತಿವಾರಿ ತೀವ್ರ ಆತಂಕ ವ್ಯಕ್ತಪಡಿಸಿದ್ದಾರೆ. ಸರ್ಕಾರ ತಕ್ಷಣವೇ ರೈತರ ನೆರವಿಗೆ ಬರಬೇಕು ಎಂದು ಆಗ್ರಹಿಸಿದ್ದಾರೆ. ಈ ವರ್ಷದ ಫೆಬ್ರವರಿಯಲ್ಲಿ ನಾಸಿಕ್‌ನ ಹಲವು ನಷ್ಟಕ್ಕೀಡಾದ ಈರುಳ್ಳಿ ರೈತರು ಬೆಳೆ ಹಾನಿಯಾಗಿ ಜೀವನ ನಿರ್ವಹಣೆ ಕಷ್ಟವಾಗಿದೆ. ಆತ್ಮಹತ್ಯೆಗೆ ಅನುಮತಿ ನೀಡಬೇಕು ಎಂದು ಪ್ರಧಾನಿ ಮೋದಿಗೆ ಪತ್ರ ಬರೆದಿದ್ದನ್ನು ಸ್ಮರಿಸಬಹುದು.

ಮೈಸೂರು ನಗರ ಕೇಂದ್ರ ಗ್ರಂಥಾಲಯಕ್ಕೆ ಪಾಲಿಕೆಯಿಂದ ಬರೋಬ್ಬರಿ 23 ಕೋಟಿ ರೂ. ಲೈಬ್ರರಿ ಸೆಸ್ ಬಾಕಿ

ಮೈಸೂರು,ನ.23(ಆರ್‌ಕೆ)–ಹಲವು ಬಗೆಯ ತೆರಿಗೆ ಸಂಗ್ರಹಿಸಿ ತನ್ನ ಸಂಪನ್ಮೂಲ ಕ್ರೋಢೀಕರಿಸುತ್ತಿರುವ ಮೈಸೂರು ಮಹಾನಗರಪಾಲಿಕೆಯು ಸಾರ್ವಜನಿಕರಿಂದ ತೆರಿಗೆಯೊಂದಿಗೆ ವಸೂಲಿ ಮಾಡಿರುವ ಗ್ರಂಥಾಲಯ ಸೆಸ್ ಅನ್ನು ನಗರ ಕೇಂದ್ರ ಗ್ರಂಥಾಲಯಕ್ಕೆ ಸಂದಾಯ ಮಾಡಲು ಮೀನಾಮೇಷ ಎಣಿಸುತ್ತಿದೆ.

ಕಳೆದ 10 ವರ್ಷಗಳಲ್ಲಿ ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ಸುಮಾರು 23 ಕೋಟಿ ರೂ. ಲೈಬ್ರರಿ ಸೆಸ್ ಬಾಕಿ ಉಳಿಸಿಕೊಂಡಿರುವ ಪಾಲಿಕೆಯು, ಸರ್ಕಾರದ ನಿರ್ದೇಶನ, ನಗರ ಕೇಂದ್ರ ಗ್ರಂಥಾಲಯವು ಹಲವು ಪತ್ರ ಬರೆದು ಕೋರಿಕೊಂಡಿದ್ದರೂ, ಹಣ ವರ್ಗಾವಣೆ ಮಾಡುತ್ತಿಲ್ಲ ಎಂದು ಉಪ ನಿರ್ದೇಶಕ ಬಿ.ಮಂಜುನಾಥ್ ತಿಳಿಸಿದ್ದಾರೆ.

ಪರಿಣಾಮ ಗ್ರಂಥಾಲಯ ಸಿಬ್ಬಂದಿಗೆ ಸಂಬಳ ಕೊಡುವುದೂ ಸೇರಿದಂತೆ ನಿರ್ವಹಣೆಗೆ ತೀವ್ರ ತೊಂದರೆಯಾಗುತ್ತಿದೆ. ಲೈಬ್ರರಿಗಳ ಅಭಿವೃದ್ಧಿ, ಪುಸ್ತಕಗಳ ಖರೀದಿ, ಹೊಸ ಕಟ್ಟಡ ನಿರ್ಮಾಣ ಲೇಖನ ಸಾಮಗ್ರಿ ಸೇರಿದಂತೆ ಇತರ ಖರ್ಚು ನಿಭಾಯಿಸಲು ಹಣಕಾಸಿನ ತೊಂದರೆ ಉಂಟಾಗಿದೆ.

ಲೈಬ್ರರಿ ಸೆಸ್ ಅನ್ನು ಗ್ರಂಥಾಲಯಗಳ ಅಭಿವೃದ್ಧಿ, ಹೊಸ ಕಟ್ಟಡ ನಿರ್ಮಾಣ, ಹೊಸ ಪುಸ್ತಕಗಳ ಖರೀದಿ, ಟೆಲಿಫೋನ್ ಬಿಲ್, ಲೇಖನ ಸಾಮಗ್ರಿ, ಸಂಚಾರಿ ಗ್ರಂಥಾಲಯ, ವಾಹನಗಳ ನಿರ್ವಹಣೆ, ಸಿಬ್ಬಂದಿಗಳ ಸಂಬಳ, ಗ್ರಂಥಾಲಯಗಳ ನಿರ್ವಹಣೆಗೆ ಮಾತ್ರ ಬಳಸಬೇಕು. ನಾವು ಸ್ಥಳೀಯ ಸಂಸ್ಥೆಗಳು ಸಂಗ್ರಹಿಸುವ ಲೈಬ್ರರಿ ಸೆಸ್ ಹಣವನ್ನೇ ಅವಲಂಬಿಸುತ್ತೇವೆಯೇ ಹೊರತು, ಸರ್ಕಾರದಿಂದ ಯಾವುದೇ ಪ್ರತ್ಯೇಕ ಅನುದಾನ ಬರುವುದಿಲ್ಲ ಎಂದು ತಿಳಿಸಿದ್ದಾರೆ.



ಮೈಸೂರಿನ ಪೀಪಲ್ಸ್ ಪಾರ್ಕ್‌ನಲ್ಲಿರುವ ನಗರ ಕೇಂದ್ರ ಗ್ರಂಥಾಲಯ

ಪಾಲಿಕೆಯಷ್ಟೇ ಅಲ್ಲದೇ ಬೇರೆ ಸ್ಥಳೀಯ ಸಂಸ್ಥೆಗಳೂ ತಾವು ಸಂಗ್ರಹಿಸುವ ಲೈಬ್ರರಿ ಸೆಸ್ ಹಣವನ್ನು ಆಯಾ ವರ್ಷವೇ ಪಾವತಿಸದಿರುವುದು ನಮಗೆ ಆರ್ಥಿಕ ತೊಂದರೆ ಉಂಟಾಗಲು ಕಾರಣವಾಗಿದೆ. ಮುಡಾ, ಪಟ್ಟಣ ಪಂಚಾಯ್ತಿ, ನಗರಸಭೆಗಳಿಂದ 2,61,59,857 ರೂ. ಬಾಕಿ ಬರಬೇಕಾಗಿದೆ. ನಗರ ಕೇಂದ್ರ ಗ್ರಂಥಾಲಯ ಸಮಿತಿಗೆ ಮೇಯರ್ ಹಾಗೂ ಜಿಲ್ಲಾ ಲೈಬ್ರರಿ ಸಮಿತಿಗೆ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿದ್ದಾರೆ. ಬಾಕಿ ಹಣ ಪಾವತಿಸುವಂತೆ ಕೇಂದ್ರ ಗ್ರಂಥಾಲಯ ಹಾಗೂ ಗ್ರಂಥಾಲಯ ಇಲಾಖೆಯಿಂದ ಹಲವು ಬಾರಿ ಪತ್ರ ಬರೆದು ಮನವಿ ಮಾಡಿದ್ದರೂ ಪ್ರಯೋಜನವಾಗಿಲ್ಲ ಎಂದು ಮಂಜುನಾಥ್ ತಿಳಿಸಿದ್ದಾರೆ.

ಸಾರ್ವಜನಿಕರಿಂದ ವಿವಿಧ ತೆರಿಗೆಗಳೊಂದಿಗೆ ಸಂಗ್ರಹಿಸುವ ಲೈಬ್ರರಿ ಸೆಸ್ ಹಣವನ್ನು ಪ್ರತ್ಯೇಕವಾಗಿ ESCROW ಖಾತೆ ತೆರೆದು ಅಲ್ಲಿಗೆ ಜಮೆ ಮಾಡಿದರೆ ಅದು ಬೇರೆ ಉದ್ದೇಶಕ್ಕೆ ಬಳಕೆಯಾಗುವುದಿಲ್ಲ. ಆದರೆ, ಪಾಲಿಕೆಯು ನೇರವಾಗಿ ಆ ಖಾತೆಗೆ ಹಣ ಜಮೆ ಮಾಡದೇ, ಆಗೊಮ್ಮೆ–ಈಗೊಮ್ಮೆ ಕಡಿಮೆ ಹಣ ನೀಡುವುದು ಸರಿಯಲ್ಲ ಎಂದು ಪತ್ರ ಮುಖೇನ ತಿಳಿಸಲಾಗಿದೆ ಎಂದು ಮಂಜುನಾಥ್ ತಿಳಿಸಿದ್ದಾರೆ.

ಕಳೆದ 10 ವರ್ಷಗಳಿಂದೀಚೆಗೆ ಮೈಸೂರು ನಗರ ಪಾಲಿಕೆಯಿಂದ ಈವರೆಗೆ ಸುಮಾರು 23 ಕೋಟಿ ರೂ. ಲೈಬ್ರರಿ ಸೆಸ್ ಹಣ ಸಾರ್ವಜನಿಕ ಗ್ರಂಥಾಲಯಗಳಿಗೆ ಸಂದಾಯವಾಗಬೇಕಿದೆ. ಮೈಸೂರು ನಗರದ 36 ಸೇರಿದಂತೆ ಒಟ್ಟು 61 ಲೈಬ್ರರಿಗಳ 60 ಮಂದಿ ಹೊರ ಗುತ್ತಿಗೆ ನೌಕರರಿಗೆ ಗೌರವ ಧನ ನೀಡಲು ತೊಂದರೆಯಾಗಿದೆ. ಅವರಿಗೆ ಮಾಸಿಕ ತಲಾ 8,000 ರೂ.ಗಳಂತೆ ಗೌರವ ಧನ ನೀಡುತ್ತಿದ್ದೇವೆ. ಆದರೆ ಕಾರ್ಮಿಕ ಇಲಾಖೆಯು ಕನಿಷ್ಟ ವೇತನ 13,000 ರೂ. ನೀಡುವಂತೆ ಸೂಚನೆ ನೀಡಿದೆ ಎಂದು ನುಡಿದರು.

ಗ್ರಂಥಾಲಯಗಳ ನಿರ್ವಹಣೆಗಾಗಿ ಲೈಬ್ರರಿ ಸೆಸ್ ಹಣವನ್ನು ESCROW ಖಾತೆಗೆ ವರ್ಗಾಯಿಸುವಂತೆ ಗ್ರಂಥಾಲಯ ಇಲಾಖೆಯು, ಪಾಲಿಕೆ ಮತ್ತು ಎಲ್ಲಾ ಸ್ಥಳೀಯ ಸಂಸ್ಥೆಗಳ ಮುಖ್ಯಸ್ಥರಿಗೆ ಸೂಚನೆ ನೀಡಿದೆ. ಅದರಂತೆ ಕ್ರಮ ವಹಿಸಿದ್ದಲ್ಲಿ ಸೆಸ್ ನಿರ್ದಿಷ್ಟ ಉದ್ದೇಶಕ್ಕೆ ಬಳಕೆಯಾಗಲಿದೆ ಎಂದು ಮನವಿ ಮಾಡಿದ್ದಾರೆ.

ಕರ್ನಾಟಕ ಸಾರ್ವಜನಿಕ ಗ್ರಂಥಾಲಯ ಕಾಯ್ದೆ ಪ್ರಕಾರ, ನಗರ ಸ್ಥಳೀಯ ಸಂಸ್ಥೆಗಳು ಆಸ್ತಿ ತೆರಿಗೆಯಲ್ಲಿ ವಸೂಲು ಮಾಡುವ ಶೇ.6ರಷ್ಟು ಸೆಸ್ ಅನ್ನು ಸಾರ್ವಜನಿಕ ಗ್ರಂಥಾಲಯಗಳಿಗೆ ಹಸ್ತಾಂತರಿಸಬೇಕು. ಆದರೆ ಮೈಸೂರು ಮಹಾನಗರಪಾಲಿಕೆಯು ಹಲವು ವರ್ಷಗಳಿಂದ ಸಂಗ್ರಹಿಸಿದ ಲೈಬ್ರರಿ ಸೆಸ್ ಪಾವತಿಸಿಲ್ಲ. ಒಂದು ವೇಳೆ ಪಾಲಿಕೆಯು ಆ ಹಣವನ್ನು ನಗರದ ಗ್ರಂಥಾಲಯಗಳ ನಿರ್ವಹಣೆ ಮತ್ತು ಅಭಿವೃದ್ಧಿಗೆ ಬಳಸದಿದ್ದಲ್ಲಿ ತೆರಿಗೆದಾರರಿಗೆ ವಂಚನೆ ಮಾಡಿದಂತೆ ಎಂದು ನಾಗರಿಕರು ಅಭಿಪ್ರಾಯಪಟ್ಟಿದ್ದಾರೆ.

ಪಂಪ್‌ಸೆಟ್‌ಗಳಿಗೆ ವಿದ್ಯುತ್ ಕಲ್ಪಿಸಲು ಕಾಮಗಾರಿ ಆದೇಶ ನೀಡದ ಚೆಸ್ಕಾಂ ವಿರುದ್ಧ ಗುತ್ತಿಗೆದಾರರ ಪ್ರತಿಭಟನೆ



ಮೈಸೂರಿನ ಹೂಟಗಳ್ಳಿಯ ಚೆಸ್ಕಾಂ ಕಾರ್ಪೊರೇಟ್ ಕಚೇರಿ ಮುಂದೆ ಗುರುವಾರ ವಿದ್ಯುತ್ ಗುತ್ತಿಗೆದಾರರು ಕಾಮಗಾರಿ ಆದೇಶ ನೀಡದ ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸಿದರು.

ಮೈಸೂರು, ನ.23(ಬಿಎಲ್‌ಯು)– ಪಂಪ್‌ಸೆಟ್‌ಗಳಿಗೆ ರೈತರು ಅಕ್ರಮವಾಗಿ ವಿದ್ಯುತ್ ಸಂಪರ್ಕ ಪಡೆದಿರುವ ಕಡೆ ವಿದ್ಯುತ್ ಕಂಬ ಹಾಗೂ ಟ್ರಾನ್ಸ್‌ಫಾರ್ಮರ್ ಅಳವಡಿಸಲು ಕಾಮಗಾರಿ ಆದೇಶ ನೀಡದ ಚೆಸ್ಕಾಂ ವಿರುದ್ಧ ಎಲೆಕ್ಟ್ರಿಕಲ್ ಇಪಿಸಿ ಗುತ್ತೆಗೆದಾರರ ಸಂಘ ಹಾಗೂ ರಾಜ್ಯ ವಿದ್ಯುತ್ ಗುತ್ತಿಗೆದಾರರ ಸಂಘದವರು ಗುರುವಾರ ಪ್ರತಿಭಟನೆ ನಡೆಸಿದರು.

ಮೈಸೂರಿನ ಹೂಟಗಳ್ಳಿಯ ಚೆಸ್ಕಾಂ ಕಾರ್ಪೊರೇಟ್ ಕಚೇರಿಯಲ್ಲಿ ಪ್ರತಿಭಟನೆ ನಡೆಸಿದ ವಿದ್ಯುತ್ ಗುತ್ತಿಗೆದಾರರು ಕಾಮಗಾರಿ ಆದೇಶ ನೀಡದ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ರೈತರು ಅಕ್ರಮವಾಗಿ ವಿದ್ಯುತ್ ಸಂಪರ್ಕ ಪಡೆದಿರುವ ಕಡೆ ವಿದ್ಯುತ್ ಕಂಬ ಹಾಗೂ ಟ್ರಾನ್ಸ್‌ಫಾರ್ಮರ್ ಅಳವಡಿಸಲು ಚೆಸ್ಕಾಂ 235 ಕೋಟಿ ರೂ. ಟೆಂಡರ್ ಕರೆದಿದೆ. ಕೆಇಆರ್‌ಸಿಯಿಂದ ಇದಕ್ಕೆ ಬಜೆಟ್ ಅನುಮೋದನೆ ಕೂಡ ಪಡೆದಿದೆ. ಗುತ್ತಿಗೆದಾರರಿಗೆ ಟೆಂಡರ್ ಕೂಡ ನಿಗದಿ ಮಾಡಿದೆ ಎಂದು ಪ್ರತಿಭಟನಾಕಾರರು ಹೇಳಿದರು.

ಆದರೆ ಕಾಮಗಾರಿ ಆರಂಭಿಸಲು ಇನ್ನು ಕೂಡ ಆದೇಶ ನೀಡಿಲ್ಲ. ಇದರಿಂದ 150 ಕೋಟಿ ರೂಪಾಯಿ ತನಕ ಬಂಡವಾಳ ಹೂಡಿರುವ ಗುತ್ತಿಗೆದಾರರು ಆರ್ಥಿಕ ಸಂಕಷ್ಟಕ್ಕೀಡಾಗಿದ್ದೇವೆ ಎಂದು ಹೇಳಿದರು.

ಈ ಬಗ್ಗೆ ಇಂಧನ ಇಲಾಖೆ ಸಂಪರ್ಕ ಮಾಡಿದರೆ, ಅ.23ರಂದೇ ಈ ಸಂಬಂಧ ಆದೇಶ ಹೊರಡಿಸಲಾಗಿದೆ ಎಂದು ಅಧಿಕಾರಿಗಳು ಹೇಳುತ್ತಾರೆ. ಆದರೆ ನಮಗೆ ಮೌಖಿಕ ಆದೇಶ ಬಂದಿದೆಯೇ ಹೊರತು, ಲಿಖಿತ ಆದೇಶ ಬಂದಿಲ್ಲ ಎಂದು ಚೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಶ್ರೀಧರ್ ಸ್ಪಷ್ಟನೆ ನೀಡಿದ್ದು, ಇದರಿಂದ ಗುತ್ತಿಗೆದಾರರು ಸಂಕಷ್ಟ ಪಡುವಂತಾಗಿದೆ ಎಂದರು.

ಕೂಡಲೇ ನಮಗೆ ಕಾಮಗಾರಿ ಆದೇಶ ನೀಡದಿದ್ದರೆ ರಾಜ್ಯಾದ್ಯಂತ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಗುತ್ತಿಗೆದಾರರು ಎಚ್ಚರಿಸಿದರು. ಸಂಘದ ಅಧ್ಯಕ್ಷ ಹೆಚ್.ಎನ್. ರಾಮಕೃಷ್ಣ ಖಜಾಂಚಿ ಟಿ.ಕೆ.ಪ್ರವೀಣ್, ಸದಸ್ಯರಾದ ಮಂಜುನಾಥ್, ಸಿದ್ದು, ಸತೀಶ್ ರೆಡ್ಡಿ, ಪುಟ್ಟಮಾದು, ರಾಜ್ಯ ವಿದ್ಯುತ್ ಗುತ್ತಿಗೆದಾರರ ಸಂಘದ ಅಧ್ಯಕ್ಷ ರಮೇಶ್ ಸೇರಿದಂತೆ ಹಲವರು ಪ್ರತಿಭಟನೆಯಲ್ಲಿದ್ದರು.

ನಾಳೆ 'ನರ್ತನ ಮೈತ್ರಿ' ಭರತನಾಟ್ಯ



ಮೈಸೂರು,ನ.23– ಮೈಸೂರಿನ ನೃತ್ಯ ವಿದ್ಯಾಪೀಠ, ಅಕಾಡೆಮಿ ಆಫ್ ಕ್ಲಾಸಿಕಲ್ ಡ್ಯಾನ್ಸ್ ಅಂಡ್ ಇಂಡಿಯನ್ ಆರ್ಟ್ಸ್ ಸಂಸ್ಥೆಯು ಬೆಂಗಳೂರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ನ.25ರಂದು ಸಂಜೆ 5.30ಕ್ಕೆ 'ನರ್ತನ ಮೈತ್ರಿ' ಭರತ ನಾಟ್ಯ ಕಾರ್ಯಕ್ರಮವನ್ನು ಕಲಾಮಂದಿರದ ಕಿರುರಂಗಮಂದಿರದ ಆವರಣದಲ್ಲಿ ಏರ್ಪಡಿಸಲಾಗಿದೆ.

ಮುಖ್ಯ ಅತಿಥಿಗಳಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ನೃತ್ಯಾಲಯ ಟ್ರಸ್ಟ್ ಅಧ್ಯಕ್ಷೆ ಡಾ.ತುಳಸಿ ರಾಮಚಂದ್ರ ಭಾಗವಹಿಸುವರು. ಹೊಳೇನರಸೀಪುರ ಸ್ವರ್ಣ ಶಿಕ್ಷಣ ಸಂಸ್ಥೆ ಪ್ರಾಂಶುಪಾಲರಾದ ಶೋಭಾ ಬಾಲಕೃಷ್ಣ, ಎಲ್ ಅಂಡ್ ಟಿ ಟೆಕ್ನಾಲಜಿ ಸರ್ವೀಸಸ್ ವ್ಯವಸ್ಥಾಪಕಿ ಜಿ.ಕೆ.ಕಮಲ ಉಪಸ್ಥಿತರಿರುವರು.

ಸಂಸ್ಥೆಯ ಸಂಸ್ಥಾಪಕ ನಿರ್ದೇಶಕಿ ವಿದುಷಿ ಸಿ.ಎನ್.ಅನಿತಾ ಅವರ ಮಾರ್ಗದರ್ಶನದಲ್ಲಿ 12 ವರ್ಷಗಳಿಂದ ನೃತ್ಯಾಭ್ಯಾಸದಲ್ಲಿ ತೊಡಗಿಸಿಕೊಂಡಿರುವ ಐವರು ವಿದ್ವಾನ್ ಹಂತದ ವಿದ್ಯಾರ್ಥಿನಿಯರಾದ ವೈಷ್ಣವಿ ಎಲ್.ಅರಸ್, ಎಸ್.ರಕ್ಷಿತಾ, ಡಿ.ವಿ.ಎಸ್.ಕೆ. ಶ್ರೀಹರಿ ಪ್ರಿಯ, ನಯನಾ ನಾಗರಾಜ್ ಮತ್ತು ಎಸ್.ಅನಘ ನೃತ್ಯ ಪ್ರದರ್ಶನ ನೀಡಲಿದ್ದಾರೆ. ವಿದುಷಿ ಸಿ.ಎನ್. ಅನಿತಾ ನೃತ್ಯ ಸಂಯೋಜನೆ ನಿರ್ವಹಿಸಿದ್ದು, ನಟುವಾಂಗ ಸಹಕಾರ ನೀಡಲಿದ್ದಾರೆ. ಹಾಡುಗಾರಿಕೆಯಲ್ಲಿ ರಾಕೇಶ್ ಸುಧೀರ್, ಮೃದಂಗ ವಾದ್ಯದಲ್ಲಿ ವಿದ್ವಾನ್ ತುಮಕೂರು ಬಿ.ಶಶಿಶಂಕರ್ ಹಾಗೂ ವೇಣುವಾದನದಲ್ಲಿ, ವಿದ್ವಾನ್ ಶಶಾಂಗ್ ಜೋಡಿದಾರ್ ಪಕ್ಕವಾದ್ಯದಲ್ಲಿ ಸಹಕಾರ ನೀಡಲಿದ್ದಾರೆ.



ಮೈಸೂರು ಮಹಾನಗರ ಪಾಲಿಕೆ ಆಡಳಿತಾಧಿಕಾರಿಯಾಗಿ ನೇಮಕಗೊಂಡಿರುವ ಪ್ರಾದೇಶಿಕ ಆಯುಕ್ತರಾದ ಡಾ. ಜಿ.ಸಿ. ಪ್ರಕಾಶ್ ಅವರನ್ನು ವಿಶ್ರಾಂತ ಮಾಹಿತಿ ಆಯುಕ್ತರೂ ಆದ ಮೈಸೂರು ರೇಸ್ ಕ್ಲಬ್ ಅಧ್ಯಕ್ಷರಾದ ಕೆ.ಎಂ. ಚಂದ್ರೇಗೌಡರು ಆತ್ಮೀಯವಾಗಿ ಅಭಿನಂದಿಸಿದರು.

ಎಂಡಿಜೆಎಗೆ ಸಿಎ ನಿವೇಶನ ಮಂಜೂರಾತಿ ಪತ್ರ ಹಸ್ತಾಂತರಿಸಿದ ಸಿಎಂ ಸಿದ್ದರಾಮಯ್ಯ



ಮೈಸೂರು,ನ.23(ಆರ್‌ಕೆ)–ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಿಂದ ಮೈಸೂರು ಜಿಲ್ಲಾ ಪತ್ರಕರ್ತರ ಸಂಘ (MDJA)ಕ್ಕೆ ಪತ್ರಿಕಾ ಭವನ ನಿರ್ಮಿಸಲು ಮಂಜೂರಾಗಿರುವ ನಾಗರಿಕ ಸೌಲಭ್ಯ (CA) ನಿವೇಶನದ ಮಂಜೂರಾತಿ ಪತ್ರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಇತ್ತೀಚೆಗೆ ಹಸ್ತಾಂತರಿಸಿದರು.

ಸುಸಜ್ಜಿತ ಭವನ ನಿರ್ಮಿಸಿ ಮಾಧ್ಯಮ ತರಬೇತಿ, ಪತ್ರಿಕಾ ಸಂವಾದಗಳಂತಹ ಚಟುವಟಿಕೆ ನಡೆಸಲು ನೀಡಿರುವ ಸಿಎ ನಿವೇಶನದಲ್ಲಿ ಕಟ್ಟಡಕ್ಕೆ ಬೇಗ ಶಂಕುಸ್ಥಾಪನೆ ಮಾಡಿ ಎಂದು ಸಿದ್ದರಾಮಯ್ಯ, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್ ನೇತೃತ್ವದ ಪದಾಧಿಕಾರಿಗಳಿಗೆ ಇದೇ ವೇಳೆ ಸಲಹೆ ನೀಡಿದರು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಡಾ.ಯತೀಂದ್ರ, ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್, ಮುಡಾ ಆಯುಕ್ತ ಜಿ.ಟಿ. ದಿನೇಶ್‌ಕುಮಾರ್, ಎಂಡಿಜೆಎ ಪ್ರಧಾನ ಕಾರ್ಯದರ್ಶಿ ಎಂ.ಸುಬ್ರಹ್ಮಣ್ಯ, ಉಪಾಧ್ಯಕ್ಷರಾದ ಅನುರಾಗ್ ಬಸವರಾಜ್, ಧರ್ಮಾಪುರ ನಾರಾಯಣ, ನಗರ ಕಾರ್ಯದರ್ಶಿ ರಂಗಸ್ವಾಮಿ, ಖಜಾಂಚಿ ನಾಗೇಶ್ ಪಾಣತ್ತಲೆ, ಕಾರ್ಯಕಾರಿ ಸಮಿತಿ ಸದಸ್ಯ ಆರ್.ಕೃಷ್ಣ, ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಬಿ.ರಾಘವೇಂದ್ರ ಇನ್ನಿತರರಿದ್ದರು.

ಮೈಸೂರಲ್ಲಿ ನಾಳೆ ಆರೋಗ್ಯ ಇಲಾಖೆ ಮಳಿಗೆ ಉದ್ಘಾಟನೆ

ಮೈಸೂರು.ನ.23– ಜಿಲ್ಲಾ ಆಡಳಿತ ಜಿಲ್ಲಾ ಪಂಚಾಯತ್ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವತಿಯಿಂದ ದಸರಾ 2023–24ನೇ ಸಾಲಿನ ಆರೋಗ್ಯ ಇಲಾಖೆ ಮಳಿಗೆ ಉದ್ಘಾಟನಾ ಸಮಾರಂಭವನ್ನು ನ.25 ರಂದು ಸಂಜೆ 5:30ಕ್ಕೆ ದಸರಾ ವಸ್ತುಪ್ರದರ್ಶನ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದ ಉದ್ಘಾಟನೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯನವರು ನೆರವೇರಿಸಲಿದ್ದಾರೆ. ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಪಶು ಸಂಗೋಪನಾ ಮತ್ತು ರೇಷ್ಮೆ ಇಲಾಖೆ ಸಚಿವ ಕೆ.ವೆಂಕಟೇಶ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಉಪಸ್ಥಿತರಿರುವರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ವಹಿಸಲಿದ್ದಾರೆ. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಲೋಕಸಭಾ ಸದಸ್ಯರಾದ ಪ್ರತಾಪ್ ಸಿಂಹ, ವಿ.ಶ್ರೀನಿವಾಸ್ ಪ್ರಸಾದ್ ಹಾಗೂ ಸುಮಲತಾ ಅಂಬರೀಶ್ ಭಾಗವಹಿಸಲಿದ್ದಾರೆ. ಕಾರ್ಯಕ್ರಮಕ್ಕೆ ಅತಿಥಿಗಳಾಗಿ ನರಸಿಂಹರಾಜ ವಿಧಾನಸಭಾ ಕ್ಷೇತ್ರದ ಶಾಸಕ ತನ್ವೀರ್ ಸೇಠ್, ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಹೆಚ್.ಡಿ.ಕೋಟೆ ವಿಧಾನ ಸಭಾ ಕ್ಷೇತ್ರದ ಶಾಸಕ ಅನಿಲ್‌ಕುಮಾರ್, ಕೆ.ಆರ್. ನಗರ ವಿಧಾನಸಭಾ ಕ್ಷೇತ್ರದ ಶಾಸಕ ರವಿಶಂಕರ್, ಹುಣಸೂರು ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಡಿ.ಹರೀಶ್‌ಗೌಡ, ನಂಜನಗೂಡು ವಿಧಾನಸಭಾ ಕ್ಷೇತ್ರದ ಶಾಸಕ ದರ್ಶನ್ ಧ್ರುವನಾರಾಯಣ್, ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ವಿಧಾನಪರಿಷತ್ ಶಾಸಕರಾದ ಹೆಚ್.ವಿಶ್ವನಾಥ್, ಮರಿತಿಬ್ಬೇಗೌಡ, ಡಾ.ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಮಧು ಜಿ.ಮಾದೇಗೌಡ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತ ಡಿ.ರಂದೀಪ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶಕರಾದ ಡಾ.ಪುಷ್ಪಲತಾ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಅಭಿಯಾನ ನಿರ್ದೇಶಕ ಡಾ.ನವೀನ್.ಭಟ್.ವೈ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಸಹ ನಿರ್ದೇಶಕ ಡಾ. ಧನಂಜಯ ಭಾಗವಹಿಸಲಿದ್ದಾರೆ.

ಇಂದು ಮತದಾನ ಕುರಿತು ಜಾಗೃತಿ ಜಾಥಾ

ಮೈಸೂರು,ನ.23(ಪಿಎಂ)– ಮೈಸೂರು ಜಿಲ್ಲೆ ಲೋಕಸಭಾ ಕ್ಷೇತ್ರಗಳಲ್ಲಿ ಶೇಕಡವಾರು ಮತದಾನ ಹೆಚ್ಚಿಸುವ ಸಲುವಾಗಿ ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಸ್ವೀಪ್ ಕಾರ್ಯಕ್ರಮದಡಿ ಮತದಾರರಿಗೆ ಅರಿವು ಮೂಡಿಸಲು ನ.24ರಂದು ಬೆಳಗ್ಗೆ 8.30ಕ್ಕೆ ಜಾಥಾ ಕಾರ್ಯಕ್ರಮ ಆಯೋಜಿಸಲಾಗಿದೆ. ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗದಿಂದ ಹಳೆ ಜಿಲ್ಲಾಧಿಕಾರಿಗಳ ಕಚೇರಿವರೆಗೆ ಯುವ ಮತದಾರರು ಜಾಥಾ ನಡೆಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಹೇಳಿಕೆ

ರಾಹುಲ್ ಗಾಂಧಿಗೆ ಇಸಿ ನೋಟಿಸ್

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರನ್ನು ಗುರಿಯಾಗಿಸಿ ಕೊಂಡು 'ಪನೌತಿ', 'ಪಿಕ್‌ಪಾಕೆಟ್' ಮತ್ತು ಉದ್ಯಮಿಗಳ ಸಾಲ ಮನ್ನಾಗಾರ ಹೇಳಿಕೆ ನೀಡಿದ್ದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ಚುನಾವಣಾ ಆಯೋಗ(ಇಸಿ) ಗುರುವಾರ ಶೋಕಾಸ್ ನೋಟಿಸ್ ಜಾರಿ ಮಾಡಿದ್ದು, ಶನಿವಾರ ಸಂಜೆಯೊಳಗೆ ಉತ್ತರಿಸುವಂತೆ ಸೂಚಿಸಿದೆ.



ಈ ಸಂಬಂಧ ಆಡಳಿತಾರೂಢ ಭಾರತೀಯ ಜನತಾ ಪಕ್ಷ(ಬಿಜೆಪಿ), ಕಾಂಗ್ರೆಸ್ ಮಾಜಿ ಅಧ್ಯಕ್ಷರ ವಿರುದ್ಧ ಚುನಾವಣಾ ಆಯೋಗಕ್ಕೆ ದೂರು ನೀಡಿದ್ದು, ಹಿರಿಯ ನಾಯಕರೊಬ್ಬರು ಇಂತಹ ಭಾಷೆಯನ್ನು ಬಳಸುವುದು ಅಯೋಗ್ಯ ಎಂದು ಕಿಡಿಕಾರಿತ್ತು

ರಾಜಕೀಯ ಪ್ರತಿಸ್ಪರ್ಧಿಗಳ ವಿರುದ್ಧ ಆಧಾರರಹಿತ ಆರೋಪಗಳನ್ನು ಮಾಡುವುದು ಮಾದರಿ ನೀತಿ ಸಂಹಿತೆ ಉಲ್ಲಂಘನೆ ಎಂದಿರುವ ಬಿಜೆಪಿ ನಾಯಕರು, ರಾಹುಲ್ ಗಾಂಧಿ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಇಸಿಗೆ ಒತ್ತಾಯಿಸಿದ್ದರು.

ಪಿಎಂ ಎಂದರೆ 'ಪನೌತಿ' ಎಂದು ರಾಹುಲ್ ಗಾಂಧಿ ಹೇಳಿದ್ದರು. ಉದ್ಯಮಿ ಗೌತಮ್ ಅದಾನಿ ಅವರು ಜನರ ಜೇಬಿಗೆ ಕನ್ನಾ ಹಾಕುವಾಗ ಮೋದಿ ಜನರ ಗಮನವನ್ನು ಬೇರೆಡೆಗೆ ತಿರುಗಿಸುತ್ತಾರೆ ಎಂದು ವಾಗ್ದಾಳಿ ನಡೆಸಿದ್ದರು. ಭಾರತ ಕ್ರಿಕೆಟ್ ತಂಡಕ್ಕೆ ಪ್ರಧಾನಿ ನರೇಂದ್ರ ಮೋದಿ ದುರಾದೃಷ್ಟ ತಂದರು ಎಂದು ಹೀಗಳೆದಿದ್ದರು. ಹಿಂದಿಯ ಪನೌತಿ ಎಂಬ ಪದಕ್ಕೆ ಕನ್ನಡದಲ್ಲಿ ಅಪಶಕುನ ಎನ್ನಲಾಗುತ್ತದೆ.

ವಿ.ಸುಜಯ್‌ಕುಮಾರ್ ನಿಧನ



ಕೊಳ್ಳೇಗಾಲ: ಪಟ್ಟಣದ ಭೀಮನಗರ ನಿವಾಸಿ ವಿ.ಸುಜಯ್ ಕುಮಾರ್ (48) ಗುರುವಾರ ನಿಧನರಾದರು. ಮೃತರು ಪತ್ನಿ ರಶ್ಮಿ ಜಾಯ್, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ನಾಳೆ (ಶುಕ್ರವಾರ) ಪಟ್ಟಣದ ಶ್ರೀ ಮಹದೇಶ್ವರ ಪ್ರಥಮ ದರ್ಜೆ ಕಾಲೇಜು ಸಮೀಪವಿರುವ ಕ್ರೈಸ್ತ ರುದ್ರಭೂಮಿಯಲ್ಲಿ ಮಧ್ಯಾಹ್ನ 12 ಗಂಟೆಗೆ ಅಂತ್ಯಕ್ರಿಯೆ ನಡೆಯಲಿದೆ. ಮೃತರ ನಿಧನಕ್ಕೆ ಬೇತೆಲ್ ಲೂಥರನ್ ಚರ್ಚ್ ಸಭಾಪಾಲನಾ ಸಮಿತಿ ಸದಸ್ಯರು ಹಾಗೂ ಸಭಾಪಾಲಕರು ಸಂತಾಪ ಸೂಚಿಸಿದರು.

ಪೂರ್ಣಯ್ಯ ನಾಲೆ ಮೇಲೆ ಮುಡಾದಿಂದಲೇ ರಸ್ತೆ ನಿರ್ಮಾಣ ಆರೋಪ

ಮೈಸೂರು, ನ.23(ಆರ್‌ಕೆ)–ಮೈಸೂರಿನ ಬೋಗಾದಿ ಮತ್ತು ಎಸ್‌ಬಿಎಂ ಬಡಾವಣೆ ನಡುವೆ ಹಾದು ಹೋಗಿರುವ ದಿವಾನ್ ಪೂರ್ಣಯ್ಯ ನಾಲೆ ಮಧ್ಯ ಭಾಗದಲ್ಲಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ರಸ್ತೆ ನಿರ್ಮಿಸಲು ಮುಂದಾಗಿದೆ ಎಂದು ಸ್ಥಳೀಯರು ಆರೋಪಿಸಿದ್ದಾರೆ.

ಈ ಹಿಂದೆ ಜಿಲ್ಲಾಧಿಕಾರಿಗಳಾಗಿದ್ದ ಹರ್ಷಗುಪ್ತಾ ಮತ್ತು ರಂದೀಪ್ ಅವರು ಪೂರ್ಣಯ್ಯ ನಾಲೆ (ರಾಜಕಾಲುವೆ) ಒತ್ತುವರಿಯಾಗಿರುವುದನ್ನು ತೆರವುಗೊಳಿಸಲು ಕಂದಾಯ ಇಲಾಖೆ ಅಧಿಕಾರಿಗಳಿಂದ ಮೂಲ ನಕ್ಷೆಯನ್ವಯ ದಾಖಲಾತಿಗಳ ಸಹಾಯದಿಂದ ಸಮೀಕ್ಷೆ ನಡೆಸಿ 20 ಕಿ.ಮೀ. ಉದ್ದದ ನಾಲೆ ಹಾದು ಹೋಗಿರುವ ಬಗ್ಗೆ ದೃಢಪಡಿಸಿದ್ದರು.

ನಾಲೆ ಒತ್ತುವರಿ ಮಾಡಿ ಅದರ ಮೇಲೆ ನಿರ್ಮಿಸಿರುವ ಅನಧಿಕೃತ ಕಟ್ಟಡಗಳನ್ನು ತೆರವುಗೊಳಿಸಲು ಜಿಲ್ಲಾಧಿಕಾರಿಗಳು ಮುಂದಾಗಿದ್ದರಾದರೂ, ಕೆಲ ಪಟ್ಟಭದ್ರ ಹಿತಾಸಕ್ತಿಗಳ ಮಧ್ಯ ಪ್ರವೇಶದಿಂದಾಗಿ ಕಾರ್ಯಾಚರಣೆಗೆ ಹಿನ್ನಡೆಯಾಗಿತ್ತು.

ಬೇಲಿಯೇ ಎದ್ದು ಹೊಲ ಮೇಯ್ದಂತಾಯ್ತು!



ಪರಿಣಾಮ ರಾಜ ಕಾಲುವೆ ಸಂಪೂರ್ಣ ಮುಚ್ಚಿಹೋಗಿದ್ದು, ಮಳೆ ನೀರು ಕುಕ್ಕರಹಳ್ಳಿ ಕೆರೆಗೆ ಹರಿದು ಬರಲು ಅಡ್ಡಿಯಾಗಿದೆಯಲ್ಲದೆ, ಕೆಲ ಬಡಾವಣೆಗಳಿಗೆ ನೀರು ನುಗ್ಗಿ ತೊಂದರೆಯಾಗುತ್ತಿದೆ.

ಇದೀಗ ಬೋಗಾದಿ ಮತ್ತು ಎಸ್‌ಬಿಎಂ ಬಡಾವಣೆ ನಡುವೆ ಹಾದು ಹೋಗಿರುವ ರಾಜಕಾಲುವೆಯನ್ನೇ ಮುಚ್ಚಿ ರಸ್ತೆ ನಿರ್ಮಿಸಲು ಮುಡಾ ಅಧಿಕಾರಿಗಳೇ ಕಾಮಗಾರಿ ನಡೆಸುತ್ತಿದ್ದಾರೆ ಎಂದು ಅಲ್ಲಿನ ಸ್ಥಳೀಯ ನಿವಾಸಿಯಾದ ಮೈಸೂರು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ಪ್ರೊ. ಜ್ಞಾನಪ್ರಕಾಶ್ ಹಾಗೂ ಇತರರು 'ಮೈಸೂರು ಮಿತ್ರ'ನಿಗೆ ದೂರಿದ್ದಾರೆ.

ಪೂರ್ಣಯ್ಯ ನಾಲೆಯನ್ನು ಉಳಿಸಿ ನಿರ್ವಹಿಸಬೇಕಾದ ಜವಾಬ್ದಾರಿ ಇರುವ ಸರ್ಕಾರಿ ಅಧಿಕಾರಿಗಳೇ ಅದನ್ನು ಮುಚ್ಚಿ ರಸ್ತೆ ನಿರ್ಮಿಸಿದರೆ, ಖಾಸಗಿ ವ್ಯಕ್ತಿಗಳನ್ನು ಒತ್ತುವರಿ ಮಾಡಬೇಡಿ ಎಂದು ಹೇಳುವವರ್‍ಯಾರು? ಎಂದು ಪ್ರಶ್ನಿಸಿದ ಪ್ರೊ. ಜ್ಞಾನಪ್ರಕಾಶ್, ಈ ಬಗ್ಗೆ ಜಿಲ್ಲಾಧಿಕಾರಿಗಳಿಗೆ ದೂರು ನೀಡಿದ್ದೇವೆ ಎಂದರು.

ನಾಲೆ ಅಸ್ತಿತ್ವವನ್ನೇ ನಾಶ ಮಾಡಲು ಅಧಿಕಾರಿಗಳು ಜೆಸಿಬಿಯಿಂದ ನಾಲೆಯನ್ನು ಮಟ್ಟ ಮಾಡುತ್ತಿದ್ದಾರೆ. ನಾಲೆ ಮುಚ್ಚಿ ರಸ್ತೆ ಮಾಡಿದಲ್ಲಿ ಇತರರೂ ಅದರ ಮೇಲೆ ಕಟ್ಟಡ ನಿರ್ಮಿಸಿಕೊಳ್ಳುತ್ತಾರೆ. ಅದಕ್ಕೆ ಹೊಣೆಗಾರರ್‍ಯಾರು ಎಂದು ನಿವಾಸಿಗಳು ಪ್ರಶ್ನಿಸಿದ್ದಾರೆ.

ಗಿಡ–ಗಂಟಿ ತೆಗೆದಿದ್ದೇವೆಯೇ ಹೊರತು, ಕಾಲುವೆ ಮೇಲೆ ರಸ್ತೆ ಮಾಡುತ್ತಿಲ್ಲ

ಮುಡಾ ಸೂಪರಿಂಟೆಂಡಿಂಗ್ ಇಂಜಿನಿಯರ್ ಚೆನ್ನಕೇಶವ ಸ್ಪಷ್ಟನೆ

ಮೈಸೂರು, ನ.23(ಆರ್‌ಕೆ)–ಸರ್ವಿಸ್ ರಸ್ತೆಗಾಗಿ ಗಿಡ–ಗಂಟಿ ತೆರವು ಗೊಳಿಸಿದ್ದೇವೆಯೇ ಹೊರತು, ರಾಜ ಕಾಲುವೆ ಮುಚ್ಚಿ ರಸ್ತೆ ನಿರ್ಮಿಸುತ್ತಿಲ್ಲ ಎಂದು ಮುಡಾ ಸೂಪರಿಂಟೆಂಡಿಂಗ್ ಇಂಜಿನಿಯರ್ ಚೆನ್ನಕೇಶವ ತಿಳಿಸಿದ್ದಾರೆ.

ಪೂರ್ಣಯ್ಯ ನಾಲೆ ನಿರ್ವಹಣೆಗೆ ಪಕ್ಕದಲ್ಲಿ ಸರ್ವಿಸ್ ರಸ್ತೆ ಮಾಡಲಾಗುತ್ತಿದೆ. ಅದರಿಂದ ನಾಲೆ ಸಮೀಕ್ಷೆಗೆ ಹಾಗೂ ಅಲ್ಲಿನ ಸ್ಮಶಾನಕ್ಕೆ ಹೋಗಲು ಸಾರ್ವಜನಿಕರಿಗೆ ಅನುಕೂಲವಾಗುತ್ತದೆ ಎಂಬ ಕಾರಣಕ್ಕಾಗಿ ರಾಜ ಕಾಲುವೆ ಮೇಲೆ ಬೆಳೆದಿದ್ದ ಗಿಡ–ಗಂಟಿಗಳನ್ನು ಡೋಜರ್‌ನಿಂದ ತೆರವುಗೊಳಿಸಿದ್ದೇವೆಯೇ ಹೊರತು, ಅದರ ಮೇಲೆ ರಸ್ತೆ ಮಾಡುತ್ತಿಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಈಗ ಆರೋಪಗಳು ಕೇಳಿಬರುತ್ತಿರುವುದರಿಂದ ಸರ್ವಿಸ್ ರಸ್ತೆ ನಿರ್ಮಾಣ ಕಾಮಗಾರಿಯನ್ನು ಸ್ಥಗಿತಗೊಳಿಸಲು ಸೂಚಿಸಿದ್ದೇನೆ. ಸಾರ್ವಜನಿಕರಿಗೆ ಅನುಕೂಲವಾಗಲೆಂದು ಗಿಡ–ಗಂಟಿ ತೆರವುಗೊಳಿಸಿದ್ದೆವು. ಅದೂ ಬೇಡ ಎಂದಾದರೆ, ಅಲ್ಲಿ ಬೇರೆ ಯಾವ ಕೆಲಸವನ್ನೂ ಮಾಡುವುದಿಲ್ಲ ಎಂದು ತಿಳಿಸಿದರು.

ಮಂಡ್ಯ ಕ್ಷೇತ್ರದಿಂದ ನಿಖಿಲ್‌ಗೆ ಟಿಕೆಟ್ ನೀಡಲಿ

● ಇಲ್ಲವೇ ಹೆಚ್‌ಡಿಡಿ, ಹೆಚ್‌ಡಿಕೆ ಸ್ಪರ್ಧಿಸಲಿ ● ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಆಗ್ರಹ



ಮಂಡ್ಯ, ನ.23– ಈ ಬಾರಿಯೂ ಮಂಡ್ಯ ಲೋಕಸಭಾ ಕ್ಷೇತ್ರದಿಂದ ನಿಖಿಲ್ ಕುಮಾರಸ್ವಾಮಿ ಅವರಿಗೆ ಟಿಕೆಟ್ ನೀಡುವಂತೆ ಜೆಡಿಎಸ್ ವರಿಷ್ಠರಿಗೆ ಒತ್ತಡ ಹಾಕಲಿದ್ದೇವೆ ಎಂದು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಹೇಳಿದರು.

ನಗರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಬಾರಿ ಮಂಡ್ಯದಿಂದ ನಿಖಿಲ್ ಸ್ಪರ್ಧಿಸಿ ಪರಾಭವಗೊಂಡಿದ್ದರು. ಆದರೆ, ಈ ಬಾರಿ ಅವರು ಸ್ಪರ್ಧಿಸಿದರೆ ಗೆಲ್ಲುವ ವಿಶ್ವಾಸವಿದೆ. ಈ ನಿಟ್ಟಿನಲ್ಲಿ ಪಕ್ಷದ ವರಿಷ್ಠರ ಬಳಿ ನಮ್ಮ ಅಭಿಮಾನದಿಂದ ಕೇಳುತ್ತಿದ್ದು, ಟಿಕೆಟ್ ನೀಡಲೇಬೇಕು. ಒಂದು ವೇಳೆ ನಿಖಿಲ್ ಸ್ಪರ್ಧಿಸದಿದ್ದರೆ ಹೆಚ್.ಡಿ. ದೇವೇಗೌಡರು ಅಥವಾ ಹೆಚ್.ಡಿ.ಕುಮಾರಸ್ವಾಮಿ ಸ್ಪರ್ಧಿಸಲಿ. ಸ್ಥಳೀಯ ಮುಖಂಡರು ಸ್ಪರ್ಧಿಸಬೇಕೋ, ಇಲ್ಲವೋ ಎಂಬ ಬಗ್ಗೆ ನಾವ್ಯಾರು ಸಹ ನಿರ್ಧಾರ ಮಾಡಿಲ್ಲ. ಸಂಸದೆ ಸುಮಲತಾ ಪರ ಚುನಾವಣೆಯಲ್ಲಿ ದುಡಿದವರು ಇಂದು ಯಾರೂ ಸಹ ಅವರ ಜೊತೆಯಲ್ಲಿಲ್ಲ. ಮಂಡ್ಯ ಕ್ಷೇತ್ರದಲ್ಲಿ ಅಂತಿಮವಾಗಿ ಜೆಡಿಎಸ್ ಅಭ್ಯರ್ಥಿ ಇರಲಿದ್ದಾರೋ ಅಥವಾ ಬಿಜೆಪಿ ಅಭ್ಯರ್ಥಿ ಇರಲಿದ್ದಾರೋ ಎಂಬುದನ್ನು ಎರಡು ಪಕ್ಷದ ರಾಷ್ಟ್ರೀಯ ಮುಖಂಡರು ನಿರ್ಧರಿಸಲಿದ್ದಾರೆ ಎಂದು ತಿಳಿಸಿದರು.

ಸರ್ಕಾರಕ್ಕೆ ಬರ ವರದಿ ನೀಡಲಿ: ಜೆಡಿಎಸ್ ಜಿಲ್ಲಾ ಘಟಕ ಈಗಾಗಲೇ ಪಕ್ಷದ ವರಿಷ್ಠ ಸೂಚನೆಯಂತೆ ಜಿಲ್ಲೆಯಲ್ಲಿ ಬರ ಅಧ್ಯಯನ ನಡೆಸಿ, ಜಿಲ್ಲಾಧಿಕಾರಿಗೆ ವರದಿ ಕೊಟ್ಟಿದ್ದೇವೆ. ಯಾರನ್ನೋ ಮೆಚ್ಚಿಸಲು ನಾವು ಅಧ್ಯಯನ ನಡೆಸಿಲ್ಲ. ಜಿಲ್ಲೆಯ ರೈತರಿಗೆ ಅನುಕೂಲವಾಗಲಿ ಎಂದು ಬರ ಅಧ್ಯಯನ ನಡೆಸಿದ್ದು, ಜಿಲ್ಲಾಧಿಕಾರಿ ಈ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಿ. ಕೂಡಲೇ ಸಮರ್ಪಕ ಪರಿಹಾರ ಬಿಡುಗಡೆಯಾಗಬೇಕು. ಬರದಿಂದ ಬೆಳೆ ಕಳೆದುಕೊಂಡಿರುವ ರೈತರಿಗೆ ಪರಿಹಾರ ಸಿಗದಿದ್ದರೆ ಉಗ್ರ ಹೋರಾಟ ನಡೆಸುವುದಾಗಿ ಎಚ್ಚರಿಸಿದರು.

ಮಂಡ್ಯದಲ್ಲಿ 59 ಸಾವಿರ ಹೆಕ್ಟೇರ್ ಬೆಳೆ ನಾಶ: ಜೆಡಿಎಸ್ ಜಿಲ್ಲಾದ್ಯಂತ ಬರ ಅಧ್ಯಯನ ನಡೆಸಿದ್ದು, ಅಂದಾಜಿನ ಪ್ರಕಾರ 59 ಸಾವಿರ ಹೆಕ್ಟೇರ್ ಬೆಳೆ ಮಳೆಯ ಕೊರತೆಯಿಂದ ನಾಶವಾಗಿದೆ ಎಂದು ಮಾಜಿ ಸಚಿವ ಡಿ.ಸಿ.ತಮ್ಮಣ್ಣ ಹೇಳಿದರು.

ವಸ್ತುನಿಷ್ಠೆಯಿಂದ ಬರ ಅಧ್ಯಯನ ನಡೆಸಿ ವರದಿ ತಯಾರಿಸಿದ್ದೇವೆ. ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಜೆಡಿಎಸ್ ಮುಖಂಡರು ಬರ ಅಧ್ಯಯನ ನಡೆಸಿ, ಆಯಾ ಜಿಲ್ಲಾಡಳಿತಕ್ಕೆ ವರದಿ ನೀಡಿ, ಜೊತೆಗೆ ನಮ್ಮ ಪಕ್ಷದ ವರಿಷ್ಠರಿಗೂ ವರದಿ ಕೊಡುತ್ತಿದ್ದೇವೆ. ರಾಜ್ಯದಲ್ಲಿನ ಬರದ ಸಮಸ್ಯೆ ಬಗ್ಗೆ ಸಂಸತ್‌ನಲ್ಲಿ ಹೆಚ್.ಡಿ. ದೇವೇಗೌಡರು, ರಾಜ್ಯದಲ್ಲಿ ಹೆಚ್.ಡಿ. ಕುಮಾರಸ್ವಾಮಿ ಅಧಿವೇಶನದಲ್ಲಿ ಧ್ವನಿ ಎತ್ತಲಿದ್ದಾರೆ ಎಂದರು.

ಈ ಬಾರಿ ಸಮರ್ಪಕ ಮಳೆಯಾಗದ ಪರಿಣಾಮ ಜಿಲ್ಲೆಯ ಏಳು ತಾಲೂಕುಗಳು ಕಾವೇರಿ ಹಾಗೂ ಹೇಮಾವತಿ ನದಿ ನೀರನ್ನು ನೆಚ್ಚಿಕೊಂಡು ಬೆಳೆ ಬೆಳೆದ ರೈತರ ಸ್ಥಿತಿ ಹದಗೆಟ್ಟಿದೆ. ಬೆಳೆ ಕೈಗೆಟುಕದೇ ಕಂಗಾಲಾಗಿರುವ ರೈತರಿಗೆ ಸಣ್ಣ ಬೆಳೆಗಳಾದ ಟೊಮ್ಯಾಟೊ, ಹುರುಳಿ, ಕ್ಯಾರೆಟ್ ಸೇರಿದಂತೆ ಇತರೆ ಬೆಳೆಗಳು ಕೈಕೊಟ್ಟಿವೆ. ಕಬ್ಬು, ಭತ್ತ, ಜೋಳ ಬೆಳೆದಿದ್ದರೂ ಸಂಪೂರ್ಣ ನಷ್ಟಕ್ಕೆ ಸಿಲುಕಿದ್ದಾರೆ. ಜೊತೆಗೆ ಮಳೆಯ ಪ್ರಮಾಣ ಇಲ್ಲದ್ದರಿಂದ ಭತ್ತಕ್ಕೆ ಎಲೆಚುಕ್ಕಿ ರೋಗ ಸೇರಿದಂತೆ ಇತರೆ ರೋಗಗಳು ಬಾಧಿಸಿ ಸಂಪೂರ್ಣ ಬೆಳೆ ನಾಶವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾಜಿ ಶಾಸಕ ಡಾ.ಕೆ.ಅನ್ನದಾನಿ, ಮನ್‌ಮುಲ್ ಮಾಜಿ ಅಧ್ಯಕ್ಷ ಬಿ.ಆರ್.ರಾಮಚಂದ್ರ ಜಿಲ್ಲಾ ಜೆಡಿಎಸ್ ಅಧ್ಯಕ್ಷ ಡಿ.ರಮೇಶ್, ಎಸ್ಸಿಎಸ್ಟಿ ವಿಭಾಗದ ಜಿಲ್ಲಾಧ್ಯಕ್ಷ ಸಾತನೂರು ಜಯರಾಂ ಉಪಸ್ಥಿತರಿದ್ದರು.

ಹೆಚ್.ಡಿ.ಕುಮಾರಸ್ವಾಮಿ ಚಡ್ಡಿ ಬಗ್ಗೆ ಚಲುವರಾಯಸ್ವಾಮಿಗೇಕೆ ಚಿಂತೆ

ಬಿಜೆಪಿಯವರು ಹೇಳಿದರೆ ಕುಮಾರಸ್ವಾಮಿ ಚಡ್ಡಿನೂ ಹಾಕುತ್ತಾರೆ ಎಂಬ ಸಚಿವ ಚಲುವರಾಯಸ್ವಾಮಿ ಹೇಳಿಕೆಗೆ ಪ್ರತಿಕ್ರಿಯಿಸಿದ ಮಾಜಿ ಶಾಸಕ ಕೆ.ಸುರೇಶ್‌ಗೌಡ, ಚಲುವರಾಯಸ್ವಾಮಿ ಮೊದಲೇ ಚಡ್ಡಿ ಹಾಕ್ಕಳ್ಳಿ. ಚಡ್ಡಿ ಹಾಕು ಅಂತ ಡಿ.ಕೆ. ಶಿವಕುಮಾರ್ ಹೇಳಬೇಕಾ ಅಥವಾ ಸಿದ್ದರಾಮಯ್ಯ ಹೇಳಬೇಕಾ ಎಂದು ಪ್ರಶ್ನಿಸಿದರು. ನಾವು ಚಡ್ಡಿ ಹಾಕೋ ತೀರ್ಮಾನ ಇಲ್ಲ, ಹಾಗೆ ಇರುತ್ತೇವೆ ಅದು ಚಲುವರಾಯಸ್ವಾಮಿಗೆ ಅವಶ್ಯಕತೆ ಇಲ್ಲದ ವಿಚಾರ ಎಂದು ಟೀಕಿಸಿದರು.

ಕುಡಿದ ಅಮಲಿನಲ್ಲಿ ಯುವಕನ ಹತ್ಯೆ

ಆರೋಪಿ ಪೊಲೀಸ್ ಠಾಣೆಯಲ್ಲಿ ಶರಣು



ಚಂದನ್

ಹಲಗೂರು, ನ.23–ಕುಡಿತದ ಅಮಲಿನಲ್ಲಿ ಇಬ್ಬರು ಯುವಕರ ನಡುವೆ ಉಂಟಾದ ಜಗಳ ಒಬ್ಬನ ಕೊಲೆಯಲ್ಲಿ ಅಂತ್ಯಗೊಂಡ ಘಟನೆ ಹಲಗೂರು ಸಮೀಪದ ಬುಯ್ಯನದೊಡ್ಡಿ ಗ್ರಾಮದಲ್ಲಿ ಗುರುವಾರ ಸಂಜೆ ಜರುಗಿದೆ.

ಗೊಲ್ಲರಹಳ್ಳಿ ಗ್ರಾಮದ ವಾಸಿ ಚಂದನ್ (23) ಕೊಲೆಯಾದ ಯುವಕ. ಸಂಜೆ ಬುಯ್ಯನದೊಡ್ಡಿ ಗ್ರಾಮದ ಬಳಿಯ ಬಾರ್‌ನಲ್ಲಿ ಚಂದನ್ ಹಾಗೂ ಬೆಳ್ಳೂರು ಗ್ರಾಮದ ನಾಗರಾಜ್ ಪ್ರತ್ಯೇಕ ಟೇಬಲ್‌ನಲ್ಲಿ ಕುಳಿತು ಮದ್ಯ ಸೇವನೆ ಮಾಡಿದ್ದಾರೆ. ಈ ವೇಳೆ ಕ್ಷುಲ್ಲಕ ವಿಚಾರವಾಗಿ ಇಬ್ಬರ ನಡುವೆ ಜಗಳ ಆರಂಭವಾಗಿದೆ.

ಕೂಡಲೇ ಬಾರ್ ಸಿಬ್ಬಂದಿ ಇಬ್ಬರನ್ನು ಬಾರ್‌ನಿಂದ ಹೊರದಬ್ಬಿದ್ದಾರೆ. ಹೊರ ಬಂದ ಚಂದನ್ ಮನೆಗೆ ತೆರಳಲು ತನ್ನ ಬೈಕ್ ಹತ್ತುತ್ತಿದ್ದ ವೇಳೆ ಆತನ ತಲೆಗೆ ನಾಗರಾಜ್ ದೊಣ್ಣೆಯಿಂದ ಹೊಡೆದಿದ್ದಾನೆ. ಇದರಿಂದ ಕೆಳಗೆ ಬಿದ್ದ ಚಂದನ್ ತಲೆ ಮೇಲೆ ಕಲ್ಲು ಎತ್ತಿ ಹಾಕಿ ಬರ್ಬರವಾಗಿ ಕೊಲೆ ಮಾಡಿದ್ದಾನೆ. ನಂತರ ನಾಗರಾಜ್ ಸ್ವತಃ ಹಲಗೂರು ಪೊಲೀಸ್ ಠಾಣೆಯಲ್ಲಿ ಶರಣಾಗಿದ್ದಾನೆ. ಡಿವೈಎಸ್ಪಿ ಕೃಷ್ಣಪ್ಪ, ಸಿಪಿಐ ಶ್ರೀಧರ್, ಪಿಎಸ್‌ಐ ಮಹೇಂದ್ರ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಈ ಸಂಬಂಧ ಹಲಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕ್ಯಾತನಹಳ್ಳಿ: ಸಾಲಬಾಧೆಯಿಂದ ರೈತ ಆತ್ಮಹತ್ಯೆ



ಪಾಂಡವಪುರ, ನ.23–ಸಾಲಬಾಧೆ ತಾಳಲಾರದೆ ರೈತನೋರ್ವ ಮನೆಯ ಸೂರಿಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಕ್ಯಾತನಹಳ್ಳಿಯಲ್ಲಿ ಬುಧವಾರ ಸಂಜೆ ನಡೆದಿದೆ.

ಗ್ರಾಮದ ಕೃಷ್ಣೇಗೌಡ ಅವರ ಮಗ ಕೆ.ಉಮೇಶ್ (45) ಆತ್ಮಹತ್ಯೆ ಮಾಡಿಕೊಂಡ ರೈತ. ಈತ ಕ್ಯಾತನಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘದ ಮಾಜಿ ಉಪಾಧ್ಯಕ್ಷ ಹಾಗೂ ಹಾಲಿ ನಿರ್ದೇಶಕರಾಗಿದ್ದು, 1.5 ಎಕರೆ ಜಮೀನಿನಲ್ಲಿ ತರಕಾರಿ ಬೆಳೆದು ಕೈಸುಟ್ಟಿಕೊಂಡಿದ್ದರು. ನಂತರ ವಿವಿಧ ಸಹಕಾರಿ ಬ್ಯಾಂಕ್‌ಗಳಿಂದ ಸಾಲ ಪಡೆದು ತೆಂಗು, ಅಡಕೆಯೊಂದಿಗೆ ಇತರೆ ಮಿಶ್ರ ಬೆಳೆಗಳನ್ನು ಬೆಳೆದಿದ್ದರು ಎನ್ನಲಾಗಿದೆ.

ಆದರೆ ಬರ ಹಿನ್ನೆಲೆಯಲ್ಲಿ ಫಸಲು ಕೈಸೇರದೆ ಸಾಲದ ಸುಳಿಗೆ ಸಿಲುಕಿದ್ದರು. ಕ್ಯಾತನಹಳ್ಳಿಯ ಜಿಲ್ಲಾ ಸಹಕಾರ ಬ್ಯಾಂಕ್‌ನಲ್ಲಿ ಚಿನ್ನಾಭರಣಗಳ ಮೇಲಿನ ಸಾಲ 6 ಲಕ್ಷ ರೂ., ಕೃಷಿ ಪತ್ತಿನ ಸಹಕಾರ ಸಂಘದಲ್ಲಿ 3–4 ಲಕ್ಷ ರೂ. ಸಾಲ ಹಾಗೂ ಖಾಸಗಿ ಲೇವಾದೇವಿದಾರರಿಂದ ಲಕ್ಷಾಂತರ ರೂ. ಸಾಲ ಮಾಡಿದ್ದರು. ಬ್ಯಾಂಕ್ ಸೇರಿದಂತೆ ಇತರೆಡೆಗಳಿಂದ ಸಾಲ ಮರುಪಾವತಿಸುವಂತೆ ಒತ್ತಡ ಹೆಚ್ಚಾದ ಹಿನ್ನೆಲೆಯಲ್ಲಿ ಮನೆಯಲ್ಲಿ ಯಾರೂ ಇಲ್ಲದ ಸಮಯದಲ್ಲಿ ತಮ್ಮ ಮನೆಯ ಸೂರಿಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮೃತ ರೈತನಿಗೆ ಪತ್ನಿ, ಓರ್ವ ಪುತ್ರಿ ಹಾಗೂ ಓರ್ವ ಪುತ್ರ ಇದ್ದಾರೆ. ಈ ಸಂಬಂಧ ಮೃತ ರೈತನ ಸಹೋದರ ಗೋಪಾಲ್ ಶ್ರೀರಂಗಪಟ್ಟಣ ಗ್ರಾಮಾಂತರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಪ್ರೊ.ಬಿಳೀಗೌಡ ನಿಧನ



ಭಾರತೀನಗರ, ನ.23–ಸಮೀಪದ ದೊಡ್ಡ ರಸಿನಕೆರೆ ಗ್ರಾಮದ ಶ್ರೀ ಕಾಳಿಕಾಂಭ ಪ್ರೌಢ ಶಾಲೆಯ ನಿರ್ದೇಶಕ ಹಾಗೂ ಭಾರತೀ ಕಾಲೇಜಿನ ನಿವೃತ್ತ ಪ್ರಾಧ್ಯಾಪಕ ಪ್ರೊ. ಹೆಚ್.ಬಿಳೀಗೌಡ (80) ಅವರು ಹೃದಯಾಘಾತದಿಂದ ಗುರುವಾರ ನಿಧನರಾದರು. ಮೃತರು ಪತ್ನಿ ಜಯಮ್ಮ, ಒಬ್ಬ ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಸ್ವಗ್ರಾಮ ದೊಡ್ಡರಸಿನಕೆರೆಯ ಮೃತರ ಜಮೀನಿನಲ್ಲಿ ಶುಕ್ರವಾರ ಬೆಳಗ್ಗೆ 11 ಗಂಟೆಗೆ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

ಸಂತಾಪ: ಮಾಜಿ ಸಚಿವ ಡಿ.ಸಿ.ತಮ್ಮಣ್ಣ ವಿಧಾನಪರಿಷತ್ ಸದಸ್ಯ ಮಧು ಜಿ. ಮಾದೇಗೌಡ, ಭಾರತೀ ಕಾಲೇಜಿನ ವಿವಿಧ ಅಂಗಸಂಸ್ಥೆಯ ಪ್ರಾಂಶುಪಾಲರು, ಪ್ರಾಧ್ಯಾಪಕರು, ಕಾಳಿಕಾಂಭ ಪ್ರೌಢ ಶಾಲೆಯ ಆಡಳಿತ ಮಂಡಳಿಯವರು ಸಂತಾಪ ಸೂಚಿಸಿದ್ದಾರೆ.

ಪಿಯು ಶಿಕ್ಷಣ ಇಲಾಖೆ ಹೆಸರು ಬದಲಾವಣೆ ವಿರೋಧಿಸಿ ಪ್ರತಿಭಟನೆ



ಮಂಡ್ಯ, ನ.23–ಪದವಿಪೂರ್ವ ಶಿಕ್ಷಣ ಅಸ್ಮಿತೆಯನ್ನು ಯಥಾಸ್ಥಿತಿ ಕಾಪಾಡುವಂತೆ ಒತ್ತಾಯಿಸಿ ವಿಧಾನ ಪರಿಷತ್ ಮಾಜಿ ಸದಸ್ಯ ಕೆ.ಟಿ.ಶ್ರೀಕಂಠೇಗೌಡ ನೇತೃತ್ವದಲ್ಲಿ ವಿವಿಧ ಕಾಲೇಜಿನ ಪ್ರಾಂಶುಪಾಲರು ಹಾಗೂ ಉಪನ್ಯಾಸಕರು ನಗರದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು.

ನಗರದ ಪದವಿಪೂರ್ವ ಶಿಕ್ಷಣ ಇಲಾಖೆ ಕಚೇರಿಯ ಆವರಣದಿಂದ ರಾಜ್ಯ ಪದವಿ ಪೂರ್ವ ಶಿಕ್ಷಣ ಇಲಾಖೆಯ ಪ್ರಾಂಶುಪಾಲರು, ಉಪನ್ಯಾಸಕರು, ಗ್ರಂಥಪಾಲಕರು ಮತ್ತು ಬೋಧಕೇತರ ನೌಕರರ ಒಕ್ಕೂಟ ಆಶ್ರಯದಲ್ಲಿ ಮೆರವಣಿಗೆ ಹೊರಟು ಜಿಲ್ಲಾಧಿಕಾರಿ ಕಚೇರಿ ಬಳಿಗೆ ತೆರಳಿ ಮನವಿ ಸಲ್ಲಿಸಲಾಯಿತು. ಪದವಿಪೂರ್ವ ಶಿಕ್ಷಣ ಇಲಾಖೆಯ ಹೆಸರನ್ನು ಶಾಲಾ ಶಿಕ್ಷಣ ಇಲಾಖೆ ಎಂದು ಬದಲಿಸಲಾಗಿದ್ದು, ಕರ್ನಾಟಕ ಪಬ್ಲಿಕ್ ಸ್ಕೂಲ್ ಹೆಸರಿನಲ್ಲಿ ಪಿಯು ಹಂತವನ್ನು ಪ್ರೌಢಶಾಲೆಗಳಲ್ಲಿ ವಿಲೀನಗೊಳಿಸುವ ಪ್ರಕ್ರಿಯೆ ನಡೆಸಲಾಗುತ್ತಿದೆ. ಕೂಡಲೇ ಇಂತಹ ಪ್ರಕ್ರಿಯೆ ಕೈಬಿಟ್ಟು ಪದವಿಪೂರ್ವ ಶಿಕ್ಷಣ ಇಲಾಖೆ ಎಂಬ ಹೆಸರನ್ನೇ ಯಥಾಸ್ಥಿತಿಯಲ್ಲಿ ಮುಂದುವರೆಸಬೇಕು. ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯಲ್ಲಿ ವಿಲೀನಗೊಳಿಸಿರುವ ಪರೀಕ್ಷಾ ವಿಭಾಗವನ್ನು ತೆಗೆದು ಪುನಃ ಪದವಿಪೂರ್ವ ಶಿಕ್ಷಣ ಇಲಾಖೆಯಲ್ಲೇ ಉಳಿಸುವ ಮೂಲಕ ಶೈಕ್ಷಣಿಕ ಮತ್ತು ಪರೀಕ್ಷಾ ವಿಭಾಗಗಳ ನಡುವೆ ಹಳಿ ತಪ್ಪಿರುವ ಸಮನ್ವಯವನ್ನು ಮರುಸ್ಥಾಪಿಸ ಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಪ್ರತಿ ಜಿಲ್ಲಾ ಹಂತಗಳಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆ ಮೇಲುಸ್ತುವಾರಿಯನ್ನು ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಶಾಲಾ ಶಿಕ್ಷಣ ಇಲಾಖೆ ಅಪರ ಆಯುಕ್ತರಿಗೆ ವಹಿಸಲು ಸರ್ಕಾರದ ಅಧೀನ ಕಾರ್ಯದರ್ಶಿ ಹೊರಡಿಸಿರುವ ಸುತ್ತೋಲೆಯನ್ನು ಕೂಡಲೇ ಹಿಂಪಡೆಯಬೇಕು. ಜಿಲ್ಲಾ ಉಪನಿರ್ದೇಶಕರ ಕಚೇರಿಯ ಆಡಳಿತ, ಶೈಕ್ಷಣಿಕ, ಪರೀಕ್ಷೆ, ಲೆಕ್ಕಪತ್ರ ಹಾಗೂ ಇತರೆ ಕಾರ್ಯಚಟುವಟಿಕೆಗಳನ್ನು ಸುಗಮ ಹಾಗೂ ಸುಲಲಿತವಾಗಿ ನಡೆಸಲು ಮೂರು ಅಧೀಕ್ಷಕರು, ಆರು ಪ್ರಥಮ ದರ್ಜೆ ಸಹಾಯಕರು, ಆರು ದ್ವಿತೀಯ ದರ್ಜೆ ಸಹಾಯಕರು, ಮೂರು ಗ್ರೂಪ್–ಡಿ ಹುದ್ದೆಗಳನ್ನು ಮಂಜೂರು ಮಾಡುವ ಮೂಲಕ ಜಿಲ್ಲಾ ಉಪನಿರ್ದೇಶಕರ ಕಚೇರಿಯನ್ನು ಬಲಪಡಿಸಬೇಕು. ಸರ್ಕಾರಿ ಪದವಿಪೂರ್ವ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಹುದ್ದೆಗಳನ್ನು ಮಂಜೂರು ಮಾಡಬೇಕು ಎಂದು ಆಗ್ರಹಿಸಿದರು.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ನಾಗಮಂಗಲ, ನ.23–ಬೆಳ್ಳೂರು ಉಪ ವಿಭಾಗ ವ್ಯಾಪ್ತಿಯ ಎ.ಸಿ.ಗಿರಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣೆ ಹಮ್ಮಿಕೊಂಡಿರುವುದರಿಂದ ನ.25 ರಂದು ಬೆಳಗ್ಗೆ 10 ರಿಂದ ಸಂಜೆ 6ರವರೆಗೆ ಚುಂಚನಹಳ್ಳಿ, ಆರಣಿ ಗ್ರಾಮ ಪಂಚಾಯಿತಿಯ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಇಂದು ಪ್ರತಿಷ್ಠಾಪನೆ ಕಾರ್ಯಕ್ರಮ



ಮದ್ದೂರು, ನ.23– ತಾಲೂಕಿನ ಹುಣಸೇಮರದೊಡ್ಡಿ ಗ್ರಾಮದ ಶ್ರೀ ಮಾರಮ್ಮದೇವಿ ದೇವಾಲಯದ ರಾಜಗೋಪುರ, ವಿಮಾನ ಗೋಪುರ, ನಾಗದೇವತೆ, ವಿಗ್ರಹ ಅಷ್ಟ ಬಂಧನ ಪ್ರತಿಷ್ಠಾಪನೆ, ಶಿಲಾಬಿಂಬ ಜೀರ್ಣೋದ್ಧಾರ ಹಾಗೂ ಕುಂಭಾಭಿಷೇಕ ನ.24ರಂದು ನಡೆಯಲಿದೆ.

ಗುರುವಾರ ಸಂಜೆ ಮೀಸಲು ನೀರು ತಂದು, ಗಂಗೆ ಪೂಜೆ, ಗ್ರಾಮದ ಪ್ರದಕ್ಷಿಣೆ, ಗಣಪತಿ ಪೂಜೆ, ಶುದ್ಧ ಪುಣ್ಯಾಹ, ಕಳಸ ಸ್ಥಾಪನೆ, ವಾಸ್ತುಪೂಜೆ ಹೋಮ, ಮಹಾಮಂಗಳಾರತಿ ನೆರವೇರಿಸಿ ತೀರ್ಥ ಪ್ರಸಾದ ವಿತರಿಸಲಾಯಿತು.

ಶುಕ್ರವಾರ ಬೆಳಗ್ಗೆ 7 ಗಂಟೆಗೆ ಜಪ, ವೇದಾಪಾರಾಯಣ, ವೇದಿಕಾರ್ಚನೆ, ಯಾಗಶಾಲಾ ಪ್ರವೇಶ, ನಾಡಿ ಸಂಧಾನ, ಗಣಪತಿ, ನವಗ್ರಹ, ಮೃತ್ಯುಂಜಯ, ಅಷ್ಟಲಕ್ಷ್ಮಿ, ದುರ್ಗಾ, ಮಹಾಪೂರ್ಣಹುತಿ, ಕುಂಭಾಭಿಷೇಕ, ದೇವಿಗೆ ಪಂಚಾಮೃತ ಅಭಿಷೇಕ, ವಿಶೇಷ ಅಲಂಕಾರ, ಗೋ ಪೂಜೆ ನಡೆಯಲಿದೆ. ಬೆಳಗ್ಗೆ 10ಕ್ಕೆ ಮಾರಮ್ಮ ದೇವಿ, ಮುನೇಶ್ವರಸ್ವಾಮಿಗೆ ಹೂವು, ಹೊಂಬಾಳೆ, ತಂಬಿಟ್ಟಿನಾರತಿ ಸಮೇತ ಆಲಯ ಪ್ರವೇಶ, ನಂತರ ಮಹಾ ಮಂಗಳಾರತಿ ನೆರವೇರಿಸಲಾಗುವುದು. ಬೆಳಗ್ಗೆ 11ಕ್ಕೆ ಶ್ರೀ ನಂಜಾವಧೂತ ಸ್ವಾಮೀಜಿ ಸಾನ್ನಿಧ್ಯದಲ್ಲಿ ಪುಷ್ಪವೃಷ್ಟಿಯೊಂದಿಗೆ ಆಲಯಕ್ಕೆ ಸ್ವಾಗತಿಸಲಾಗುವುದು. ಮಧ್ಯಾಹ್ನ 12ಕ್ಕೆ ಅನ್ನಸಂತರ್ಪಣೆ ಹಮ್ಮಿಕೊಳ್ಳಲಾಗಿದೆ ಎಂದು ಹುಣಸೇಮರದೊಡ್ಡಿ ಗ್ರಾಮಸ್ಥರು ಹಾಗೂ ಮಾರಮ್ಮ ಮುನೇಶ್ವರಸ್ವಾಮಿಯ ಸೇವಾ ಟ್ರಸ್ಟ್ ಪದಾಧಿಕಾರಿಗಳು ತಿಳಿಸಿದ್ದಾರೆ.

ಮೈಸೂರು ನಗರ ಪೊಲೀಸರ ವಿಶೇಷ ಕಾರ್ಯಾಚರಣೆ

ದೋಷವುಳ್ಳ ನಂಬರ್ ಪ್ಲೇಟ್, ವಾಹನ ಸವಾರರು, ತ್ರಿಬಲ್ ರೈಡಿಂಗ್ ಮಾಡುವವರಿಗೆ ಬಿಸಿ



ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಸಿದ್ಧಾರ್ಥನಗರದಲ್ಲಿ ಗುರುವಾರ ರಾತ್ರಿ ವಾಹನ ತಪಾಸಣೆ ವೀಕ್ಷಿಸಿದರು.

ಮೈಸೂರು, ನ.23(ಎಸ್‌ಬಿಡಿ)– ಮೈಸೂರು ನಗರ ಪೊಲೀಸರು ವಿಶೇಷ ಕಾರ್ಯಾಚರಣೆ ಮೂಲಕ ದೋಷಪೂರಿತ ನಂಬರ್ ಪ್ಲೇಟ್‌ವುಳ್ಳ ವಾಹನ ಮಾಲೀಕರು ಹಾಗೂ ತ್ರಿಬಲ್ ರೈಡಿಂಗ್ ಮಾಡುವವರಿಗೆ ಬಿಸಿ ಮುಟ್ಟಿಸಿದ್ದಾರೆ.

ಇತ್ತೀಚೆಗೆ ಯುವಕರು ದ್ವಿಚಕ್ರ ವಾಹನಗಳ ನಂಬರ್ ಮರೆಮಾಚಿ ವ್ಹೀಲಿಂಗ್ ಮಾಡುವುದು ಹೆಚ್ಚಾಗಿತ್ತು. ಸಂಚಾರ ನಿಯಮ ಉಲ್ಲಂಘನೆ ಮಾಡುವಾಗ ಪೊಲೀಸರ ದಂಡದಿಂದ ತಪ್ಪಿಸಿಕೊಳ್ಳಲು ನಂಬರ್ ಪ್ಲೇಟ್‌ಗೆ ಸ್ಟಿಕ್ಕರ್ ಅಂಟಿಸುತ್ತಿದ್ದರು. ಅಲ್ಲದೆ ಈ ರೀತಿಯ ಖತರ್ನಾಕ್ ಐಡಿಯಾ ಮೂಲಕ ಕಳ್ಳತನ ಇನ್ನಿತರ ದುಷ್ಕೃತ್ಯಗಳನ್ನು ನಡೆಸುವ ಸಾಧ್ಯತೆಯೂ ಇತ್ತು. ಹಾಗಾಗಿ ಇಂತಹವರ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿ, ಎಚ್ಚರಿಸುತ್ತಿದ್ದಾರೆ.

ವಿಶೇಷ ತಪಾಸಣೆಯಲ್ಲಿ ನ.1ರಿಂದ 19ರವರೆಗೆ 63 ತ್ರಿಬಲ್ ರೈಡಿಂಗ್ ಹಾಗೂ 94 ದೋಷಪೂರಿತ ನಂಬರ್ ಪ್ಲೇಟ್ ಪ್ರಕರಣಗಳನ್ನು ದಾಖಲಿಸಿದ್ದಾರೆ. ದೋಷಪೂರಿತ ಹಾಗೂ ನಕಲಿ ನಂಬರ್ ಪ್ಲೇಟ್ ಹಾಕಿಕೊಂಡಿದ್ದವರ ವಿರುದ್ಧ ವಂಚನೆ (ಐಪಿಸಿ 420) ಆರೋಪದಡಿ ಪ್ರಕರಣ ದಾಖಲಿಸಲಾಗುತ್ತಿದೆ. ಒಟ್ಟಾರೆ ಪ್ರಸಕ್ತ ವರ್ಷದಲ್ಲಿ 1,713 ತ್ರಿಬಲ್ ರೈಡಿಂಗ್ ಹಾಗೂ ದೋಷಪೂರಿತ ನಂಬರ್ ಪ್ಲೇಟ್ ಆರೋಪದಡಿ 1,964 ಪ್ರಕರಣಗಳನ್ನು ದಾಖಲಿಸಲಾಗಿದೆ. ಸಂಚಾರ ನಿಯಮ ಉಲ್ಲಂಘಿಸುವವರ ವಿರುದ್ಧ ವಿಶೇಷ ಕಾರ್ಯಾಚರಣೆಯು ಮುಂದುವರೆಯಲಿದ್ದು, ಸಂಚಾರ ನಿಯಮ ಉಲ್ಲಂಘಿಸುವವರ ವಿರುದ್ಧ ಕಾನೂನಿನ ರೀತ್ಯಾ ಕಟ್ಟುನಿಟ್ಟಿನ ಕ್ರಮಕೈಗೊಳ್ಳಲಾಗುವುದು ಎಂದು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಎಚ್ಚರಿಕೆ ನೀಡಿದ್ದಾರೆ.

25 ಕಡೆ ಸಂಜೆ ವಿಶೇಷ ತಪಾಸಣೆ

ಮೈಸೂರಿನ ಸುಮಾರು 25 ಸ್ಥಳಗಳಲ್ಲಿ ಸಂಜೆ ವೇಳೆ ವಿಶೇಷ ತಪಾಸಣಾ ಕಾರ್ಯಾಚರಣೆ ಆರಂಭಿಸಲಾಗಿದೆ. ಈ ಹಿನ್ನೆಲೆಯಲ್ಲಿ ಸಿದ್ಧಾರ್ಥನಗರದಲ್ಲಿ ಗುರುವಾರ ರಾತ್ರಿ ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ತಪಾಸಣೆ ವೀಕ್ಷಿಸಿದರು. ದ್ವಿಚಕ್ರ ವಾಹನ ಹಾಗೂ ಕಾರುಗಳಲ್ಲಿ ತಪಾಸಣೆ ನಡೆಸುವುದನ್ನು ಗಮನಿಸಿ, ಸಿಬ್ಬಂದಿಗೆ ಸೂಕ್ತ ಮಾರ್ಗದರ್ಶನ ನೀಡಿದರು. ಈ ಸಂಬಂಧ ಪ್ರತಿಕ್ರಿಯಿಸಿದ ಅವರು, ಕಾನೂನು ಬಾಹಿರ ಚಟುವಟಿಕೆಗಳಿಗೆ ಆಸ್ಪದ ನೀಡದಂತೆ ಹಾಗೂ ಸಂಚಾರ ನಿಯಮ ಅನುಷ್ಠಾನ ನಿಟ್ಟಿನಲ್ಲಿ ಸಂಜೆ ವೇಳೆ ವಿಶೇಷ ಕಾರ್ಯಾಚರಣೆ ಆರಂಭಿಸಲಾಗಿದೆ. ಕೆಲವರು ದ್ವಿಚಕ್ರ ವಾಹನದಲ್ಲಿ ಹೈಬೀಮ್ ಲೈಟ್ ಬಳಸಿ ಸಾರ್ವಜನಿಕರಿಗೆ ತೊಂದರೆ ಕೊಡುತ್ತಾರೆ. ನಂಬರ್ ಪ್ಲೇಟ್‌ನಲ್ಲಿ ಒಂದು ನಂಬರ್‌ಗೆ ಸ್ಟಿಕ್ಕರ್ ಅಂಟಿಸುತ್ತಾರೆ. ನಕಲಿ ನಂಬರ್ ಪ್ಲೇಟ್ ಹಾಕಿರುತ್ತಾರೆ. ಅಂತಹವರ ವಿರುದ್ಧ ಎಫ್‌ಐಆರ್ ಹಾಕಲಾಗುತ್ತಿದೆ ಎಂದು ತಿಳಿಸಿದರು.

ಸ್ಪರ್ಧಾತ್ಮಕ ಪರೀಕ್ಷೆಗೆ ಉಚಿತ ತರಬೇತಿ

ಮೈಸೂರು, ನ.23–ಬೆಂಗಳೂರಿನ ವಿಜಯನಗರದಲ್ಲಿರುವ ಎನ್ ಲೈಟ್ ಅಕಾಡೆಮಿ ವತಿಯಿಂದ ಪೊಲೀಸ್ ಪೇದೆ ಸೇರಿದಂತೆ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 6 ತಿಂಗಳ ಕಾಲ ಉಚಿತ ತರಬೇತಿ ಹಮ್ಮಿಕೊಳ್ಳಲಾಗಿದೆ. ತರಬೇತಿ ಶಿಬಿರ ಡಿಸೆಂಬರ್ 1ರಿಂದ ಪ್ರಾರಂಭವಾಗಲಿದ್ದು, ಆಸಕ್ತರು ಎನ್ ಲೈಟ್ ಅಕಾಡೆಮಿ, ವಿಜಯನಗರ 9ನೇ ಮುಖ್ಯ ರಸ್ತೆ ವಿಜಯನಗರ ಮೆಟ್ರೋ ನಿಲ್ದಾಣದ ಹತ್ತಿರ ಬೆಂಗಳೂರು ವಿಳಾಸವನ್ನು ಸಂಪರ್ಕಿಸಬಹುದು. ಹೆಚ್ಚಿನ ಮಾಹಿತಿಗಾಗಿ ಮೊಬೈಲ್:7892935570, 8553153553ಗೆ ಕರೆ ಮಾಡಬಹುದೆಂದು ನಿವೃತ್ತ ಜಿಲ್ಲಾಧಿಕಾರಿ ಎ. ಮಹದೇವ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಾತಿ ಗಣತಿ ಬಗ್ಗೆ ಆಸಕ್ತಿ ತೋರುವ ಕಾಂಗ್ರೆಸ್ ನಾಯಕರಿಗೆ ಜಾತ್ಯಾತೀತತೆ ಬಗ್ಗೆ ಮಾತನಾಡುವ ನೈತಿಕತೆ ಇಲ್ಲ



ಮೈಸೂರು, ನ.23–ಜಾತಿ ಗಣತಿ ಬಗ್ಗೆ ಅತೀವ ಆಸಕ್ತಿ ತೋರುತ್ತಿರುವ ಕಾಂಗ್ರೆಸ್ ನಾಯಕರಿಗೆ ಜಾತ್ಯಾತೀತತೆ ಬಗ್ಗೆ ಮಾತನಾಡುವ ನೈತಿಕತೆ ಇದೆಯೇ? ಎಂದು ಮಾಜಿ ಮೇಯರ್ ಸಂದೇಶ್‌ಸ್ವಾಮಿ ಪ್ರಶ್ನಿಸಿದ್ದಾರೆ.

ಭಾರತದ ಅಭಿವೃದ್ಧಿಗೆ ಜಾತಿ ವ್ಯವಸ್ಥೆ ತೊಡಕಾಗಿದೆ ಎಂದು ಕೇಳುತ್ತಲೇ ಬಂದಿದ್ದೇವೆ. ಹನ್ನೆರಡನೇ ಶತ ಮಾನದ ಬಸವಾದಿ ಶರಣರು ಸೇರಿದಂತೆ ಎಲ್ಲಾ ಮಹಾತ್ಮರೂ ಜಾತೀಯತೆ ಅಳಿಯಬೇಕು ಎಂದು ತಮ್ಮದೇ ಆದ ಮಾರ್ಗದಲ್ಲಿ ಜಾಗೃತಿ ಮೂಡಿಸಿದ್ದಾರೆ. ಆದರೆ ಇದಕ್ಕೆ ವ್ಯತಿರಿಕ್ತವಾದ ಬೆಳವಣಿಗೆ ಕರ್ನಾಟಕದಲ್ಲಿ ನಡೆಯುತ್ತಿದೆ. ಸಮಾಜದ ಸಾಮರಸ್ಯ ಕದಡುವ, ಸಮುದಾಯ ಗಳ ನಡುವೆ ಅಸಮಾನತೆಗೆ ಪ್ರೋತ್ಸಾಹಿಸುವ ಜಾತಿ ಗಣತಿ ಮುನ್ನೆಲೆಗೆ ಬಂದಿರುವುದು ಅತ್ಯಂತ ವಿಷಾದನೀಯ ಎಂದಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ಅದೆಷ್ಟೋ ವೇದಿಕೆಯಲ್ಲಿ ಜಾತ್ಯಾತೀತತೆ ಬಗ್ಗೆ ಮಾತನಾಡಿದ್ದಾರೆ. ತುರ್ತು ಪರಿಸ್ಥಿತಿಯಲ್ಲಿ ರಕ್ತ ಬೇಕಾದಾಗ ಜಾತಿ ನೋಡುತ್ತೀರಾ? ಎಂದು ಪ್ರಶ್ನಿಸಿದ್ದಾರೆ. ಎಲ್ಲರ ದೇಹದಲ್ಲೂ ಕೆಂಪು ರಕ್ತವೇ ಇರುವುದು ಎಂದು ಸಮಾನತೆಯನ್ನು ಅರ್ಥೈಸಲು ಪ್ರಯತ್ನಿಸಿದ್ದಾರೆ. ಅಂತಹವರು ಮತ್ತೊಂದೆಡೆ ಜಾತಿ ಗಣತಿ ಮೂಲಕ ಸಮಾಜದಲ್ಲಿ ಜಾತಿ ಚರ್ಚೆ ಹುಟ್ಟು ಹಾಕಿದ್ದಾರೆ ಎಂದು ಸಂದೇಶ್ ಸ್ವಾಮಿ ಬೇಸರ ವ್ಯಕ್ತಪಡಿಸಿದ್ದಾರೆ.

ಎಲ್ಲವೂ ಜಾತಿ ಆಧಾರದಲ್ಲಿ ನಡೆದರೆ ಜಾತ್ಯಾತೀತತೆ ಗಟ್ಟಿಯಾಗಲು ಹೇಗೆ ಸಾಧ್ಯವಾಗುತ್ತದೆ. ತಳ ಸಮುದಾಯಗಳನ್ನು ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯವಾಗಿ ಮೇಲೆತ್ತುವುದು ಅತ್ಯಗತ್ಯ. ಆದರೆ ಜಾತಿ ಗಣತಿಗೂ ಈ ಉದ್ದೇಶಗಳಿಗೂ ಸಂಬಂಧವಿದ್ದಂತಿಲ್ಲ. ರಾಮಕೃಷ್ಣ ಹೆಗಡೆಯವರು, ಡಿ.ದೇವರಾಜ ಅರಸರು, ಹೆಚ್.ಡಿ.ದೇವೇಗೌಡರು, ಬಿ.ಎಸ್.ಯಡಿಯೂರಪ್ಪನವರು, ಸಿದ್ದರಾಮಯ್ಯನವರೂ ಕೂಡ ಜಾತಿ ಆಧಾರದಲ್ಲಿ ರಾಜಕೀಯ ಮಾಡಿಕೊಂಡು ಬಂದು ಮುಖ್ಯಮಂತ್ರಿಯಾದವರಲ್ಲ. ಹಾಗೇನಾದರೂ ಆಗಿದ್ದರೆ ಸಿದ್ದರಾಮಯ್ಯನವರು ಚಾಮುಂಡೇಶ್ವರಿ ಉಪ ಚುನಾವಣೆಯಲ್ಲಿ ಗೆಲ್ಲಲಾಗುತ್ತಿರಲಿಲ್ಲ. ಎಲ್ಲಾ ಜಾತಿಯವರೂ ಮತ ಹಾಕಿ ಆಶೀರ್ವದಿಸಿದ್ದರಿಂದಲೇ ಅವರು ಎರಡು ಬಾರಿ ಮುಖ್ಯಮಂತ್ರಿಯಾಗಲು ಸಾಧ್ಯವಾಗಿದ್ದು. ಈಗ ಜಾತಿ ಗಣತಿ ಮೂಲಕ ಸಂಖ್ಯಾಬಲ ತಿಳಿಸುವ ಪ್ರಯತ್ನ ಯಾಕೆ ಎಂಬುದೇ ಯಕ್ಷಪ್ರಶ್ನೆಯಾಗಿದೆ ಎಂದಿದ್ದಾರೆ.

ರಾಜಕೀಯ ಉದ್ದೇಶದಿಂದ ಜಾತಿ ಗಣತಿಯನ್ನು ಅಸ್ತ್ರವಾಗಿ ಬಳಸಿಕೊಳ್ಳಲಾಗುತ್ತಿದೆ ಎಂಬುದು ಜನರ ಅಭಿಪ್ರಾಯ. ಜಾತಿ ಗಣತಿ ಬಗ್ಗೆ ಪರ–ವಿರೋಧ ಚರ್ಚೆಗಳು ಸಮಾಜದ ಸಾಮರಸ್ಯ ಹಾಗೂ ಅಭಿವೃದ್ಧಿಗೆ ಪೂರಕವಲ್ಲ. ಜಾತಿಗಳ ನಡುವೆ ವೈಷಮ್ಯ ಬೆಳೆದು ಸಮಾಜದ ಸ್ವಾಸ್ಥ್ಯ ಹಾಳಾಗಬಹುದು. ಜಾತಿ ಗಣತಿ ವಿಚಾರವನ್ನು ಜನ ಸರಿಯಾಗಿ ಅರ್ಥೈಸಿಕೊಳ್ಳಬೇಕು. ವಾಸ್ತವವನ್ನು ಜನರಿಗೆ ತಿಳಿಸುವುದು ಸರ್ಕಾರದ ಕರ್ತವ್ಯ ಕೂಡ. ಈ ಬಗ್ಗೆ ಸಿಎಂ ಸಿದ್ದರಾಮಯ್ಯನವರು ಮತ್ತೊಮ್ಮೆ ಚಿಂತನೆ ನಡೆಸಬೇಕು ಎಂದು ಆಗ್ರಹಿಸಿದ್ದಾರೆ.

ನಮ್ಮ ಬದುಕು ಪ್ರದರ್ಶನವಾಗಬಾರದು, ನಿದರ್ಶನವಾಗಬೇಕು

ಪುನೀತ್ ರಾಜ್‌ಕುಮಾರ್ ಬದುಕು ಬಣ್ಣಿಸಿದ ಚಿಂತಕ ಶಂಕರ್ ದೇವನೂರು



ಮೈಸೂರು, ನ. 23– ಮೈಸೂರಿನ ಎಂಜಿ ರಸ್ತೆಯಲ್ಲಿರುವ ಸಿಪಾಯಿ ಗ್ರಾಂಡ್ ಹೋಟೆಲ್‌ನಲ್ಲಿ ಏರ್ಪಡಿಸಿದ್ದ ವಿಶೇಷ ಕಾರ್ಯಕ್ರಮದಲ್ಲಿ ಎಸ್. ಕೆ. ಫೌಂಡೇಶನ್ ಟ್ರಸ್ಟ್ ವತಿಯಿಂದ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ಈ ವೇಳೆ ವಿವಿಧ ಕ್ಷೇತ್ರದ ಸಾಧಕರಿಗೆ ಕನ್ನಡ ಅಭಿಮಾನಿ ಕಲ್ಪತರು ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು.

ಪವರ್ ಸ್ಟಾರ್ ಪುನೀತ್ ರಾಜಕುಮಾರ್ ಭಾವಚಿತ್ರಕ್ಕೆ ವರನಟ ಡಾ. ರಾಜ್‌ಕುಮಾರ್ ಪುತ್ರಿ ಲಕ್ಷ್ಮಿ ಗೋವಿಂದರಾಜು ಹಾಗೂ ಅವರ ಪತಿ ಗೋವಿಂದರಾಜು ಪುಷ್ಪ ನಮನ ಸಲ್ಲಿಸಿದರು. ತದನಂತರ ಕರ್ನಾಟಕದ ವಿವಿಧ ಜಿಲ್ಲೆಯ 55 ಸಾಧಕರನ್ನು ಗುರುತಿಸಿ ಕನ್ನಡ ಅಭಿಮಾನಿ ಕಲ್ಪತರು ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಚಿಂತಕ ಹಾಗೂ ವಿಶ್ರಾಂತ ಮುಖ್ಯ ಅಭಿಯಂತರ ಶಂಕರ್ ದೇವನೂರು ಮಾತನಾಡಿ, ನಮ್ಮ ಬದುಕು ಬೆಳಕಾಗಬೇಕು, ಬದುಕು ಬಯಲಾಗಬೇಕು, ಇದುವೇ ಜೀವನ ಎಂದು ಹೇಳಿದರು. ನೂರು ವರ್ಷ ಬದುಕಿದರೆ ಅದು ಸಾರ್ಥಕವಾಗಲಾರದು. ಯಾರಿಗಾಗಿ ನಾನು ಬದುಕಿದ್ದೇನೆ, ಯಾವ ಸೇವೆಯನ್ನು ಮಾಡಿದ್ದೇನೆ ಎಂಬ ನಿದರ್ಶನದ ಮೇಲೆ ಬದುಕು ಸಾರ್ಥಕವಾಗಬೇಕು ಎಂದು ಅಭಿಪ್ರಾಯಪಟ್ಟರು. ನಮ್ಮ ಬದುಕು ಪ್ರದರ್ಶನವಾಗಬಾರದು, ನಿದರ್ಶನವಾಗಬೇಕು. ಅದಕ್ಕೆ ಪ್ರತ್ಯಕ್ಷ ಸಾಕ್ಷಿ ಅಪ್ಪು. ಬದುಕು ಹೇಗಿರಬೇಕು ಎಂಬ ಬಗ್ಗೆ ಬಸವಣ್ಣನವರ ವಚನ ಉಲ್ಲೇಖಿಸಿ ಶಂಕರ್ ದೇವನೂರು ತಿಳಿಸಿಕೊಟ್ಟರು.

ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರಾದ ಡಾ.ಎನ್.ಕೆ.ಲೋಲಾಕ್ಷಿ, ಉದ್ಯಮಿ ಚೇತನ್ ಕುಮಾರ್, ಕಾಂಗ್ರೆಸ್ ಮುಖಂಡರಾದ ಶ್ರೀನಾಥ್ ಬಾಬು, ಎಸ್.ಕೆ. ಫೌಂಡೇಶನ್ ಅಧ್ಯಕ್ಷ ಸಂತೋಷ್ ಕಿರಾಳು, ಅಂತರರಾಷ್ಟ್ರೀಯ ಜಾನಪದ ಗಾಯಕ ಅಮ್ಮ ರಾಮಚಂದ್ರ, ಹರೀಶ್ ನಾಯ್ಡು ಮತ್ತಿತರ ಗಣ್ಯರು ಪಾಲ್ಗೊಂಡಿದ್ದರು.

ನೈತಿಕ ಶಿಕ್ಷಣ ಇಂದಿನ ಯುವಜನರಿಗೆ ತೀರಾ ಅವಶ್ಯ



ಮೈಸೂರು, ನ. 23–ಇಂದಿನ ಮುಂದುವರೆದ ಸಾಮಾಜಿಕ ವ್ಯವಸ್ಥೆಯಲ್ಲಿ ನೈತಿಕ ಶಿಕ್ಷಣದ ಮಹತ್ವ ಕಡಿಮೆಯಾಗುತ್ತಿದೆ. ಹಾಗಾಗಿ ರಾಮಕೃಷ್ಣ ಆಶ್ರಮದ ಹಿರಿಯ ವಿದ್ಯಾರ್ಥಿ ಸಂಘದ ವತಿಯಿಂದ ಜ್ಞಾನ ವಿಕಾಸಕ್ಕೆ ಅನುಕೂಲವಾಗುವಂತೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸುವ ಮೂಲಕ ವಿದ್ಯಾರ್ಥಿಗಳಲ್ಲಿ ನೈತಿಕ ಶಿಕ್ಷಣ ನೀಡುತ್ತಿರುವುದು ಶ್ಲಾಘನೀಯ ಕಾರ್ಯ ಎಂದು ಬಾಲಕರ ಸರ್ಕಾರಿ ಪದವಿಪೂರ್ವ ಕಾಲೇಜ್, ನಂಜನಗೂಡಿನ ಕಾಲೇಜು ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷರಾದ ಶ್ರೀರಾಮ್ ಪ್ರಸಾದ್ ಅಭಿಪ್ರಾಯಪಟ್ಟರು.

ಕಾಲೇಜಿನ ಪ್ರಾಂಶುಪಾಲರಾದ ಲಯನ್ ಸಿ.ಆರ್ .ದಿನೇಶ್ ಅವರು ರಾಮಕೃಷ್ಣ ಆಶ್ರಮದ ಹಿರಿಯ ವಿದ್ಯಾರ್ಥಿ ಸಂಘದ ವತಿಯಿಂದ ವಿವೇಕಾನಂದರ ಛಾಯಾ ಚಿತ್ರದ ಫಲಕವನ್ನು ಸ್ವೀಕರಿಸಿ ವಿದ್ಯಾರ್ಥಿಗಳು ತಮ್ಮಲ್ಲಿರುವ ಪ್ರತಿಭೆಯನ್ನು ಹೊರಹಾಕಲು ಇಂತಹ ಪರೀಕ್ಷೆಗಳು ತೀರಾ ಅಗತ್ಯವಿದೆ. ಈ ನಿಟ್ಟಿನಲ್ಲಿ ಶಿಕ್ಷಕರು ಹಾಗೂ ಪೋಷಕರು ಇಂತಹ ಸಂಘಟನೆಗಳ ಜೊತೆಗೆ ಕೈಜೋಡಿಸಿದರೆ ಶಾಲಾ ಕಾಲೇಜುಗಳಲ್ಲಿ ಉತ್ತಮ ಶೈಕ್ಷಣಿಕ ವಾತಾವರಣ ನಿರ್ಮಿಸಲು ಸಾಧ್ಯ ಎಂದು ಹೇಳಿದರು.

ಮೈಸೂರಿನ ರಾಮಕೃಷ್ಣ ಆಶ್ರಮದ ಹಿರಿಯ ವಿದ್ಯಾರ್ಥಿಗಳ ಸಂಘದ ವತಿ ಯಿಂದ ನಂಜನಗೂಡು ತಾಲೂಕಿನ 9 ಮತ್ತು 10ನೇ ತರಗತಿಯ ವಿದ್ಯಾರ್ಥಿ ಗಳಿಗೆ ನೈತಿಕ ಶಿಕ್ಷಣದ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಏರ್ಪಡಿಸಿದ್ದು ತಾಲೂಕಿನ 14 ಶಾಲೆಗಳಿಂದ ಇಂದು 270 ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಭಾಗವಹಿಸಿ 9ನೇ ತರಗತಿಯಲ್ಲಿ ಸೃಜನ್ ಕಾಮಣ್ಣನವರ್, ಗೌತಮಿ ಎಂ.ಸಿ, ಸೃಜನ್ ಎಚ್.ಬಿ ಎಲ್ಲರೂ ಸರ್ಕಾರಿ ಆದರ್ಶ ವಿದ್ಯಾಲಯ ದೇಬೂರು ಮೊದಲ ಮೂರು ಬಹುಮಾನಗಳನ್ನು ಪಡೆದರು.

10ನೇ ತರಗತಿಯ ವಿಭಾಗದಲ್ಲಿ ಸುಶ್ರುತ ಕಶ್ಯಪ್.ಜೆ ಸಿಟಿಜನ್ ಪ್ರೌಢಶಾಲೆ, ಬಾಂಧವ್ಯ ಹೆಚ್‌ಎಮ್ ಸರ್ಕಾರಿ ಆದರ್ಶ ವಿದ್ಯಾಲಯ, ಈಶ್ವರಸಿಂಗ್ ಶ್ರೀ ನೀಲಕಂಠ ಪ್ರೌಢಶಾಲೆ ಮೊದಲ ಮೂರು ಬಹುಮಾನಗಳನ್ನು ಪಡೆದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಹಿರಿಯ ಉಪನ್ಯಾಸಕ ರಾದ ಅಶ್ವಥನಾರಾಯಣ ಗೌಡ, ಉಪ ಪ್ರಾಂಶುಪಾಲರಾದ ಬಾಲ ಸರಸ್ವತಿ ಪರೀಕ್ಷೆಯ ಆಯೋಜಕ ಆನಂದ್ ರಾಜ್, ಬಾಬು ಲಾಲ್ ಬಿ, ಶ್ರೀನಿಧಿ ಇದ್ದರು.

ಸ್ಕೂಟರ್ ಡಿಕ್ಕಿಯಲ್ಲಿಟ್ಟಿದ್ದ ಚಿನ್ನದ ಸರ ಕಳವು: ಮಹಿಳೆ ಬಂಧನ

ಮೈಸೂರು, ನ.23(ಎಸ್‌ಬಿಡಿ)– ಸ್ಕೂಟರ್ ಡಿಕ್ಕಿಯಲ್ಲಿಟ್ಟಿದ್ದ ಚಿನ್ನದ ಸರ ಕಳವು ಮಾಡಿದ್ದ ಮಹಿಳೆಯನ್ನು ಮೈಸೂರಿನ ನಜರ್‌ಬಾದ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಸಿದ್ಧಾರ್ಥನಗರದ ಸನ್ಮಾರ್ಗ ರಸ್ತೆಯ ನಿವಾಸಿ ವಿಜಯ್ ಅವರು ಮನೆಯೊಂದರ ಮುಂಭಾಗ ನಿಲ್ಲಿಸಿದ್ದ ಸ್ಕೂಟರ್ ಡಿಕ್ಕಿಯಲ್ಲಿ ಸುಮಾರು 2 ಲಕ್ಷ ರೂ. ಮೌಲ್ಯದ 44 ಗ್ರಾಂ ಚಿನ್ನದ ಸರ ಇಟ್ಟಿದ್ದರು. ಆದರೆ ಮತ್ತೆ ನೋಡುವಷ್ಟರಲ್ಲಿ ಸರ ಕಳುವಾಗಿತ್ತು. ಈ ಸಂಬಂಧ ನಜರ್‌ಬಾದ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ ಪೊಲೀಸರು ಆರೋಪಿ ಲಕ್ಷ್ಮೀಯನ್ನು ಬಂಧಿಸಿ, ಚಿನ್ನದ ಸರವನ್ನು ವಶಪಡಿಸಿಕೊಂಡಿದ್ದಾರೆ.

ಡಿಸಿಪಿ ಎಸ್.ಜಾಹ್ನವಿ ಮಾರ್ಗದರ್ಶನ, ದೇವರಾಜ ವಿಭಾಗದ ಎಸಿಪಿ ಶಾಂತ ಮಲ್ಲಪ್ಪನವರ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ನಜರ್‌ಬಾದ್ ಠಾಣೆಯ ಇನ್ಸ್‌ಪೆಕ್ಟರ್ ಎಂ.ಮಹದೇವಸ್ವಾಮಿ, ಸಬ್‌ಇನ್ಸ್‌ಪೆಕ್ಟರ್ ಶ್ರೀನಿವಾಸ್ ಪಾಟೀಲ್, ಸಿಬ್ಬಂದಿ ಬಿ.ಬಿ.ಪ್ರಕಾಶ್, ಎಸ್.ಸತೀಶ್‌ಕುಮಾರ್, ಕಿರಣ್ ರಾಥೋಡ್, ಮಲ್ಲಿಕಾರ್ಜುನ, ಸಂಜು, ಚೈತ್ರ ಮತ್ತು ತಾಂತ್ರಿಕ ವಿಭಾಗದ ಪಿ.ಕುಮಾರ್ ಭಾಗವಹಿಸಿದ್ದರು.

ಮೊದಲ ಟಿ20: ಭಾರತ ಶುಭಾರಂಭ



ವಿಶಾಖಪಟ್ಟಣ, ನ.23– ಸೂರ್ಯ ಕುಮಾರ್ ಯಾದವ್ ಹಾಗೂ ಇಶಾನ್ ಕಿಶನ್ ಅವರ ಅರ್ಧ ಶತಕಗಳ ನೆರವಿನಿಂದ ಭಾರತ ಆಸ್ಟ್ರೇಲಿಯಾ ವಿರುದ್ಧದ ಮೊದಲ ಟಿ20 ಪಂದ್ಯದಲ್ಲಿ 2 ವಿಕೆಟ್‌ಗಳ ಜಯ ಸಾಧಿಸಿದೆ. ಆ ಮೂಲಕ 5 ಪಂದ್ಯಗಳ ಟಿ20 ಸರಣಿಯಲ್ಲಿ 1–0 ಅಂತರದ ಮುನ್ನಡೆ ಸಾಧಿಸಿ, ಟೂರ್ನಿಯಲ್ಲಿ ಶುಭಾರಂಭ ಮಾಡಿದೆ.

ಇಲ್ಲಿನ ಡಾ.ವೈ.ಎಸ್.ರಾಜಶೇಖರ ರೆಡ್ಡಿ ಕ್ರೀಡಾಂಗಣದಲ್ಲಿ ಆಸ್ಟ್ರೇಲಿಯಾ ನೀಡಿದ 209 ರನ್‌ಗಳ ಗೆಲುವಿನ ಬೃಹತ್ ಗುರಿ ಬೆನ್ನತ್ತಿದ ಭಾರತ ತಂಡದ ಮೊತ್ತ 22 ರನ್ ಆಗುವಷ್ಟರಲ್ಲಿ 2 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ಈ ವೇಳೆ 3ನೇ ವಿಕೆಟ್‌ಗೆ ಜೊತೆಯಾದ ಸೂರ್ಯಕುಮಾರ್ ಯಾದವ್ ಹಾಗೂ ಇಶಾನ್ ಕಿಶನ್ 112 ರನ್ ಜೊತೆ ಯಾಟವಾಡುವ ಮೂಲಕ ತಂಡಕ್ಕೆ ಚೇತರಿಕೆ ನೀಡಿತು. ಈ ವೇಳೆ 39 ಎಸೆತ ಗಳಲ್ಲಿ 5 ಸಿಕ್ಸರ್, 2 ಬೌಂಡರಿ 58 ರನ್ ಗಳಿಸಿ ಇಶಾನ್ ಕಿಶನ್ ವಿಕೆಟ್ ಒಪ್ಪಿಸಿದರು. ನಂತರ ಬಂದ ತಿಲಕ್ ವರ್ಮಾ 12ಕ್ಕೆ ನಿರ್ಗಮಿಸಿದರೇ, ಮತ್ತೊಂದೆಡೆ ಅಬ್ಬರಿಸಿದ ಸೂರ್ಯಕುಮಾರ್ ಯಾದವ್ 42 ಎಸೆತಗಳಲ್ಲಿ 4 ಸಿಕ್ಸರ್, 9 ಬೌಂಡರಿ ಒಳಗೊಂಡ 80 ರನ್ ಗಳಿಸಿ ನಿರ್ಗಮಿಸಿದರು. ಉಳಿದಂತೆ ರಿಂಕು ಸಿಂಗ್ 22 ರನ್ ಗಳಿಸಿ ತಂಡಕ್ಕೆ ಚೇತರಿಕೆ ಜಯ ತಂದು ಕೊಟ್ಟರು. ಅಂತಿಮವಾಗಿ ಭಾರತ 19.5 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 209 ರನ್ ಗಳಿಸಿತು. ಆಸೀಸ್ ಪರ ತನ್ವೀರ್ ಸಂಘ 2, ಸೀನ್ ಅಬಾಟ್, ಮ್ಯಾಥ್ಯೂ ಶಾರ್ಟ್ ಹಾಗೂ ಜೇಸನ್ ಬೆಹ್ರೆನ್ಡಾರ್ಫ್ ತಲಾ ಒಂದೊಂದು ವಿಕೆಟ್ ಉರುಳಿಸಿದರು.

ಇದಕ್ಕೂ ಮುನ್ನಾ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಆಸ್ಟ್ರೇಲಿಯಾ 20 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 208 ರನ್ ಗಳ ಬೃಹತ್ ಮೊತ್ತ ದಾಖಲಿಸಿತು. ತಂಡದ ಡದ ಪರ ಸ್ಟೀವನ್ ಸ್ಮಿತ್ 52ರನ್ ಗಳಿಸಿದರೇ, ಜೋಶ್ ಇಂಗ್ಲಿಸ್ 50 ಎಸೆತಗಳಲ್ಲಿ 8 ಸಿಕ್ಸರ್, 11 ಬೌಂಡರಿ ಒಳಗೊಂಡ 110ರನ್ ಗಳಿಸಿದರು. ಉಳಿದಂತೆ ಟೀವ್ ಡೇವಿಡ್ 19, ಮ್ಯಾಥ್ಯೂ ಶಾರ್ಟ್ 13 ರನ್ ಗಳಿಸಿದರು. ಭಾರತದ ಪರ ಪ್ರಸಿದ್ಧ ಕೃಷ್ಣ ಹಾಗೂ ರವಿ ಬಿಷ್ಣೋಯಿ ತಲಾ ಒಂದೊಂದು ವಿಕೆಟ್ ಕಬಳಿಸಿದರು. ಸೂರ್ಯಕುಮಾರ್ ಯಾದವ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಪುತ್ರ–ಶಾಮನೂರು ಮೊಮ್ಮಗಳ ವಿವಾಹ



ಬೆಂಗಳೂರು, ನ.23 (ಕೆಎಂಶಿ)– ಭಾರೀ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಮತ್ತು ಆಶಾ ದಂಪತಿಯ ಜೇಷ್ಠ ಪುತ್ರ ಬಸನ್ ಅವರ ವಿವಾಹವು ಕಾಂಗ್ರೆಸ್‌ನ ಹಿರಿಯ ಮುಖಂಡ ಹಾಗೂ ಶಾಸಕ ಶಾಮನೂರು ಶಿವಶಂಕರಪ್ಪ ಅವರ ಮೊಮ್ಮಗಳು ಅಖಿಲಾ ಅವರೊಂದಿಗೆ ಇಲ್ಲಿನ ವೆಸ್ಟ್‌ಎಂಡ್ ಹೋಟೆಲ್‌ನಲ್ಲಿ ಇಂದು ಶಾಸ್ತ್ರೋಕ್ತವಾಗಿ ನೆರವೇರಿತು.

ಅಖಿಲಾ ಅವರು ಶಾಮನೂರು ಶಿವಶಂಕರಪ್ಪ ಅವರ ಪುತ್ರ ಎಸ್.ಎಸ್. ಗಣೇಶ್ ಮತ್ತು ರೇಖಾ ದಂಪತಿಯ ಪುತ್ರಿ ಕುಟುಂಬದ ಹಿರಿಯರು ಮತ್ತು ಬಂಧುಗಳ ಸಮ್ಮುಖದಲ್ಲಿ ವಿವಾಹ ಮಹೋತ್ಸವವು ನೆರವೇರಿತು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮಾಜಿ ಮುಖ್ಯಮಂತ್ರಿಗಳಾದ ಎಸ್.ಎಂ.ಕೃಷ್ಣ, ಜಗದೀಶ ಶೆಟ್ಟರ್, ಬಸವರಾಜ ಬೊಮ್ಮಾಯಿ, ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ಸುಶೀಲ್‌ಕುಮಾರ್ ಶಿಂಧೆ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, ಸಚಿವರಾದ ರಾಮಲಿಂಗಾರೆಡ್ಡಿ, ಚೆಲುವರಾಯಸ್ವಾಮಿ, ಕೃಷ್ಣಬೈರೇಗೌಡ, ಮಧುಬಂಗಾರಪ್ಪ, ದರ್ಶನಾಪುರ, ಶಿವಾನಂದ ಪಾಟೀಲ್, ದಿನೇಶ ಗುಂಡೂರಾವ್, ಪ್ರಿಯಾಂಕ್ ಖರ್ಗೆ, ಶರಣಪ್ರಕಾಶ ಪಾಟೀಲ್, ಲಕ್ಷ್ಮಿ ಹೆಬ್ಬಾಳ್ಕರ್, ಶಾಸಕರಾದ ಎಚ್.ಡಿ. ರೇವಣ್ಣ, ಕೋಟಾ ಶ್ರೀನಿವಾಸ ಪೂಜಾರಿ, ಬಸನಗೌಡ ಪಾಟೀಲ್ ಯತ್ನಾಳ್, ಮಂಜುನಾಥ ಭಂಡಾರಿ, ಸಂಸದರಾದ ಪಿ.ಸಿ.ಮೋಹನ್, ರಮೇಶ ಜಿಗಜಿಣಗಿ ಸೇರಿದಂತೆ ವಿವಿಧ ರಾಜಕೀಯ ಪಕ್ಷಗಳ ಶಾಸಕರು, ಸಂಸದರು, ಮುಖಂಡರು ಆಗಮಿಸಿ ವಧು–ವರರನ್ನು ಆಶೀರ್ವದಿಸಿ, ಶುಭ ಕೋರಿದರು.

100 ಕೋಟಿ ರೂ. ವಂಚನೆ, ಅಕ್ರಮ ಹಣ ವರ್ಗಾವಣೆ ಪ್ರಕರಣ: ನಟ ಪ್ರಕಾಶ್ ರಾಜ್‌ಗೆ ಇಡಿ ಸಮನ್ಸ್




ಚೆನ್ನೈ: ತಿರುಚಿರಾಪಳ್ಳಿ ಮೂಲದ ಜ್ಯುವೆಲ್ಲರಿ ಗ್ರೂಪ್‌ನ ವಿರುದ್ಧ 100 ಕೋಟಿ ರೂ. ವಂಚನೆಗೆ ಸಂಬಂಧಿಸಿದ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ನಟ ಪ್ರಕಾಶ್ ರಾಜ್ ಅವರ ವಿಚಾರಣೆಗೆ ಜಾರಿ ನಿರ್ದೇಶನಾಲಯ ಸಮನ್ಸ್ ನೀಡಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ. ತನಿಖೆಯು ತಿರುಚಿರಾಪಳ್ಳಿ ಮೂಲದ ಪಾಲುದಾರಿಕೆ ಸಂಸ್ಥೆಯಾದ ಪ್ರಣವ್ ಜ್ಯುವೆಲರ್ಸ್ ವಿರುದ್ಧದ ಪ್ರಕರಣಕ್ಕೆ ಸಂಬಂಧಿಸಿದ್ದು, ನವೆಂಬರ್ 20 ರಂದು ಆ ಸಂಸ್ಥೆಯ ಮೇಲೆ ದಾಳಿ ನಡೆಸಿ, ರೂ. 23.70 ಲಕ್ಷ ನಗದು ಹಾಗೂ ಚಿನ್ನಾಭರಣವನ್ನು ಇಡಿ ವಶ ಪಡಿಸಿಕೊಂಡಿತ್ತು ಪ್ರಕಾಶ್ ರಾಜ್ ಈ ಕಂಪನಿಯ ಬ್ರಾಂಡ್ ಅಂಬಾಸಿಡರ್ ಆಗಿದ್ದಾರೆ. ಮುಂದಿನ ವಾರ ಚೆನ್ನೈನಲ್ಲಿರುವ ಇಡಿಯ ಮುಂದೆ ವಿಚಾರಣೆಗೆ ಹಾಜರಾಗುವಂತೆ ಅವರಿಗೆ ಸೂಚಿಸಲಾಗಿದೆ.

ಪೊಲೀಸ್ ದೂರಿನ ಪ್ರಕಾರ, ಪ್ರಣವ್ ಜ್ಯುವೆಲರ್ಸ್ ಮತ್ತು ಇತರರು ಚಿನ್ನದ ಹೂಡಿಕೆ ಯೋಜನೆಯ ನೆಪದಲ್ಲಿ ಸಾರ್ವಜನಿಕರಿಂದ 100 ಕೋಟಿ ರೂ. ಗಳನ್ನು ಹೆಚ್ಚಿನ ಆದಾಯದ ಭರವಸೆಯೊಂದಿಗೆ ಸಂಗ್ರಹಿಸಿದ್ದಾರೆ.

ಮಂಡ್ಯದಲ್ಲಿ ಹೆಚ್ಚಾದ ಬಾಲ್ಯವಿವಾಹ

11 ತಿಂಗಳಲ್ಲಿ ಗರ್ಭಿಣಿಯಾಗಿದ್ದಾರೆ 43 ಅಪ್ರಾಪ್ತರು!



ಮಂಡ್ಯ, ನ. 23– ಬಾಲ್ಯವಿವಾಹ ಹಾಗೂ ಅಪ್ರಾಪ್ತರು ಗರ್ಭಿಣಿಯಾಗುವುದನ್ನು ತಡೆಯಲು ರಾಜ್ಯ ಸರ್ಕಾರ ಹಲವು ಕ್ರಮಗಳನ್ನು ತೆಗೆದುಕೊಂಡಿದ್ದರೂ ಸಕ್ಕರೆ ನಗರಿ ಮಂಡ್ಯದಲ್ಲಿ ವರ್ಷದಿಂದ ವರ್ಷಕ್ಕೆ ಬಾಲ್ಯವಿವಾಹಗಳ ಸಂಖ್ಯೆ ಹೆಚ್ಚಳವಾಗುತ್ತಿದೆ. ಅಷ್ಟೇ ಅಲ್ಲದೆ ಅಪ್ರಾಪ್ತರು ಗರ್ಭಿಣಿಯರಾಗುವ ಪ್ರಕರಣಗಳೂ ಹೆಚ್ಚಳವಾಗುತ್ತಿದ್ದು ಆತಂಕಕ್ಕೆ ಕಾರಣವಾಗಿದೆ.

ಮಂಡ್ಯದಲ್ಲಿ ದಿನದಿಂದ ದಿನಕ್ಕೆ, ವರ್ಷದಿಂದ ವರ್ಷಕ್ಕೆ ಬಾಲ್ಯವಿವಾಹ ಪ್ರಕರಣಗಳು ಹೆಚ್ಚಾಗುತ್ತಿದ್ದು, ಆತಂಕಕ್ಕೂ ಕೂಡ ಕಾರಣವಾಗಿದೆ. ಅಂದಹಾಗೆ, 18 ವರ್ಷದೊಳಗಿನ ಯುವತಿಯರು ವಿವಾಹವಾಗುವುದಕ್ಕೆ ಸರ್ಕಾರ ನಿಷೇಧ ಹೇರಿ, ಬಾಲ್ಯವಿವಾಹ ತಡೆಗೆ ಸಾಕಷ್ಟು ಕಟ್ಟುನಿಟ್ಟಿನ ಕ್ರಮಗಳನ್ನ ತೆಗೆದುಕೊಂಡಿದೆ. ಅಲ್ಲದೆ ಬಾಲ್ಯ ವಿವಾಹದ ಬಗ್ಗೆ ಸಾಕಷ್ಟು ಅರಿವು ಮೂಡಿಸುವ ಕೆಲಸಗಳು ಕೂಡ ನಡೆಯುತ್ತಿವೆ. ಇಷ್ಟೆಲ್ಲ ಇದ್ದರು ಸಹ, ಮಂಡ್ಯ ಜಿಲ್ಲೆಯಲ್ಲಿ ವರ್ಷದಿಂದ ವರ್ಷಕ್ಕೆ ಬಾಲ್ಯವಿವಾಹ ಪ್ರಕರಣಗಳು ಹೆಚ್ಚಳವಾಗುತ್ತಿದೆ. ಅಂದಹಾಗೆ, 2023ರ ಜನರಿಂದ ಇಲ್ಲಿಯವರೆಗೂ 43 ಅಪ್ರಾಪ್ತರು ಗರ್ಭಿಣಿಯರಾಗಿದ್ದಾರೆ. ಅದರಲ್ಲಿ 15 ವರ್ಷದವರು ಮೂವರು, 16 ವರ್ಷದ 10 ಮಂದಿ ಹಾಗೂ 17 ವರ್ಷದ 30 ಅಪ್ರಾಪ್ತರು ಸೇರಿದ್ದಾರೆ.

ಅಂದಹಾಗೆ 2023ರ ಜನವರಿಯಿಂದ ಇಲ್ಲಿಯವರೆಗೂ ಮಂಡ್ಯ ಜಿಲ್ಲೆಯಲ್ಲಿ ಒಟ್ಟು 12,220 ಮಹಿಳೆಯರು ಗರ್ಭಿಣಿಯರಾಗಿದ್ದು, ಅದರಲ್ಲಿ 43 ಅಪ್ರಾಪ್ತರು ಕೂಡ ಇದ್ದಾರೆ.

ಇನ್ನು ಬಾಲ್ಯವಿವಾಹದ ಬಗ್ಗೆ 147 ದೂರುಗಳು ಸಹಾ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಬಂದಿದೆ. ಇದರಲ್ಲಿ ಈ ವರ್ಷವೇ ಸುಮಾರು 85 ಬಾಲ್ಯವಿವಾಹವನ್ನ ತಡೆಗಟ್ಟಿದ್ದು, 62 ಪ್ರಕರಣಗಳು ದಾಖಲಾಗಿವೆ. ಇನ್ನು ಮಂಡ್ಯ ಜಿಲ್ಲಾಡಳಿತ ಸ್ಥಳೀಯಮಟ್ಟದಲ್ಲಿ ಹಲವು ಸಂಘ ಸಂಸ್ಥೆಗಳು, ಶಿಕ್ಷಣ ಇಲಾಖೆ, ಪಿಡಿಓಗಳ ಸಹಾಯದಿಂದ ಬಾಲ್ಯ ವಿವಾಹವನ್ನು ತಡೆಯಲು ಮುಂದಾಗುತ್ತಿದ್ದರೂ, ಪ್ರಕರಣಗಳ ಸಂಖ್ಯೆ ಮಂಡ್ಯದಲ್ಲಿ ವರ್ಷದಿಂದ ವರ್ಷಕ್ಕೆ ಹೆಚ್ಚಳವಾಗುತ್ತಿದೆ. ಅಲ್ಲದೆ ಅಪ್ರಾಪ್ತ ಗರ್ಭಿಣಿಯರ ಆರೋಗ್ಯದ ಮೇಲೆಯೂ ಹಲವು ಪರಿಣಾಮಗಳಾಗುತ್ತಿವೆ. ಇನ್ನು ನಿಟ್ಟಿನಲ್ಲಿ ಸಮಿತಿಯೊಂದನ್ನ ರಚನೆ ಮಾಡಿ ಬಾಲ್ಯವಿವಾಹ ತಡೆಗೆ ಕಟ್ಟುನಿಟ್ಟಿನ ಕ್ರಮಕ್ಕೆ ಜಿಲ್ಲಾಡಳಿತ ಕೂಡ ಮುಂದಾಗಿದೆ. ಒಟ್ಟಾರೆ ಮಂಡ್ಯ ಜಿಲ್ಲೆಯಲ್ಲಿ ವರ್ಷದಿಂದ ವರ್ಷಕ್ಕೆ ಬಾಲ್ಯವಿವಾಹಗಳು ಹಾಗೂ ಅಪ್ರಾಪ್ತ ಗರ್ಭಿಣಿಯರ ಸಂಖ್ಯೆ ಹೆಚ್ಚಳವಾಗಿದೆ. ಇನ್ನಾದರೂ ಸಂಬಂಧಪಟ್ಟವರು ಈ ಬಗ್ಗೆ ಸೂಕ್ತ ಕ್ರಮವಹಿಸಬೇಕಿದೆ.

ಸರ್ಕಾರದ ಮೀನಾಮೇಷ; ಅಧಿಕಾರಿಗಳ ವಿಳಂಬ ಧೋರಣೆಯಿಂದಾಗಿ

ಮೈಸೂರಿನ ಮತ್ತೊಂದು ಪಾರಂಪರಿಕ ಕಟ್ಟಡ ಮಹಾರಾಣಿ ವಿಜ್ಞಾನ ಕಾಲೇಜು ಕಟ್ಟಡ ಮತ್ತಷ್ಟು ಕುಸಿಯುವ ಆತಂಕ

● ಮುಖ್ಯಮಂತ್ರಿ ಸಿದ್ದರಾಮಯ್ಯ ಬಂದರು–ಹೋದರು ● ಶೀಘ್ರ ಕ್ರಮ ಕೈಗೊಳ್ಳದಿದ್ದರೆ ಮತ್ತೊಂದು ಅನಾಹುತ ಭೀತಿ







ಮೈಸೂರು, ನ.23(ಎಂಕೆ)– ಸಾಂಸ್ಕೃತಿಕ ನಗರಿ ಮೈಸೂರಿನ ಪಾರಂಪರಿಕ ಕಟ್ಟಡಗಳಲ್ಲೊಂದಾಗಿರುವ ಮಹಾರಾಣಿ ವಿಜ್ಞಾನ ಕಾಲೇಜು ಕಟ್ಟಡಕ್ಕೆ ತುರ್ತು ಕಾಯಕಲ್ಪವಾಗದಿದ್ದರೆ, ಇಡೀ ಕಟ್ಟಡವನ್ನೇ ಕಳೆದುಕೊಳ್ಳುವ ಆತಂಕ ಎದುರಾಗಿದೆ.

107 ವರ್ಷಗಳ ಇತಿಹಾಸವಿರುವ ಮಹಾರಾಣಿ ವಿಜ್ಞಾನ ಕಾಲೇಜು ಕಟ್ಟಡದ ಗೋಡೆಗಳು ಬಹುತೇಕ ಶಿಥಿಲಗೊಂಡಿದ್ದು, ಅಲ್ಲಲ್ಲಿ ಮೇಲ್ಚಾವಣಿ ಕುಸಿದು ಬೀಳುತ್ತಿದೆ. ಜೊತೆಗೆ ಗೋಡೆಗಳ ಮೇಲೆ ಗಿಡ–ಗಂಟಿಗಳು ಬೆಳೆದು ನಿಂತಿರುವುದು ವಿದ್ಯಾರ್ಥಿನಿಯರಲ್ಲಿ ಮತ್ತಷ್ಟು ಆತಂಕ ಉಂಟು ಮಾಡಿದೆ.

2022ರ ಅ.21 ರಂದು ಬೆಳಗ್ಗೆ ಸುಮಾರು 10.45ರ ಸುಮಾರಿಗೆ ಕಾಲೇಜಿನ ರಸಾಯನಶಾಸ್ತ್ರ ವಿಭಾಗದ ಪ್ರಯೋಗಾಲಯದ ಮೇಲ್ಛಾವಣಿ ಹಾಗೂ ಎರಡು ಬದಿ ಗೋಡೆ (ಜೆಎಲ್‌ಬಿ ರಸ್ತೆ–ಡಿಸಿ ಕಚೇರಿ ರಸ್ತೆ)ಕುಸಿದು ಬಿದ್ದಿತ್ತು. ಇಲ್ಲಿಗೆ ವರ್ಷವೇ ಕಳೆದಿದ್ದರೂ ಕುಸಿದು ಬಿದ್ದ ಕಟ್ಟಡವನ್ನು ದುರಸ್ಥಿಗೊಳಿಸುವ ಸಣ್ಣ ಪ್ರಯತ್ನವೂ ಆಗದಿರುವುದು ಕಾಲೇಜು ವಿದ್ಯಾರ್ಥಿನಿಯರು ಹಾಗೂ ಸಿಬ್ಬಂದಿಗಳು ಇಕ್ಕಟ್ಟಿನಲ್ಲಿ ಸಿಲುಕಿಸಿದಂತಾಗಿದೆ.

ಸುಮಾರು 3,500 ಮಂದಿ ಬಿಎಸ್‌ಸಿ ಹಾಗೂ ಎಂಎಸ್‌ಸಿ ವಿದ್ಯಾರ್ಥಿನಿಯರು ವ್ಯಾಸಂಗ ಮಾಡುತ್ತಿರುವ ಕಾಲೇಜಿಗೆ ಮರು ಕಾಯಕಲ್ಪ ನೀಡದಿರುವುದರಿಂದ ಹೊಸ ಕಟ್ಟಡಗಳಲ್ಲಿರುವ ಕ್ಲಾಸ್ ರೂಂಗಳಲ್ಲಿ ಇಕ್ಕಟ್ಟಿನ ನಡುವೆಯೇ ತರಗತಿಗಳನ್ನು ನಡೆಸಲಾಗುತ್ತಿದೆ. ಅಲ್ಲದೆ ಕೊರೊನಾ ಸಂದರ್ಭದಲ್ಲಿ ಬಾಕಿ ಉಳಿದಿದ್ದ ಪಾಠಗಳನ್ನು ಪೂರ್ಣಗೊಳಿಸುವ ಸಲುವಾಗಿ ಭಾನುವಾರವೂ ಸಹ ತರಗತಿಗಳನ್ನು ನಡೆಸಲಾಗುತ್ತಿದ್ದು, ವ್ಯವಸ್ಥಿತ ಲ್ಯಾಬ್ ಇಲ್ಲದೆ ಕಲಿಕೆ ಗುಣಮಟ್ಟ ಕುಂಠಿತವಾಗುತ್ತಿದೆ.

ಶತಮಾನದ ಇತಿಹಾಸವಿರುವ ಮಹಾರಾಣಿ ವಿಜ್ಞಾನ ಕಾಲೇಜು ಕಟ್ಟಡವನ್ನು ಸುಣ್ಣದ ಗಾರೆಯಿಂದ ನಿರ್ಮಿಸಲಾಗಿದ್ದು, ಸೂಕ್ತ ನಿರ್ವಹಣೆ ಕೊರತೆಯಿಂದ ಕಟ್ಟಡದ ಮೇಲ್ಛಾವಣಿ ಹಾಗೂ ಗೋಡೆಗಳು ಶಿಥಿಲಾವಸ್ಥೆಗೆ ತಲುಪಿವೆ. ಸದ್ಯ ಮಳೆ ಇಲ್ಲದಿರುವುದು ಸ್ವಲ್ಪ ಆತಂಕ ದೂರ ಮಾಡಿದ್ದರೂ ಗಿಡಗಳು ಬೆಳೆದು ಗೋಡೆಯಲ್ಲಿ ಬಿರುಕು ಬಿಟ್ಟಿರುವುದರಿಂದ ಯಾವಾಗ ಬೇಕಾದರೂ ಬೀಳುವ ಸಾಧ್ಯತೆ ಇದೆ ಎಂದು ಮೈಸೂರಿನ ಪ್ರಜ್ಞಾವಂತ ನಾಗರಿಕರು ತಿಳಿಸಿದ್ದಾರೆ.

ಸಿಎಂ ಸಿದ್ದರಾಮಯ್ಯ ಭೇಟಿ: ಮಹಾರಾಣಿ ವಿಜ್ಞಾನ ಕಾಲೇಜು ಪಾರಂಪರಿಕ ಕಟ್ಟಡ ಲ್ಯಾಬ್ ಕೊಠಡಿ ಕುಸಿದು ಬಿದ್ದು ವರ್ಷ ಕಳೆದ ಬಳಿಕ ಅಂದರೆ ಅ.23 ರಂದು ಭೇಟಿ ನೀಡಿದ ಸಿಎಂ ಸಿದ್ದರಾಮಯ್ಯ ಅವರು, ಪಾರಂಪರಿಕ ಕಟ್ಟಡ ನವೀಕರಣ ಮಾಡಿಸುವ ಹಾಗೂ 2000 ವಿದ್ಯಾರ್ಥಿಗಳ ಸಾಮರ್ಥ್ಯವುಳ್ಳ ಹಾಸ್ಟೆಲ್ ನಿರ್ಮಾಣ ಮಾಡುವುದಾಗಿ ಭರವಸೆ ನೀಡಿದ್ದರು. 51 ಕೋಟಿ ರೂ.ವೆಚ್ಚದಲ್ಲಿ ಮಹಾರಾಣಿ ವಿಜ್ಞಾನ ಕಾಲೇಜು, 17 ಕೋಟಿ ರೂ. ವೆಚ್ಚದಲ್ಲಿ ಕಲಾ ಕಾಲೇಜು ಹಾಗೂ 99 ಕೋಟಿ ರೂ.ವೆಚ್ಚದಲ್ಲಿ ಹಾಸ್ಟೆಲ್ ನಿರ್ಮಾಣ ಕೈಗೊಳ್ಳುವಂತೆ ಉನ್ನತ ಶಿಕ್ಷಣ ಇಲಾಖೆಗೆ ಸೂಚಿಸಲಾಗಿದೆ ಎಂದಿದ್ದರು. ಆದರೆ ಪಾರಂಪರಿಕ ಕಟ್ಟಡವಾಗಿರುವುದರಿಂದ ಮೈಸೂರಿನಲ್ಲಿ ಕುಸಿದು ಬಿದ್ದಿರುವ ಇತರೆ ಪಾರಂಪರಿಕ ಕಟ್ಟಡಗಳ ಸ್ಥಿತಿಯೇ ಮಹಾರಾಣಿ ವಿಜ್ಞಾನ ಕಾಲೇಜು ಕಟ್ಟಡಕ್ಕೂ ಬರಲಿದೆ ಎಂದು ಕೆಲವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಮನವರಿಕೆ ಮಾಡಿಕೊಡಲಾಗಿದೆ: ಕಾಲೇಜು ಕಟ್ಟಡದ ದುಸ್ಥಿತಿಯನ್ನು ಸ್ಥಳೀಯ ಶಾಸಕರು, ಉನ್ನತ ಶಿಕ್ಷಣ ಸಚಿವರು, ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಮುಖ್ಯಮಂತ್ರಿಗಳಿಗೂ ತಿಳಿಸಿ, ತ್ವರಿತವಾಗಿ ಕಟ್ಟಡ ನವೀಕರಣಕ್ಕೆ ಚಾಲನೆ ನೀಡುವಂತೆ ಮನವರಿಕೆ ಮಾಡಿಕೊಟ್ಟಿದ್ದೇವೆ. ಅದೇ ರೀತಿ ಮುಖ್ಯಮಂತ್ರಿಗಳಿಂದಲೂ ಸ್ಪಂದನೆ ದೊರೆತಿದ್ದು, ಎರಡ್ಮೂರು ತಿಂಗಳಲ್ಲಿ ಕಾಮಗಾರಿ ಆರಂಭವಾಗುವ ಸಾಧ್ಯತೆ ಇದೆ ಎನ್ನಲಾಗುತ್ತಿದೆ. ಸ್ಥಳೀಯ ಶಾಸಕರೂ ಕೂಡ ಸಾಧ್ಯವಾದಷ್ಟು ಬೇಗ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸುವ ಭರವಸೆ ನೀಡಿದ್ದಾರೆ ಎಂದು ಕಾಲೇಜು ಪ್ರಾಂಶುಪಾಲ ಪ್ರೊ.ಅಬ್ದುಲ್ ರೆಹಮಾನ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಇಕ್ಕಟ್ಟಿನಲ್ಲೇ ಸಾಗುತ್ತಿದೆ...

ಮಹಾರಾಣಿ ವಿಜ್ಞಾನ ಕಾಲೇಜಿನಲ್ಲಿ ಸುಮಾರು 2,500 ಬಿಎಸ್‌ಸಿ ಹಾಗೂ ಸುಮಾರು 700 ಎಂಎಸ್‌ಸಿ ವಿದ್ಯಾರ್ಥಿನಿಯರು ವ್ಯಾಸಂಗ ಮಾಡುತ್ತಿದ್ದಾರೆ. ಹಳೇ ಪಾರಂಪರಿಕ ಕಟ್ಟಡ ಶಿಥಿಲಗೊಂಡಿರುವುದರಿಂದ ಹೊಸ ಕಟ್ಟಡದಲ್ಲಿಯೇ ತರಗತಿಗಳನ್ನು ನಡೆಸಲಾಗುತ್ತಿದೆ. ಲ್ಯಾಬ್ ಶಿಫ್ಟ್ ಮಾಡಿಕೊಂಡು ಹೇಳಿಕೊಡಲಾಗುತ್ತಿದೆ. ಹಳೇ ಕಟ್ಟಡದ ಎರಡು ಕೊಠಡಿಗಳನ್ನಷ್ಟೇ ಬಳಕೆ ಮಾಡಲಾಗುತ್ತಿದೆ. ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಕೊಠಡಿಗಳು ಕಡಿಮೆ ಇದ್ದು, ಇಕ್ಕಟ್ಟಿನಲ್ಲೆ ಕಾಲೇಜು ನಡೆಸಲಾಗುತ್ತಿದೆ. ಕಟ್ಟಡದ ಗೋಡೆ ಮೇಲೆ ಬೆಳೆದಿರುವ ಗಿಡಗಳನ್ನು ನವೀಕರಣ ಸಂದರ್ಭದಲ್ಲಿ ತೆರವು ಮಾಡಲಾಗುವುದು.

– **ಪ್ರೊ.ಅಬ್ದುಲ್ ರೆಹಿಮಾನ್**, ಪ್ರಾಂಶುಪಾಲ, ಮಹಾರಾಣಿ ವಿಜ್ಞಾನ ಕಾಲೇಜು

ಕಟ್ಟಡದ ಮೇಲೆ ಗಿಡ ಬೆಳೆದರೆ ಅಪಾಯ..!

ಕಟ್ಟಡದ ಮೇಲೆ ಗಿಡಗಳನ್ನು ಬೆಳೆಯಲು ಬಿಡಲೇ ಬಾರದು. ಒಂದು ವೇಳೆ ಬೆಳೆದರೆ ಕೂಡಲೇ ತೆರವುಗೊಳಿಸಬೇಕು. ಇಲ್ಲದಿದ್ದರೆ ಗೋಡೆ ಬಿರುಕು ಬಿಡಲಿದೆ ಎಂದು ಪಾರಂಪರಿಕ ತಜ್ಞ ರಂಗರಾಜು ತಿಳಿಸಿದ್ದಾರೆ.

ಕಟ್ಟಡದ ಮೇಲೆ ಗಿಡ ಬೆಳೆಯುವುದರಿಂದ ಗಿಡ ಬೇರು ಗೋಡೆಯ ಮೇಲಿನಿಂದ ಕೆಳಗಿನವರೆಗೆ ಬೆಳೆಯುತ್ತದೆ. ಇದರಿಂದ ಮಳೆನೀರು ನೇರವಾಗಿ ಗೋಡೆ ಸೇರಿ ಮತ್ತಷ್ಟು ಶಿಥಿಲಗೊಳ್ಳುವುದಲ್ಲದೆ ಗೋಡೆಯಲ್ಲಿ ಬಿರುಕು ಹೆಚ್ಚಾಗುತ್ತದೆ. ಮಹಾರಾಣಿ ವಿಜ್ಞಾನ ಕಾಲೇಜು ಕಟ್ಟಡದ ಮೇಲೆ ಬೆಳೆದಿರುವ ಗಿಡಗಳನ್ನು ತೆಗೆಯುವಂತೆ ಹೇಳಲಾಗಿತ್ತು. ಆದರೆ ಗೋಡೆ ಏರಿ ತೆಗೆಯುವುದು ಬಹಳ ಕಷ್ಟವಾಗಿರುವುದರಿಂದ ಮರದ ಕೊಂಬೆಗಳನ್ನು ಕಟ್ ಮಾಡಲು ಬಳಸುವ ಯಂತ್ರ ಬಳಸುವುದು ಒಳ್ಳೆಯದು ಎಂದು ತಿಳಿಸಿದ್ದೆ ಎಂದರು. ಮಹಾರಾಣಿ ವಿಜ್ಞಾನ ಕಾಲೇಜು ನವೀಕರಣದ ಪ್ಲಾನ್ ರೆಡಿಯಾಗಿದ್ದು, ಹಣ ಬಿಡುಗಡೆಯಾಗಬೇಕು. ಈಗಾಗಲೇ ಮೂರ್ನಾಲ್ಕು ಬಾರೀ ಕಾಲೇಜಿಗೆ ಭೇಟಿ ನೀಡಿ ಪ್ರಾಂಶುಪಾಲರೊಂದಿಗೆ ಚರ್ಚಿಸಲಾಗಿದೆ. ಪಾರಂಪರಿಕ ಶೈಲಿಯಲ್ಲೇ ಕಟ್ಟಡ ನವೀಕರಣವಾಗಬೇಕು ಎಂಬುದನ್ನು ಸಹ ತಿಳಿಸಲಾಗಿದೆ ಎಂದರು.

ಯಂಗ್ ರೆಬಲ್‌ಸ್ಟಾರ್ ಅಭಿಷೇಕ್ ಅಂಬರೀಶ್ ಅಭಿನಯದ 'ಬ್ಯಾಡ್ ಮ್ಯಾನರ್ಸ್' ಚಿತ್ರದ ಸ್ಟಾರ್ ಮೆರವಣಿಗೆ





ನವೆಂಬರ್ 24ರ ಶುಕ್ರವಾರ ದೇಶಾದ್ಯಂತ ತೆರೆ ಕಾಣುತ್ತಿರುವ ಯಂಗ್ ರೆಬಲ್‌ಸ್ಟಾರ್ ಅಭಿಷೇಕ್ ಅಂಬರೀಶ್ ನಟನೆಯ 'ಬ್ಯಾಡ್ ಮ್ಯಾನರ್ಸ್' ಚಿತ್ರದ ಅದ್ದೂರಿ ಸ್ಟಾರ್ ಮೆರವಣಿಗೆ ಗುರುವಾರ ಮೈಸೂರಲ್ಲಿ ನಡೆಯಿತು. ಮೈಸೂರು ಅರಮನೆ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಮುಂದೆ ಚಾಮರಾಜ ಕ್ಷೇತ್ರದ ಶಾಸಕರಾದ ಕೆ. ಹರೀಶ್‌ಗೌಡರು ದಿವಂಗತ ಡಾ. ಅಂಬರೀಶ್‌ರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಸ್ಟಾರ್ ಮೆರವಣಿಗೆಗೆ ಚಾಲನೆ ನೀಡಿ, ನಮ್ಮ ರೆಬಲ್‌ಸ್ಟಾರ್ ದಿವಂಗತ ಡಾ. ಅಂಬರೀಶಣ್ಣನ ಸುಪುತ್ರರಾದ ಅಭಿಷೇಕ್ ಅಂಬರೀಶ್ ಅಭಿನಯದ 'ಬ್ಯಾಡ್ ಮ್ಯಾನರ್ಸ್' ಯಶಸ್ವಿ ಪ್ರದರ್ಶನ ಕಾಣಲಿ ಎಂದು ಶುಭ ಹಾರೈಸಿದರು. ನಂತರ ಸ್ಟಾರ್ ಮೆರವಣಿಗೆ ಪ್ರಮುಖ ರಸ್ತೆಗಳಲ್ಲಿ ಜಯಘೋಷಗಳೊಂದಿಗೆ ಸಾಗಿತು. ಈ ವೇಳೆ ಶ್ರೀ ಕೃಷ್ಣ ಎಂಟರ್‌ಪ್ರೈಸಸ್ ಮಾಲೀಕರಾದ ಪ್ರದೀಪ್‌ಸಿಂಗ್, ದೇವರಾಜ ಮಾರ್ಕೆಟ್ ಯುವ ಬ್ರಿಗೇಡ್ ಅಧ್ಯಕ್ಷ ಬಿ. ಸಂದೀಪ್, ನಾಗರಾಜ್ ಸೇರಿದಂತೆ ಅಪಾರ ಅಭಿಮಾನಿಗಳು ಪಾಲ್ಗೊಂಡಿದ್ದರು.

ಭಾರೀ ನೀರಿನ ಪೈಪ್ ಅಳವಡಿಸುವ ಅವೈಜ್ಞಾನಿಕ ಕಾಮಗಾರಿ; ಗೋಕುಲಂನ ಪ್ರಮುಖ ಕಾಂಟೂರ್ ರಸ್ತೆ ಅಧ್ವಾನ

ಡಾಂಬರೀಕರಣ ಮಾಡಿದರೂ ಅಲ್ಲಲ್ಲಿ ಕುಸಿಯುತ್ತಿದೆ ರಸ್ತೆ

● ನಿವಾಸಿಗಳು, ವಾಹನ ಚಾಲಕರ ಹಿಡಿಶಾಪ ● ಹೇಳೋರು... ಕೇಳೋರು... ಯಾರೂ ಇಲ್ಲದ ಸ್ಥಿತಿ



ಗೋಕುಲಂ ಕಾಂಟೂರ್ ರಸ್ತೆ ಶ್ರೀ ಗಣಪತಿ ಗುಡಿ ಬಳಿ ರಸ್ತೆ ಕುಸಿದಿರುವುದು



ಆದಿತ್ಯ ಆಸ್ಪತ್ರೆ ಸಮೀಪ ಹೊಂಡ ಬಿದ್ದಿರುವುದಕ್ಕೆ ಕಲ್ಲು ತುಂಬಿರುವುದು.

ಮೈಸೂರು, ನ.23(ಎಸ್‌ಬಿಡಿ)– ಮೈಸೂರಿನ ಗೋಕುಲಂ ಕಾಂಟೂರ್ ರಸ್ತೆ, ಡಾಂಬರೀಕರಣದ ಬೆನ್ನಲ್ಲೇ ಮತ್ತೆ ಅಧ್ವಾನದ ಹಾದಿ ಹಿಡಿದಂತಿದೆ.

ತ್ರಿನೇತ್ರ ವೃತ್ತದ ಸಮೀಪವಿರುವ ಶ್ರೀ ಗಣಪತಿ ಗುಡಿಯ ಎದುರು ರಸ್ತೆ ಕುಸಿದಿದ್ದು, ಆ ಜಾಗಕ್ಕೆ ಆಟೋ ಚಾಲಕರು ಹಾಗೂ ಸ್ಥಳೀಯರು ಕಲ್ಲು ಹಾಕಿ ವಾಹನ ಚಾಲಕರಿಗೆ ಎಚ್ಚರಿಕೆ ನೀಡಿದ್ದಾರೆ. ಆದರೆ ದೊಡ್ಡ ಕಾರುಗಳು, ಶಾಲಾ ಬಸ್ ಇನ್ನಿತರ ಭಾರೀ ವಾಹನಗಳ ಓಡಾಡುವುದರಿಂದ ಮತ್ತಷ್ಟು ಕುಸಿಯುವ ಸ್ಥಿತಿಯಲ್ಲಿದೆ. ಹಾಗೇನಾದರೂ ಆದರೆ ಅಪಘಾತ ಸಂಭವಿಸಿ, ಸಾವು–ನೋವಾಗುವ ಆತಂಕ ಸೃಷ್ಟಿಯಾಗಿದೆ. ಇದೇ ರೀತಿ ಆದಿತ್ಯ ಸರ್ಕಾರಿ ಆಸ್ಪತ್ರೆ ಬಳಿಯೂ ಎರಡು–ಮೂರು ಕಡೆ ಹೊಂಡ ಬಿದ್ದಿದೆ. ಅವುಗಳನ್ನು ದೊಡ್ಡ ಕಲ್ಲುಗಳಿಂದ ಮುಚ್ಚಿದ್ದಾರೆ.

ಒಂದೆರಡು ಮ್ಯಾನ್‌ಹೋಲ್‌ಗಳ ಮುಚ್ಚಳ ತೆಗೆದು, ಬೇಕಾಬಿಟ್ಟಿ ಮುಚ್ಚಲಾಗಿದೆ. ಇದು ರಸ್ತೆಗಿಂತ ಎತ್ತರದಲ್ಲಿದ್ದು ದ್ವಿಚಕ್ರ ವಾಹನಗಳ ಚಕ್ರಗಳು ತಾಕಿದರೆ ಉರುಳಿ ಬೀಳುವುದು ಖಚಿತ. ಅಲ್ಲಲ್ಲಿ ಹಾಕಿರುವ ರಸ್ತೆ ಡುಬ್ಬ(ಹಂಪ್)ಗಳು ಕಣ್ಣಿಗೆ ಕಾಣಿಸುವುದೇ ಇಲ್ಲ. ಬಿಳಿಪಟ್ಟಿ ಬಳಿಯದಿರುವುದರಿಂದ ಗುರುತಿಸಲು ಸಾಧ್ಯವಾಗುವುದಿಲ್ಲ. ರಸ್ತೆ ತುದಿಗಳಲ್ಲಿ ಆಗಲೇ ಸಣ್ಣ ಕಲ್ಲುಗಳು ರಸ್ತೆಯಲ್ಲಿ ಹರಡಿವೆ.

ಕುಡಿಯುವ ನೀರಿನ ಪೈಪ್‌ಲೈನ್ ಕಾಮಗಾರಿಗಾಗಿ ಏಳೆಂಟು ತಿಂಗಳ ಕಾಲ ಈ ರಸ್ತೆ ಸಂಚಾರವೇ ಅಸ್ತವ್ಯಸ್ತವಾಗಿತ್ತು. ಕಾಮಗಾರಿ ಪೂರ್ಣಗೊಂಡ ನಂತರವೂ ಐದಾರು ತಿಂಗಳ ಡಾಂಬರೀಕರಣ ಮಾಡದ ಕಾರಣ ಹೊಂಡಗಳ ನಡುವೆಯೇ ವಾಹನಗಳು ಸಂಚರಿಸುತ್ತಿದ್ದವು. ಈ ರಸ್ತೆ ನಿವಾಸಿಗಳು, ವ್ಯಾಪಾರಿಗಳು ಧೂಳಿನಿಂದ ಹೈರಾಣಾಗಿದ್ದರು. ಇತ್ತೀಚೆಗಷ್ಟೇ ಈ ರಸ್ತೆಗೆ ಡಾಂಬರೀಕರಣ ಮಾಡಿದ್ದು, ಜನ ನಿಟ್ಟುಸಿರು ಬಿಟ್ಟಿದ್ದರು. ಆದರೆ ಕಾಮಗಾರಿ ಬೆನ್ನಲ್ಲೇ ಅಧ್ವಾನವಾಗುತ್ತಿದೆ.

ತ್ರಿನೇತ್ರ ವೃತ್ತದಿಂದ ಶ್ರೀ ಗಣಪತಿ ಗುಡಿ ಕಡೆಗೆ ಸುಮಾರು 100 ಮೀಟರ್ ರಸ್ತೆಗೆ ಡಾಂಬರೀಕರಣ ಮಾಡಿಲ್ಲ. ಜಲ್ಲಿಕಲ್ಲುಗಳು ಕಿತ್ತು ಬಂದಿವೆ. ಅಲ್ಲಲ್ಲಿ ಹೊಂಡ ಬಿದ್ದಿವೆ. ಇಳಿಜಾರು ಪ್ರದೇಶವಾಗಿರುವುದರಿಂದ ಗೋಕುಲಂ ಕಡೆಯಿಂದ ಬರುವ ವಾಹನ ಚಾಲಕರು ಜಾಗರೂಕವಾಗಿರಬೇಕು. ವೇಗವಾಗಿ ಬಂದರೆ ಇಳಿಜಾರಿನಲ್ಲಿ ಕಲ್ಲುಗಳ ರಾಶಿಯಿಂದ ತೊಂದರೆ ಅನುಭವಿಸಬೇಕಾಗುತ್ತದೆ.

ಸಾರ್ವಜನಿಕರ ಬೇಸರ: ಕುಡಿಯುವ ನೀರಿನ ಪೈಪ್‌ಲೈನ್ ಕಾಮಗಾರಿ ನಡೆಸಿರುವುದು ಜನರ ಅನುಕೂಲಕ್ಕಾಗಿಯೇ. ಆದರೆ ನಿಗದಿತ ಸಮಯದಲ್ಲಿ ಕಾಮಗಾರಿ ಪೂರ್ಣಗೊಳಿಸಿ, ರಸ್ತೆಯನ್ನು ಯಥಾಸ್ಥಿತಿಗೊಳಿಸುವುದು ಗುತ್ತಿಗೆದಾರರ ಕರ್ತವ್ಯ. ಆದರೆ ಈ ಕಾಮಗಾರಿಯಿಂದ ಕಾಂಟೂರ್ ರಸ್ತೆಯನ್ನು ಅಸ್ತವ್ಯಸ್ತಗೊಳಿಸಿದಂತಿದೆ. ಈಗ ಡಾಂಬರೀಕರಣ ಮಾಡಿದ್ದರೂ ಅಲ್ಲಲ್ಲಿ ರಸ್ತೆ ಕುಸಿದಿದೆ. ಕಳಪೆ ಕಾಮಗಾರಿ ನಡೆದಿದೆ ಎಂಬ ಗುಮಾನಿ ಸಹಜವಾಗಿ ಮೂಡುತ್ತದೆ. ಕಾಂಟೂರ್ ರಸ್ತೆಯಿಂದ ಗೋಕುಲಂ ಮುಖ್ಯರಸ್ತೆವರೆಗೆ ಡಾಂಬರೀಕರಣ ಪ್ರಗತಿಯಲ್ಲಿದೆ. ಈ ಸಂದರ್ಭದಲ್ಲೇ ಕಾಂಟೂರ್ ರಸ್ತೆಯನ್ನೂ ಸಮರ್ಪಕವಾಗಿ ಅಭಿವೃದ್ಧಿಗೊಳಿಸಲು ಪಾಲಿಕೆ ಅಧಿಕಾರಿಗಳು ಹಾಗೂ ಮಾಜಿ ಕಾರ್ಪೊರೇಟರ್‌ಗಳು ಕ್ರಮ ವಹಿಸಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಇಂದು, ನಾಳೆ ಮೈಸೂರಲ್ಲಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಪ್ರವಾಸ



ಮೈಸೂರು,ನ.23(ಪಿಎಂ)– ಸಮಾಜ ಕಲ್ಯಾಣ ಸಚಿವರೂ ಆದ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ನ.24 ಮತ್ತು 25ರಂದು ಮೈಸೂರಿನಲ್ಲಿ ಪ್ರವಾಸ ಕೈಗೊಂಡಿದ್ದಾರೆ. ನ.24ರಂದು ಬೆಳಿಗ್ಗೆ 11ಕ್ಕೆ ಮುಕ್ತ ವಿವಿಯ ಆಡಳಿತ ಸಭಾಭವನದಲ್ಲಿ ನಡೆಯುವ ಮೈಸೂರು ವಿಭಾಗದ ಜಿಲ್ಲೆಗಳ ಸಮಾಜ ಕಲ್ಯಾಣ ಇಲಾಖೆಯ ವಿವಿಧ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ನ.25ರಂದು ಬೆಳಿಗ್ಗೆ 11ಕ್ಕೆ ಮಾನಸ ಗಂಗೋತ್ರಿಯ ಐಎಎಸ್ ಸಭಾಂಗಣದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಲಿದ್ದಾರೆ. ನಂತರ ಸಂಜೆ 5ಕ್ಕೆ ಮೈಸೂರಿನಿಂದ ಬೆಂಗಳೂರಿಗೆ ಪ್ರಯಾಣ ಬೆಳೆಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಕರ್ನಾಟಕದಲ್ಲಿ ಕ್ರೀಡಾ ಅಕಾಡೆಮಿ ನಿರ್ಮಿಸುವುದಾಗಿ 18 ಲಕ್ಷ ಪಡೆದು ವಂಚನೆ: ಶ್ರೀಶಾಂತ್ ವಿರುದ್ಧ ಕೇಸ್ ದಾಖಲು



ಕಣ್ಣೂರು: ವ್ಯಕ್ತಿಯೊಬ್ಬರು ನೀಡಿದ ದೂರಿನ ಆಧಾರದ ಮೇಲೆ ಕೇರಳ ಪೊಲೀಸರು ಕ್ರಿಕೆಟಿಗ ಎಸ್.ಶ್ರೀಶಾಂತ್ ಮತ್ತು ಇತರ ಇಬ್ಬರ ವಿರುದ್ಧ ವಂಚನೆ ಪ್ರಕರಣ ದಾಖಲಿಸಿದ್ದಾರೆ. ಚೂಂಡಾ ಮೂಲದ ದೂರುದಾರರು, ಆರೋಪಿಗಳಾದ ರಾಜೀವ್ ಕುಮಾರ್ ಮತ್ತು ವೆಂಕಟೇಶ್ ಕಿಣಿ ಅವರು ಕರ್ನಾಟಕದ ಕೊಲ್ಲೂರಿನಲ್ಲಿ ಕ್ರೀಡಾ ಅಕಾಡೆಮಿ ನಿರ್ಮಿಸುವುದಾಗಿ ಹೇಳಿ 2019ರ ಏಪ್ರಿಲ್ 25ರಿಂದ ವಿವಿಧ ದಿನಾಂಕಗಳಲ್ಲಿ 18.70 ಲಕ್ಷ ರೂಗಳನ್ನು ತೆಗೆದುಕೊಂಡು ವಂಚಿಸಿದ್ದಾರೆ. ಇದರಲ್ಲಿ ಶ್ರೀಶಾಂತ್ ಸಹ ಪಾಲುದಾರ ಎಂದು ಆರೋಪಿಸಿದ್ದಾರೆ. ಅಕಾಡೆಮಿಯಲ್ಲಿ ತಮ್ಮನ್ನು ಪಾಲುದಾರರಾಗಿ ಮಾಡುವುದಾಗಿ ಭರವಸೆ ನೀಡಿದ ನಂತರ ತಾನು ಹಣ ಹೂಡಿಕೆ ಮಾಡಿರುವುದಾಗಿ ಸರೀಶ್ ಗೋಪಾಲನ್ ಅವರು ತಮ್ಮ ದೂರಿನಲ್ಲಿ ತಿಳಿಸಿದ್ದಾರೆ. ಶ್ರೀಶಾಂತ್ ಮತ್ತು ಇತರ ಇಬ್ಬರ ವಿರುದ್ಧ ಐಪಿಸಿ ಸೆಕ್ಷನ್ 420(ವಂಚನೆ ಮತ್ತು ಅಪ್ರಾಮಾಣಿಕವಾಗಿ ಆಸ್ತಿ ವಿತರಣೆಗೆ ಪ್ರಚೋದನೆ) ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಒಂದನೇ ಪುಟದಿಂದ

ಸಂಪುಟ ತೀರ್ಮಾನ

ಹಿನ್ನೆಲೆ: ಡಿ.ಕೆ.ಶಿವಕುಮಾರ್ ಅವರು 2013ರಿಂದ 2018ರವರೆಗೆ ಆದಾಯ ಮೀರಿ ಗಳಿಸಿದ್ದ ಆಸ್ತಿ ಸಂಬಂಧ 2018ರಲ್ಲಿ ಪ್ರಕರಣ ದಾಖಲಾಗಿತ್ತು. ಈ ಪ್ರಕರಣವನ್ನು 2019ರ ಸೆಪ್ಟೆಂಬರ್ 25ರಂದು ಅಂದಿನ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಸಿಬಿಐ ತನಿಖೆಗೆ ವಹಿಸಿದ್ದರು. ಪ್ರಕರಣವನ್ನು ಸಿಬಿಐ ತನಿಖೆ ನಡೆಸುವುದನ್ನು ಪ್ರಶ್ನಿಸಿ ಡಿ.ಕೆ.ಶಿವಕುಮಾರ್ ಹೈಕೋರ್ಟ್ ಮೆಟ್ಟಿಲೇರಿದ್ದರು. ಹೈಕೋರ್ಟ್ ಏಕ ಸದಸ್ಯ ಪೀಠ ಅವರ ಅರ್ಜಿಯನ್ನು ವಜಾಗೊಳಿಸಿತ್ತಾದರೂ, ವಿಭಾಗೀಯ ಪೀಠ ಸಿಬಿಐ ತನಿಖೆಗೆ ತಡೆಯಾಜ್ಞೆ ನೀಡಿದೆ. ಈ ನಡುವೆ ರಾಜ್ಯ ಅಡ್ವೊಕೇಟ್ ಜನರಲ್ ಶಶಿಕುಮಾರ್ ಶೆಟ್ಟಿ ಅವರು ನವೆಂಬರ್ 21ರಂದು ಈ ಪ್ರಕರಣ ಸಂಬಂಧ ನೀಡಿದ್ದ ಅಭಿಪ್ರಾಯವನ್ನು ಆಧರಿಸಿ ಗೃಹ ಇಲಾಖೆಯು ಡಿ.ಕೆ.ಶಿವಕುಮಾರ್ ವಿರುದ್ಧದ ಸಿಬಿಐ ತನಿಖೆ ಹಿಂಪಡೆಯುವ ಪ್ರಕ್ರಿಯೆಗೆ ಕಡತವನ್ನು ಸಂಪುಟದ ಮುಂದೆ ಮಂಡಿಸಿತ್ತು. ಸಿಬಿಐನಿಂದ ಪ್ರಕರಣ ಹಿಂಪಡೆದ ನಂತರ ಸ್ಥಳೀಯ ಪೊಲೀಸರು ಅಥವಾ ಲೋಕಾಯುಕ್ತಕ್ಕೆ ತನಿಖೆ ಜವಾಬ್ದಾರಿ ವಹಿಸಬಹುದು ಎಂದು ಅಡ್ವೊಕೇಟ್ ಜನರಲ್ ಅವರ ಅಭಿಪ್ರಾಯವನ್ನು ಎಂದು ಹೇಳಲಾಗಿದೆ. ಆದರೆ ಇಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಸಂಬಂಧ ವಿವರವಾದ ಮಾಹಿತಿ ನೀಡದ ಕಾರಣ ಸರ್ಕಾರಿ ಆದೇಶ ಹೊರ ಬಿದ್ದ ನಂತರವೇ ಪ್ರಕರಣದ ತನಿಖೆಯನ್ನು ಯಾವ ಸಂಸ್ಥೆಗೆ ವಹಿಸಲಾಗುತ್ತದೆ ಎಂಬುದು ತಿಳಿಯಬೇಕಾಗಿದೆ.

ನೀರು ಹರಿಸಲು ಸಿಡಬ್ಲ್ಯುಆರ್‌ಸಿ ನಿರ್ದೇಶನ

ರಾಜ್ಯದಲ್ಲಿ ಉತ್ತಮ ಮಳೆಯಾಗುವ ಸಾಧ್ಯತೆಗಳು ಇಲ್ಲ. ಕಾವೇರಿ ನದಿ ಪಾತ್ರದ ನಾಲ್ಕು ಜಲಾಶಯಗಳಿಗೆ ಒಳಹರಿವು ಬಹುತೇಕ ಸ್ಥಗಿತವಾಗಿದ್ದು, ಸಂಗ್ರಹವಾಗಿರುವ ನೀರು ಸಹ ಮುಂದಿನ ಮಳೆಗಾಲದವರೆಗೆ ಕುಡಿಯುವ ನೀರು, ಬೆಳೆಗಳಿಗೆ ಸಾಲುವುದಿಲ್ಲ. ಇಂತಹ ಸಂಕಷ್ಟದ ಪರಿಸ್ಥಿತಿಯಲ್ಲಿ ತಮಿಳುನಾಡಿಗೆ ನೀರು ಹರಿಸುವ ಸ್ಥಿತಿಯಲ್ಲಿ ನಾವಿಲ್ಲ ಎಂಬ ಕರ್ನಾಟಕದ ವಾದವನ್ನು ಸಿಡಬ್ಲ್ಯುಆರ್‌ಸಿ ಪರಿಗಣಿಸಿಲ್ಲ.

ಕರ್ನಾಟಕವು ಸಿಡಬ್ಲ್ಯುಆರ್‌ಸಿ ಮುಂದೆ ರಾಜ್ಯದ ವಾಸ್ತವ ಸಂಗತಿಯನ್ನು ಮನವರಿಕೆ ಮಾಡಿಕೊಡುವ ಪ್ರಯತ್ನ ಮಾಡಿದೆ. ಅಂದರೆ, ನವೆಂಬರ್ 22 ರವರೆಗೆ ಕರ್ನಾಟಕದ ನಾಲ್ಕು ಜಲಾಶಯಗಳಿಗೆ ಸಂಚಿತ ಒಳಹರಿವಿನ ಕೊರತೆಯು ಶೇ.52.24ರಷ್ಟಿದೆ.

ಭಾರತೀಯ ಹವಾಮಾನ ಇಲಾಖೆ ಮಾಹಿತಿ ಪ್ರಕಾರ ಅಕ್ಟೋಬರ್ ಒಂದರಿಂದ ತಮಿಳುನಾಡಿನಲ್ಲಿ ಮಳೆಯು ಸಾಮಾನ್ಯವಾಗಿದೆ. ಆದ್ದರಿಂದ ಈಶಾನ್ಯ ಹಿಂಗಾರು ಅವಧಿಯಲ್ಲಿ ಕಾವೇರಿ ಜಲಾನಯನ ಪ್ರದೇಶದಲ್ಲಿ ಮತ್ತು ಮೆಟ್ಟೂರು ಜಲಾಶಯದ ಕೆಳಗಿನ ಪ್ರದೇಶಗಳಲ್ಲಿ ತೃಪ್ತಿಕರ ಮಳೆಯ ಪರಿಸ್ಥಿತಿ ಲಭ್ಯವಿರುತ್ತದೆ ಎಂಬ ಸೂಚನೆಗಳಿವೆ.

ತಮಿಳುನಾಡಿನ ಕುರುವಾಯಿ ಬೆಳೆ ಸೆಪ್ಟೆಂಬರ್ ಅಂತ್ಯದ ವೇಳೆಗೆ ಕಟಾವಿಗೆ ಬಂದಿತ್ತು. ಈ ಬೆಳೆಗೆ ನೀರಿನ ಅವಶ್ಯಕತೆ ಇರುವುದಿಲ್ಲ. ಸಾಂಬಾ ಬೆಳೆ ಕೂಡ ಕೊಯ್ಲು ಹಂತವನ್ನು ತಲುಪಿದ್ದು, ಡಿಸೆಂಬರ್ ಮೊದಲ ವಾರದಲ್ಲಿ ಕೊನೆಗೊಳ್ಳಲಿದೆ ಎಂದು ಹೇಳಿದೆ. ಕರ್ನಾಟಕದ 4 ಜಲಾಶಯಗಳಿಗೆ ಒಳಹರಿವು ಸ್ಥಗಿತಗೊಂಡಿದೆ. ಅಂದರೆ ನವೆಂಬರ್ 21ರಲ್ಲಿನ ಮಾಹಿತಿ ಪ್ರಕಾರ ಕರ್ನಾಟಕದ 4 ಜಲಾಶಯಗಳಲ್ಲಿ ಪ್ರಸ್ತುತ ನೀರಿನ ಸಂಗ್ರಹವು ನೀರಾವರಿ, ಕುಡಿಯುವ ಮತ್ತು ಇತರ ಅಗತ್ಯಗಳ ಅವಶ್ಯಕತೆಗಳನ್ನು ಪೂರೈಸಲು ಸಾಕಾಗುವುದಿಲ್ಲ ಎಂದು ತಿಳಿಸಿದೆ.

ಜಲಾನಯನ ಪ್ರದೇಶದಿಂದ ಸ್ವಾಭಾವಿಕವಾಗಿ ಅನಿಯಮಿತವಾಗಿ ಲಭ್ಯವಾಗುವ ನೀರನ್ನು ಹೊರತುಪಡಿಸಿ ಬಿಳಿಗುಂಡ್ಲು ಜಲ ಮಾಪನ ಕೇಂದ್ರ ತಲುಪಲು ಕರ್ನಾಟಕವು ತನ್ನ ಜಲಾಶಯಗಳಿಂದ ಯಾವುದೇ ನೀರನ್ನು ಬಿಡುಗಡೆ ಮಾಡಲು ಸಾಧ್ಯವಾಗುವುದಿಲ್ಲ ಎಂದು ಹೇಳಿದೆ. ಅಲ್ಲದೆ, ಕರ್ನಾಟಕದ ಜಲಾಶಯದಿಂದ ಯಾವುದೇ ಪ್ರಮಾಣದ ನೀರು ಬಿಡುಗಡೆಗೆ ನಿರ್ದೇಶನವನ್ನು ನೀಡದಂತೆ ಸಮಿತಿಯನ್ನು ಕೋರಿದೆ.

ಆದರೆ, ನೆರೆಯ ತಮಿಳುನಾಡು ಮುಂದಿನ 30 ದಿನಗಳ ಕಾಲ ಕರ್ನಾಟಕವು 5000 ಕ್ಯೂಸೆಕ್ ನೀರು ಬಿಡಬೇಕು ಎಂದು ಒತ್ತಾಯಿಸಿದೆ.

ಎರಡು ರಾಜ್ಯಗಳ ಮನವಿಯನ್ನು ಆಲಿಸಿದ ಸಿಡಬ್ಲ್ಯುಆರ್ ಸಿ ಅಂತಿಮವಾಗಿ, ನವೆಂಬರ್ ತಿಂಗಳ ಉಳಿದ ಅವಧಿಗೆ ಹಾಗೂ ಡಿಸೆಂಬರ್ ತಿಂಗಳ ಪೂರ್ಣ ಅವಧಿಗೆ ಕರ್ನಾಟಕವು, ಸುಪ್ರೀಂ ಕೋರ್ಟ್ ಮಾರ್ಪಡಿಸಿದಂತೆ ಸಿಡಬ್ಲ್ಯುಡಿಟಿಯ ಆದೇಶದ ಪ್ರಕಾರ ನಿಗದಿತ ಪ್ರಮಾಣದ ನೀರಿನ ಹರಿವನ್ನು ಖಚಿತಪಡಿಸಿಕೊಳ್ಳಬೇಕೆಂದು ಹೇಳಿದೆ. ಅಂದರೆ ನವೆಂಬರ್ 23ರಿಂದ ಡಿಸೆಂಬರ್ 23 ರವರೆಗೆ ಪ್ರತಿ ದಿನ 2700 ಕ್ಯೂಸೆಕ್ಸ್ ನೀರು ಹರಿಸಲು ಶಿಫಾರಸು ಮಾಡಿದೆ.

ನೋಡಲ್ ಅಧಿಕಾರಿ ನೇಮಕ

ಜಿಲ್ಲೆಗಳಿಗೆ ವಾರಕ್ಕೆ 3 ದಿನ ಭೇಟಿ ನೀಡಿ, ಮಾನವ–ಪ್ರಾಣಿ ಸಂಘರ್ಷ ಕುರಿತಂತೆ ಪರಿಶೀಲನೆ ನಡೆಸಬೇಕು. ಸಂತ್ರಸ್ಥರಿಗೆ ಬಾಕಿಯಿರುವ ಪರಿಹಾರ ಮೊತ್ತ ಶೀಘ್ರ ಬಿಡುಗಡೆಗೆ ಕ್ರಮ ಕೈಗೊಳ್ಳಬೇಕು. ಆಯಾ ಜಿಲ್ಲೆಗಳಲ್ಲಿ ಮಾನವ–ಪ್ರಾಣಿ ಸಂಘರ್ಷ ತಡೆಗೆ ಕೈಗೊಳ್ಳಬೇಕಾದ ಕ್ರಮ, ಆಯಾ ಜಿಲ್ಲಾಧಿಕಾರಿ ಹಾಗೂ ಪೊಲೀಸ್ ವರಿಷ್ಠಾಧಿಕಾರಿಗಳೊಂದಿಗೆ ಸಮಾಲೋಚಿಸಬೇಕು. ಕ್ಷೇತ್ರ ಭೇಟಿಯ ವರದಿಯನ್ನು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಸಲ್ಲಿಸಬೇಕು. ಅಲ್ಲದೆ, ರಾಜ್ಯಮಟ್ಟದಲ್ಲಿ ಕೈಗೊಳ್ಳಬೇಕಾದ ಕ್ರಮ ಕುರಿತಂತೆ ಸಮಗ್ರ ವರದಿ ಸಲ್ಲಿಸಿ ಸರ್ಕಾರಕ್ಕೆ ಸಲ್ಲಿಸುವಂತೆ ನೋಡಲ್ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

ಸೂಚನೆ ಪಾಲಿಸಿದ್ದೆ ನನಗೆ ಶೂಲವಾಯ್ತು!

ಎಂಬ ಮಾಜಿ ಸಚಿವ ಅರವಿಂದ ಲಿಂಬಾವಳಿ ಅವರ ಅಭಿಪ್ರಾಯಕ್ಕೆ ನನ್ನ ಸಹಮತವಿದೆ ಎಂದು ಇದೇ ವೇಳೆ ಸೋಮಣ್ಣ ಸ್ಪಷ್ಟಪಡಿಸಿದರು. ನಮ್ಮ ಪಕ್ಷದ ಬೆಳವಣಿಗೆ ಒಂದು ರೀತಿ ಸೋಮನಹಳ್ಳಿ ಮುದುಕಿ ಕಥೆಯಾಗಿದೆ ಎಂದು ಮಾರ್ಮಿಕವಾಗಿ ಪಕ್ಷದ ನಿರ್ಧಾರಗಳನ್ನು ಟೀಕಿಸಿದರು. ರಾಜಕಾರಣ ಯಾವುದೇ ಮನೆ ತನಕ್ಕೆ ಸೀಮಿತವಲ್ಲ ಎಂದು ಯಡಿಯೂರಪ್ಪ ಕುಟುಂಬದ ವಿರುದ್ಧ ಪರೋಕ್ಷ ವಾಗ್ದಾಳಿ ಮಾಡಿದ ಸೋಮಣ್ಣ, ರಾಜಕಾರಣ ದೊಂಬ ರಾಟವಲ್ಲ. ನಾಟಕ ಕಂಪನಿಯೂ ಅಲ್ಲ, ಒಳ ಒಪ್ಪಂದಕ್ಕೆ ಸೀಮಿತವೂ ಅಲ್ಲ ಎಂದು ಅಭಿಪ್ರಾಯಪಟ್ಟರು. ಇತ್ತೀಚಿನ ರಾಜಕೀಯ ಬೆಳವಣಿಗೆ ನಂತರ ಯಡಿಯೂರಪ್ಪ ನಿಮ್ಮನ್ನು ಸಂಪರ್ಕ ಮಾಡಿದ್ದಾರೆಯೇ ಎಂಬ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿದ ಸೋಮಣ್ಣ, ನನ್ನನ್ನು ಯಾರೂ ಸಂಪರ್ಕಿಸಿಲ್ಲ, ನಾನೂ ಕೂಡ ಯಾರನ್ನು ಸಂಪರ್ಕಿಸಿಲ್ಲ. ಈ ರೀತಿಯ ಯಾವ ಪ್ರಯತ್ನವೂ ಅಗಿಲ್ಲ ಎಂದು ತಿಳಿಸಿದರು. ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಎಸ್‌ಎಂಪಿ ಶಿವಪ್ರಕಾಶ್ ಸೇರಿದಂತೆ ಕೆಲವರು ಈ ವೇಳೆ ಉಪಸ್ಥಿತರಿದ್ದರು. ಮೈಸೂರು ಜಿಲ್ಲಾ ಉಸ್ತುವಾರಿ

ಸಚಿವರಾಗಿದ್ದ ವೇಳೆ ಸೋಮಣ್ಣ ಬರುತ್ತಾರೆಂದರೆ ಸಾಕು ಬಿಜೆಪಿಯ ಮುಖಂಡರು ಹಾಗೂ ಕಾರ್ಯಕರ್ತರ ಪಡೆಯೆ ಸೇರುತ್ತಿತ್ತು. ಸೋಮಣ್ಣ ಹೋದ ಕಡೆ, ಒಂದೆಡೆ ಅವರನ್ನು ಹಿಂಬಾಲಿಸುತ್ತಿದ್ದರು. ಸೋಮಣ್ಣ ಅವರನ್ನು ಹಾಡಿ ಹೊಗಳುತ್ತಿದ್ದರು. ಆದರೆ ಇವತ್ತು ಸೋಮಣ್ಣ ಹಿಂದೆ ಮುಂದೆ ಸುತ್ತುತ್ತಿದ್ದವರು ನಾಪತ್ತೆಯಾಗಿದ್ದರು. ಆದರೆ ಅವರ ಅಪ್ಪಟ ಕೆಲವು ಅಭಿಮಾನಿಗಳು ಮಾತ್ರ ಜೊತೆಗಿದ್ದರು. ಆದರೆ ಇತ್ತೀಚಿನ ರಾಜಕೀಯ ಬೆಳವಣಿಗೆಯಲ್ಲಿ ಸೋಮಣ್ಣ ಬಿಜೆಪಿ ಜೊತೆ ಅಂತರ ಕಾಯ್ದುಕೊಂಡಿರುವ ಕಾರಣ ಬಿಜೆಪಿಗರು ಕೂಡ ಸೋಮಣ್ಣ ಅವರಿಂದ ಅಂತರ ಕಾಯ್ದುಕೊಂಡಿದ್ದಾರೆ. ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನ ಪಡೆಯಲು ಪೈಪೋಟಿ ನಡೆಸುತ್ತಿದ್ದ ಸೋಮಣ್ಣನಿಗೆ ಈಗ ನಿರಾಸೆಯಾಗಿದೆ. ಇದರಿಂದ ತುಮಕೂರಿನಲ್ಲಿ ನವೆಂಬರ್ 6 ರಂದು ಸೋಮಣ್ಣ ಬೆಂಬಲಿಗರ ಸಮಾವೇಶ ನಡೆಸುತ್ತಿದ್ದಾರೆ. ತರುವಾಯ ತಮ್ಮ ಮುಂದಿನ ರಾಜಕೀಯ ನಡೆಯನ್ನು ಪ್ರಕಟಿಸುವ ಸಾಧ್ಯತೆ ಇದೆ. ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಂಡು ತುಮಕೂರು ಲೋಕಸಭಾ ಕ್ಷೇತ್ರದಿಂದ ಸ್ಪರ್ಧೆ ಮಾಡುವ ಇರಾದೆ ಇಟ್ಟುಕೊಂಡಿದ್ದಾರೆ ಎನ್ನಲಾಗಿದೆ. ಇದಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸಮ್ಮತಿಸಿದ್ದಾರೆಂದು ಹೇಳಲಾಗುತ್ತಿದೆ. ಈ ಹಿನ್ನೆಲೆ ಸೋಮಣ್ಣ ಡಿಸೆಂಬರ್ 6 ರಂದು ತುಮಕೂರಿನಲ್ಲಿ ಸಮಾವೇಶ ಆಯೋಜಿಸಿದ್ದಾರೆ.

ಹಿಂದಿ ಹೇರಿಕೆ ವಿರುದ್ಧ ತಮಿಳರಂತೆ ಹೋರಾಡದಿದ್ದರೆ ಕನ್ನಡಕ್ಕೆ ಉಳಿಗಾಲವಿಲ್ಲ

ಪ್ರೊ॥ ಪದ್ಮಾಶೇಖರ್ ಅಭಿಮತ



ಮೈಸೂರು,ನ.23(ಎಂಟಿವೈ)– ಕರ್ನಾಟಕದಲ್ಲಿ ಹಿಂದಿ ಹೇರಿಕೆ ವಿರುದ್ಧ ತಮಿಳುನಾಡಿನ ಜನರಂತೆ ಹೋರಾಟ ಮಾಡದಿದ್ದರೆ ಕನ್ನಡ ಭಾಷೆಗೆ ಉಳಿಗಾಲವಿಲ್ಲ ಎಂದು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಪದ್ಮಾಶೇಖರ್ ಅಭಿಪ್ರಾಯಪಟ್ಟಿದ್ದಾರೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಮುಕ್ತ ವಿವಿ ವತಿಯಿಂದ ಗುರುವಾರ ಆಯೋಜಿಸಿದ್ದ 68ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಭಾಷಾವಾರು ಪ್ರಾಂತ್ಯ ರಚನೆಯಾದ ನಂತರ ಕನ್ನಡ ಭಾಷಿಗರು ಏಕೀಕರಣಗೊಂಡು 68 ವರ್ಷಗಳಾಗಿದೆ. ಆದರೆ, ಕರ್ನಾಟಕವೆಂದು ನಾಮಕರಣಗೊಂಡು 50 ವರ್ಷ ಸಂದಿದೆ. ಈ ನಡುವೆಯೂ ಇಂದಿಗೂ ಕನ್ನಡ ಭಾಷೆ ಉಳಿಸಿ, ಬೆಳೆಸುವಂತೆ ಕೂಗು ಮೊಳಗುತ್ತಲೇ ಇದೆ. ಕನ್ನಡ ಭಾಷಾ ಬೆಳವಣಿಗೆಗೆ ಕೇಂದ್ರ ಸರ್ಕಾರ, ಶಿಕ್ಷಣ ಕ್ಷೇತ್ರ ಮತ್ತು ಆಡಳಿತ ಕ್ಷೇತ್ರ ಈ ಮೂರು ತೊಡಕುಗಳು ನಮ್ಮ ಮುಂದೆ ಇದೆ ಕೇಂದ್ರ ಸರ್ಕಾರ ಹಿಂದಿಯನ್ನೂ ರಾಷ್ಟ್ರ ಭಾಷೆಯಾಗಿ ಬಿಂಬಿಸುತ್ತಿದೆ. ಆದರೆ, ಹಿಂದಿ ಸಂಪರ್ಕ ಭಾಷೆಯಾಗಿದ್ದು, ಅದನ್ನು ರಾಷ್ಟ್ರ ಭಾಷೆಯೆಂದು ತಪ್ಪು ತಪ್ಪಾಗಿ ಹೇಳುತ್ತಿದ್ದಾರೆ. ಅಧಿಕಾರಿಗಳು, ರಾಜಕಾರಣಿಗಳು ದಾಸ್ಯಕ್ಕೆ ಒಳಗಾಗಿದ್ದಾರೆ ಎಂದು ವಿಷಾದಿಸಿದರು.

ಪ್ರಾಥಮಿಕ ಶಿಕ್ಷಣವು ಮಾತೃಭಾಷೆಯಲ್ಲಿರಬೇಕು ಎಂದು ಭಾಷಾ ತಜ್ಞರು, ಶಿಕ್ಷಣ ತಜ್ಞರು ಸಲಹೆ ನೀಡಿದ್ದಾರೆ. ಮಾತೃಭಾಷೆ ನಮ್ಮ ಪರಿಸರದ ಭಾಷೆ. ನಿತ್ಯ ವ್ಯವಹರಿಸುವ ಭಾಷೆ. ಮಾತೃಭಾಷೆಯಲ್ಲಿ ಶಿಕ್ಷಣ ದೊರತರೆ ಮಕ್ಕಳ ಮನೋವಿಕಾಸ ಸಹಜವಾಗಿ ಅರಳುತ್ತದೆ. ಆದರೆ, ಪೋಷಕರಲ್ಲಿರುವ ಆಂಗ್ಲ ಭಾಷೆ ಮೇಲಿನ ಕುರುಡು ವ್ಯಾಮೋಹ ಬಂಡವಾಳಶಾಹಿಗಳ ಅಸ್ತ್ರವಾಗಿದೆ ಆಡಳಿತದಲ್ಲಿ ಪರಿಣಾಮಕಾರಿಯಾಗಿ ಕನ್ನಡ ಅನುಷ್ಠಾನಕ್ಕೆ ತರುವ ಜವಾಬ್ದಾರಿ ಯನ್ನು ಸರ್ಕಾರಗಳು ನಿರ್ವಹಿಸಲಿಲ್ಲ. ಕೇಂದ್ರ ಸರ್ಕಾರದ ಕಚೇರಿಯಾದರೂ ಕರ್ನಾಟಕದಲ್ಲಿ ಕನ್ನಡದಲ್ಲಿಯೇ ವ್ಯವಹರಿಸಬೇಕು. ಆದರೆ, ಹಿಂದಿ ಬಿಟ್ಟು ಬೇರೇನೂ ಮಾತಾಡುವುದಿಲ್ಲ. ಕನ್ನಡಿಗರು ಕನ್ನಡ ಬಿಟ್ಟು ಇಂಗ್ಲಿಷ್, ಹಿಂದಿಯಲ್ಲಿ ವ್ಯವಹರಿಸುತ್ತಾರೆ ಎಂದು ವಿಷಾದಿಸಿದರು.

ಚೀನಾ, ಜಪಾನ್‌ನಲ್ಲಿ ಇಂಗ್ಲಿಷ್ ಅನ್ನು ಕಡ್ಡಾಯ ಮಾಧ್ಯಮವಾಗಿ ಕಲಿಸಲಾಗುತ್ತದೆ. ಆದರೆ, ಮಾತೃಭಾಷೆಯಲ್ಲಿಯೇ ಶಿಕ್ಷಣ ಪಡೆಯಬೇಕು. ತಮಿಳುನಾಡು, ಕೇರಳ, ಮಹಾರಾಷ್ಟ್ರದಲ್ಲೂ ರಾಜ್ಯ ಭಾಷೆಗಳ ಬೆಳವಣಿಗೆ ದೃಷ್ಟಿಯಿಂದ ಮಾದರಿಯಾಗಿವೆ. ಕನ್ನಡದಲ್ಲಿ ಭಾಷಾ ಅಭಿಮಾನ ಇವತ್ತಿಗೂ ಮಿಲಿಯನ್ ಡಾಲರ್ ಪ್ರಶ್ನೆಯಾಗಿದೆ. ಭಾಷಾವಾರು ಪ್ರಾಂತ್ಯ ರಚನೆಯ ಅರ್ಥ ನೆರೆಹೊರೆಯ ಭಾಷಿಕರು ಸಹಬಾಳ್ವೆಯಿಂದ ಬಾಳುವುದಾಗಿತ್ತು. ಕರ್ನಾಟಕದಲ್ಲಿ ಕನ್ನಡ ಸಾರ್ವಭೌಮ, ಆಡಳಿತದಲ್ಲಿ ವಿಜೃಂಭಿಸಬೇಕಿತ್ತು. ಅದಕ್ಕಾಗಿ ಕನ್ನಡ ಕಾವಲು ಸಮಿತಿ, ಅನಂತರ ಕನ್ನಡ ಅಭಿವೃದ್ಧಿ ಪ್ರಾಧಿಕಾರ ರಚಿಸಲಾಯಿತು. ಆದರೂ ನಿರೀಕ್ಷಿಸಿದಂತೆ ಭಾಷೆ ಬೆಳವಣಿಗೆಯಾಗಲಿಲ್ಲ ಎಂದರು.

> ಹೆಚ್.ಡಿ.ದೇವೇಗೌಡರು ಪ್ರಧಾನಿಯಾದಾಗ ಕನ್ನಡದಲ್ಲಿ ವ್ಯವಹರಿಸುವ ಸಾಧ್ಯತೆಗಳನ್ನು ಬಳಸಿಕೊಳ್ಳದೇ ಅವಸರದಲ್ಲಿ ಹಿಂದಿ ಕಲಿತರು. ಆಗ ಅವರು ಕನ್ನಡದಲ್ಲೇ ವ್ಯವಹರಿಸುತ್ತೇನೆ ಎಂದು ದೃಢ ನಿಲುವು ಪ್ರದರ್ಶಿಸಿದ್ದರೆ, ಇಂದು ಕನ್ನಡ ಭಾಷೆ ಬಳಕೆ ಇನ್ನಷ್ಟು ಗಟ್ಟಿಗೊಳ್ಳುತ್ತಿತ್ತು. ಆ ಅವಕಾಶ ಕೈ ತಪ್ಪಿದೆ ಎಂದರು.
> – ಪ್ರೊ.ಪದ್ಮಾ ಶೇಖರ್.
> ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕುಲಪತಿ ಪ್ರೊ.ಶರಣಪ್ಪ ವಿ. ಹಲಸೆ ವಹಿಸಿದ್ದರು. ಕುಲಸಚಿವ ಪ್ರೊ.ಕೆ.ಎಲ್.ಎನ್. ಮೂರ್ತಿ, ಪರೀಕ್ಷಾಂಗ ಕುಲಸಚಿವ ಡಾ.ಕೆ.ಬಿ. ಪ್ರವೀಣ್, ಹಣಕಾಸು ಅಧಿಕಾರಿ ವಿ.ಎಂ. ರಮೇಶ್, ಶೈಕ್ಷಣಿಕ ಡೀನ್ ಪ್ರೊ.ಲಕ್ಷ್ಮೀ, ಅಧ್ಯಯನ ಕೇಂದ್ರದ ಡೀನ್ ಪ್ರೊ.ರಾಮನಾಥ ಇದ್ದರು.

ಕಾಂತರಾಜ್ ವರದಿ ವಿರೋಧಿಸುವ ಮೂಲಕ ಬಿಜೆಪಿ, ಜೆಡಿಎಸ್‌ನಿಂದ ಹಿಂದುಳಿದ ವರ್ಗಗಳಿಗೆ ಅನ್ಯಾಯ



ಮೈಸೂರು,ನ.23(ಎಂಟಿವೈ)– ರಾಜ್ಯದಲ್ಲಿ ಈ ಹಿಂದೆ ಕಾಂತರಾಜ್ ನೇತೃತ್ವದ ಸಮಿತಿ ನಡೆಸಿದ ಜಾತಿ ಗಣತಿ ವರದಿಯನ್ನು ಜಾರಿಗೊಳಿಸದಂತೆ ಬಿಜೆಪಿ ಹಾಗೂ ಜೆಡಿಎಸ್ ವಿರೋಧಿಸುವ ಮೂಲಕ ಹಿಂದುಳಿದ ವರ್ಗಗಳಿಗೆ ಅನ್ಯಾಯ ಮಾಡುತ್ತಿವೆ ಎಂದು ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮು ಆರೋಪಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ ಜನಸಂಖ್ಯೆಯಲ್ಲಿ ಯಾವ ಸಮುದಾಯದ ಜನ ಎಷ್ಟು ಸಂಖ್ಯೆಯಲ್ಲಿದ್ದಾರೆ. ಆ ಸಮುದಾಯಗಳ ಆರ್ಥಿಕ, ಶೈಕ್ಷಣಿಕ ಹಾಗೂ ಸಾಮಾಜಿಕ ಸ್ಥಿತಿಗತಿ ಬಗ್ಗೆ ಸ್ಪಷ್ಟಚಿತ್ರಣ ದೊರೆಯಲಿದೆ ಎಂಬ ಕಾರಣದಿಂದ ಜೆಡಿಎಸ್ ಮತ್ತು ಬಿಜೆಪಿ ವರದಿ ಜಾರಿಗೊಳಿಸದಂತೆ ಒತ್ತಾಯಿಸುತ್ತಿವೆ. ಇದರೊಂದಿಗೆ ಕೆಲವು ಸಮುದಾಯಗಳು ವರದಿಯಲ್ಲಿ ಏನಿದೆ ಎನ್ನುವುದನ್ನು ಅರಿಯದೆ ಜಾತಿ ಗಣತಿ ವರದಿ ಅನುಷ್ಠಾನ ಮಾಡದಂತೆ ಒತ್ತಾಯಿಸುತ್ತಿವೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ರಾಜ್ಯದ ಜನರ ಸಾಮಾಜಿಕ ಸ್ಟೇಟಸ್ ಬಗ್ಗೆ ನಿಖರ ಮಾಹಿತಿ ಕ್ರೋಢೀಕರಿಸುವುದಕ್ಕಾಗಿ ಜಾತಿ ಗಣತಿ ಅವಶ್ಯಕವಾಗಿದೆ. ಸಿದ್ದರಾಮಯ್ಯ ಅವರು ಮೊದಲ ಬಾರಿ ಮುಖ್ಯಮಂತ್ರಿಯಾಗಿದ್ದ ವೇಳೆ ಜಾತಿ ಗಣತಿಗಾಗಿ ಸುಮಾರು 160 ಕೋಟಿ ಬಿಡುಗಡೆ ಮಾಡಿದ್ದರು. ಅಲ್ಲದೆ, ಸಮಿತಿಯನ್ನು ರಚಿಸಿದ್ದರು. ಈ ಸಮಿತಿಯು ಈಗಾಗಲೇ ವೈಜ್ಞಾನಿಕವಾಗಿ ವರದಿ ಸಿದ್ಧಪಡಿಸಿದೆ ಈ ಗಣತಿಯಲ್ಲಿ ವಿವಿಧ ಇಲಾಖೆಗಳ ಸುಮಾರು 1.30 ಲಕ್ಷ ಸರ್ಕಾರಿ ನೌಕರರು ಪಾಲ್ಗೊಂಡಿದ್ದಾರೆ. ಅದರಲ್ಲಿ ಬಹುತೇಕ ಎಲ್ಲ ಸಮುದಾಯಗಳ ಅಧಿಕಾರಿಗಳು ಕೆಲಸ ಮಾಡಿದ್ದಾರೆ. ಇದರಿಂದ ಯಾವ ಸಮುದಾಯಗಳಿಗೂ ಅನ್ಯಾಯವಾಗಲು ಸಾಧ್ಯವೇ ಇಲ್ಲ ಎಂದು ಸ್ಪಷ್ಟಪಡಿಸಿದರು.

ಜಾತಿ ಗಣತಿ ವರದಿಯ ಮೂಲಪ್ರತಿ ಕಳವಾಗಿದೆ ಎಂದು ಅಪಪ್ರಚಾರ ಮಾಡಲಾಗುತ್ತಿದೆ. ಒಂದು ವೇಳೆ ಮೂಲ ಪ್ರತಿ ಕಳುವಾಗಿದ್ದರೆ, ಅದಕ್ಕೆ ಈ ಹಿಂದೆ ಅಧಿಕಾರದಲ್ಲಿದ್ದ ಬಿಜೆಪಿ ಸರ್ಕಾರವೇ ಕಾರಣ. ಅಂದಿನ ಸಿಎಂ ಬಸವರಾಜ ಬೊಮ್ಮಾಯಿ, ಸಚಿವ ಕೋಟಾ ಶ್ರೀನಿವಾಸ ಪೂಜಾರಿ ಅವರೇ ಕಳವು ಮಾಡಿಸಿರಬಹುದಾಗಿದೆ ಎಂದು ಆರೋಪಿಸಿದರು. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ರವಿನಂದನ್, ಚಿನ್ನುಕೃಷ್ಣ, ಎಸ್. ರಾಜೇಶ್, ಲೋಕೇಶ್ ಮಾದಾಪುರ ಇದ್ದರು.

ಡಾ. ಯತೀಂದ್ರ ವಿರುದ್ಧ ಅಪಪ್ರಚಾರ

ಕೀಳನಪುರ ಗ್ರಾಪಂ ಸದಸ್ಯರ ಆರೋಪ



ಮೈಸೂರು,ನ.23(ಎಂಟಿವೈ)– ವರುಣ ವಿಧಾನಸಭಾ ಕ್ಷೇತ್ರದಲ್ಲಿ ಜನರ ಅಹವಾಲು ಆಲಿಸಿ, ಗ್ರಾಮೀಣ ಪ್ರದೇಶದ ಅಭಿವೃದ್ಧಿಗೆ ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಶ್ರಮಿಸುತ್ತಿರುವುದನ್ನು ಸಹಿಸದೆ ಸುಳ್ಳು ಆರೋಪ ಮಾಡಲಾಗುತ್ತಿದೆ ಎಂದು ಕೀಳನಪುರ ಗ್ರಾ.ಪಂ ಸದಸ್ಯರು ಹಾಗೂ ಗ್ರಾಮದ ಮುಖಂಡರು ಆರೋಪಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಕೀಳನಪುರ ಗ್ರಾಮದ ಮುಖಂಡ ಎಸ್.ಮಂಜುನಾಥ್ ಹಾಗೂ ಗ್ರಾಮದ ಮುಖಂಡರು ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವರುಣ ಕ್ಷೇತ್ರದಲ್ಲಿ ಜನಸೇವೆ ಮಾಡಲು ಡಾ.ಯತೀಂದ್ರ ಸಿದ್ದರಾಮಯ್ಯ ಪ್ರಾಮಾಣಿಕ ಸೇವೆ ಸಲ್ಲಿಸುತ್ತಿದ್ದಾರೆ. ಕ್ಷೇತ್ರದಲ್ಲಿ ಪಕ್ಷಭೇದ ಮರೆತು ಎಲ್ಲರ ಹಿತಕಾಯುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದಾರೆ. ನ.15ರಂದು ಕೀಳನಪುರ ಗ್ರಾ.ಪಂ ವ್ಯಾಪ್ತಿಯಲ್ಲಿ ನಡೆದ ಜನಸಂಪರ್ಕ ಸಭೆಯಲ್ಲಿ ಪಾಲ್ಗೊಂಡಿದ್ದ ಗ್ರಾಮದ ಮುಖಂಡರ ಮುಂದೆ ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಅವರು ಕ್ಷೇತ್ರದ ವಿವಿಧ ಗ್ರಾಮಗಳಲ್ಲಿ ಶಿಥಿಲಾವಸ್ಥೆ ತಲುಪಿರುವ ಶಾಲಾ ಕೊಠಡಿಗಳನ್ನು ತುರ್ತಾಗಿ ದುರಸ್ತಿ ಮಾಡುವುದಕ್ಕೆ ಸಿಎಸ್‌ಆರ್ ಹಣ ಬಿಡುಗಡೆ ಮಾಡುವಂತೆ ಚರ್ಚಿಸಿದ್ದಾರೆ. ಅಲ್ಲದೆ, ತಂದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಮೊಬೈಲ್‌ನಲ್ಲಿ ಮಾತನಾಡಿದ್ದಾರೆ. ಇದಕ್ಕೆ ರೆಕ್ಕೆಪುಕ್ಕ ಕಟ್ಟಿ, ವಿರೋಧಿಗಳು ಅಪಪ್ರಚಾರ ಮಾಡಿದ್ದಾರೆ ಎಂದು ಕಿಡಿಕಾರಿದರು. ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ವಕ್ತಾರ ದುದ್ದಗೆರೆ ಪಿ. ಮಹದೇವು, ರವಿ, ಮೇಗಳಾಪುರ ಸೋಮಣ್ಣ, ಪ್ರಸನ್ನ, ಶಿವಣ್ಣ, ಮಹದೇವಸ್ವಾಮಿ ಹಾಗೂ ಇನ್ನಿತರರು ಇದ್ದರು.

ಇಂದು ಕನಕದಾಸರ ಜೀವನಾಧಾರಿತ 'ಕನಕ ಮಾರ್ಗ' ಚಿತ್ರ ಪ್ರದರ್ಶನ



ಮೈಸೂರು,ನ.23(ಎಂಟಿವೈ)– ಮೈಸೂರಿನ ಮಹಾರಾಜ ಕಾಲೇಜಿನ ಶತಮಾನೋತ್ಸವ ಭವನದಲ್ಲಿ ನಾಳೆ(ನ.24) ಸಂಜೆ 4 ಗಂಟೆಗೆ ಸಂತಶ್ರೇಷ್ಠ ಭಕ್ತ ಕನಕದಾಸರ ಜೀವನಾಧಾರಿತ 'ಕನಕ ಮಾರ್ಗ' ಚಲನಚಿತ್ರ ಪ್ರದರ್ಶನ ಏರ್ಪಡಿಸಲಾಗಿದೆ ಎಂದು ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಕೆ.ಬಿ. ಸೋಮೇಗೌಡ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕನಕಶಕ್ತಿ ಮಹಿಳಾ ಕ್ಷೇಮಾಭಿವೃದ್ಧಿ ಸಂಘ, ಕರ್ನಾಟಕ ರಾಜ್ಯ ಜಿಲ್ಲಾ ಮತ್ತು ತಾಲೂಕು ಕುರುಬರ ಸಂಘ, ಹಾಲುಮತ ಮಹಾಸಭಾ ಸೇರಿದಂತೆ ಸಮುದಾಯದ ವಿವಿಧ ಸಂಘಟನೆಗಳ ಸಂಯುಕ್ತಾಶ್ರಯದಲ್ಲಿ 'ಕನಕ ಮಾರ್ಗ' ಚಲನಚಿತ್ರ ಪ್ರದರ್ಶನ ಏರ್ಪಡಿಸಲಾಗಿದೆ. ಭಕ್ತ ಕನಕದಾಸರ ಬಗ್ಗೆ ಜನರಿಗೆ ತಿಳಿಸುವ ನಿಟ್ಟಿನಲ್ಲಿ ಹಾಗೂ ಕನಕದಾಸರು ಸಮಾಜದಲ್ಲಿ ಸುಧಾರಣೆ ತರಲು ನಡೆಸಿದ ಹೋರಾಟ ಸೇರಿದಂತೆ ಇನ್ನಿತರ ಮಹತ್ತರ ವಿಚಾರವನ್ನು ತಿಳಿಸಲು ಈ ಚಲನಚಿತ್ರ ಪ್ರದರ್ಶನ ಆಯೋಜಿಸಲಾಗಿದೆ. ಉಚಿತ ಪ್ರವೇಶಾವಕಾಶ ಕಲ್ಪಿಸಲಾಗಿದ್ದು, ಎಲ್ಲಾ ಸಮುದಾಯಗಳ ಜನರನ್ನು ಮುಕ್ತವಾಗಿ ಆಹ್ವಾನಿಸಲಾಗಿದೆ ಎಂದರು.

ಎರಡೂವರೆ ಗಂಟೆ ಅವಧಿಯ ಕನಕಮಾರ್ಗ ಚಲನಚಿತ್ರ ಕುಟುಂಬದ ಸದಸ್ಯರೆಲ್ಲರೂ ಕುಳಿತು ನೋಡುವ ಸಿನಿಮಾ. ಮನಮುಟ್ಟುವ ಹಾಗೂ ಅರ್ಥಗರ್ಭಿತ ಸಂದೇಶ ನೀಡಲಿದೆ. ಈಗಾಗಲೇ ಬೆಂಗಳೂರು ಚಲನಚಿತ್ರೋತ್ಸವ ಹಾಗೂ ದಸರಾ ಚಿತ್ರೋತ್ಸವದಲ್ಲಿ ಈ ಚಲನಚಿತ್ರ ಪ್ರದರ್ಶನಗೊಂಡಿದೆ. ಕನಕದಾಸರ ಸಂದೇಶವನ್ನು ಜನರಿಗೆ ಮನಮುಟ್ಟುವಂತೆ ಚಿತ್ರೀಕರಿಸಲಾಗಿದೆ ಪಾತ್ರಧಾರಿಗಳು ಎಲ್ಲಾ ಪಾತ್ರಗಳಿಗೂ ಜೀವ ತುಂಬಿದ್ದಾರೆ. ಪಠ್ಯದಲ್ಲಷ್ಟೇ ಕನಕರ ಬಗ್ಗೆ ತಿಳಿಯುವ ಮಕ್ಕಳಿಗೆ ಈ ಚಲನಚಿತ್ರ ಅವರ ಬಗ್ಗೆ ಅರಿವು ಮೂಡಿಸುವಂತದ್ದಾಗಿದ್ದು, ಎಲ್ಲ ಶಾಲೆಗಳಲ್ಲಿ ಪ್ರದರ್ಶಿಸುವ ಉದ್ದೇಶವಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ನಿರ್ಮಾಪಕ ಕೆಂಪೇಗೌಡ, ನಿರ್ದೇಶಕ ವಿಶಾಲ್‌ರಾಜ್, ಕೆಂಪೇಗೌಡ, ತಾ.ಪಂ. ಮಾಜಿ ಅಧ್ಯಕ್ಷರಾದ ಸಿದ್ದರಾಮೇಗೌಡ, ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರಾದ ಎಂ.ಎ.ಕಮಲಾ ಅನಂತರಾಮು, ಜವರೇಗೌಡ, ಶಿವರುದ್ರಪ್ಪ ಹಾಗೂ ಇನ್ನಿತರರು ಇದ್ದರು.

ನಾಳೆ 'ಉದಯ ಗಾನ' ಸಂಗೀತ ನಮನ



ಮೈಸೂರು,ನ.23(ಎಂಟಿವೈ)– ಮೈಸೂರಿನ ಕಲಾಮಂದಿರದಲ್ಲಿ ನ.25ರಂದು ಸಂಜೆ 5ಕ್ಕೆ ಆರಭಿ ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ ಗಾಯಕ ಜಿ.ಉದಯಶಂಕರ್ ಅವರಿಗೆ 'ಉದಯ ಗಾನ' ಸಂಗೀತ ನಮನ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಟ್ರಸ್ಟ್ ಮುಖ್ಯಸ್ಥ ಮಹೇಶ್‌ಕುಮಾರ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಗೀತ ನಮನ ಕಾರ್ಯಕ್ರಮಕ್ಕೆ ಎ.ಎಸ್.ಪ್ರಸನ್ನಕುಮಾರ್ ಅವರ ತಂಡ ಸಂಗೀತ ಸಹಕಾರ ನೀಡಲಿದೆ. ನಟ, ನಿರ್ದೇಶಕ ಟಿ. ಗುರುದತ್, ಚಲನಚಿತ್ರ ಸಾಹಿತಿ ನಾಗೇಂದ್ರ ಪ್ರಸಾದ್ ಅತಿಥಿಗಳಾಗಿರುವರು. ಕಾರ್ಯಕ್ರಮದಲ್ಲಿ ಜಿ. ಉದಯಶಂಕರ್ ರಚನೆಯ 18 ಹಾಡುಗಳನ್ನು ಹಾಡಲಾಗುವುದು. ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಹೆಣ್ಣು ಮಕ್ಕಳಿಗೆ ನೆರವು ನೀಡುವ ಕಾರ್ಯಕ್ರಮ ಸಹ ನಮ್ಮ ಟ್ರಸ್ಟ್ ಹಮ್ಮಿಕೊಂಡಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಟ್ರಸ್ಟ್ ಸದಸ್ಯರಾದ ಡಾ. ಸುನೀತಾ, ಎ.ಎಸ್. ಪ್ರಸನ್ನಕುಮಾರ್, ಡಾ. ಕುಲದೀಪ್ ಹಾಗೂ ಇದ್ದರು.

ನ.26ಕ್ಕೆ ಬ್ಯಾಂಕಿಂಗ್ ಉದ್ಯೋಗಿಗಳಿಂದ 'ಕನ್ನಡ ಹಬ್ಬ'



ಮೈಸೂರು, ನ.23(ಎಂಟಿವೈ)– ಮೈಸೂರಿನ ಕಲಾಮಂದಿರದಲ್ಲಿ ನ.26ರಂದು ಬೆಳಗ್ಗೆ 9.30ಕ್ಕೆ ಬ್ಯಾಂಕಿಂಗ್ ಉದ್ಯೋಗಿಗಳ ಕನ್ನಡ ಕೂಟದ ವತಿಯಿಂದ 'ಕನ್ನಡ ಹಬ್ಬ' ಆಯೋಜಿಸಲಾಗಿದೆ ಎಂದು ಬ್ಯಾಂಕಿಂಗ್ ಉದ್ಯೋಗಿಗಳ ಕನ್ನಡ ಕೂಟದ ಅಧ್ಯಕ್ಷ ರಾಜೇಂದ್ರ ಪೈ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮದ ಅಂಗವಾಗಿ ಬೇರೆ ರಾಜ್ಯದ ಬ್ಯಾಂಕ್ ಉದ್ಯೋಗಿಗಳಿಗಾಗಿ 'ಇಂಗ್ಲಿಷ್‌ನಲ್ಲಿ ಕೇಳುವೆ ಕನ್ನಡದಲ್ಲಿ ಹೇಳು ಸ್ಪರ್ಧೆ', ಉದ್ಯೋಗಿಗಳು, ನಿವೃತ್ತರು, ಅವರ ಕುಟುಂಬದವರಿಗೆ ರಂಗೋಲಿ ಸ್ಪರ್ಧೆ, ಬೆಂಕಿ ಬಳಸದೇ ಅಡುಗೆ, ಕಸದಿಂದ ರಸ, ಕನ್ನಡ ಗಾದೆ, ಒಗಟು, ಸಂಗೀತ ಕುರ್ಚಿ, ಹಗ್ಗಜಗ್ಗಾಟ, ಅಂತ್ಯಾಕ್ಷರಿ ಮೊದಲಾದ ಸ್ಪರ್ಧೆ ನಡೆಯಲಿವೆ. ಮಕ್ಕಳಿಗೆ ಚಿತ್ರಕಲೆ ಸ್ಪರ್ಧೆ ನಡೆಸಲಾಗುತ್ತಿದೆ. ನ. 25ರಂದು ಬೆಳಗ್ಗೆ 7ಕ್ಕೆ ಮಹಾರಾಜ ಕಾಲೇಜು ಮೈದಾನದಲ್ಲಿ ಅಂತರ ಬ್ಯಾಂಕ್ ಕ್ರಿಕೆಟ್ ಪಂದ್ಯಾವಳಿಯನ್ನು ಬ್ಯಾಂಕ್ ಸಿಬ್ಬಂದಿ, ನಿವೃತ್ತರು ಹಾಗೂ ಕುಟುಂಬದ ಸದಸ್ಯರಿಗಾಗಿ ಆಯೋಜಿಸಲಾಗಿದೆ ಎಂದು ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ಬ್ಯಾಂಕಿಂಗ್ ಉದ್ಯೋಗಿಗಳ ಕನ್ನಡ ಕೂಟದ ಸದಸ್ಯ ರಾಮಚಂದ್ರ, ಶಂಕರ ಸುಬ್ರಹ್ಮಣ್ಯ, ಸ್ನೇಹಾ, ಆನಂದ ಕುಮಾರ್, ರಾಧಾಕೃಷ್ಣ ಹಾಗೂ ರಘುರಾಂ ಇದ್ದರು.

ಆಧುನಿಕ ಬೇಸಾಯ ತಾಂತ್ರಿಕತೆ ಕುರಿತು ವಿಚಾರ ಸಂಕೀರಣ

ಮೈಸೂರು.ನ.23– ಮೈಸೂರು ತೋಟಗಾರಿಕೆ ಇಲಾಖೆ ವತಿಯಿಂದ ಶುಂಠಿ, ಅರಿಶಿನ, ತೆಂಗು ಬೆಳೆಗಳ ಆಧುನಿಕ ಬೇಸಾಯ ತಾಂತ್ರಿಕತೆ ಕುರಿತು ವಿಚಾರ ಸಂಕೀರಣವನ್ನು ಕರ್ಜನ್ ಪಾರ್ಕ್ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಹತ್ತಿರ ಇರುವ ಡಾ. ಎಂ. ಹೆಚ್. ಮರೀಗೌಡ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದು, ತೆಂಗು ಬಾಧಿಸುವ ರೈನಸಾರೋಸ್ ದುಂಬಿ ಹಾಗೂ ಕೆಂಪು ಮತಿ ಹುಳದ ನಿರ್ವಹಣೆ ಲಿಂಗಾರ್ಷಕ ಬಳೆಗಳನ್ನು (Pheromone traps) ರಿಯಾಯಿತಿ ದರದಲ್ಲಿ ನೀಡಲಾಗುತ್ತಿದೆ. ಹೆಚ್ಚಿನ ಮಾಹಿತಿಗಾಗಿ ಸಹಾಯಕ ತೋಟಗಾರಿಕೆ ಅಧಿಕಾರಿ ಕಸಬಾ ಹೋಬಳಿ ದೂ.ಸಂ. 9901387284. ವರುಣ ಹೋಬಳಿ ದೂ. ಸಂ. 7259592484. ಜಯಪುರ ಹೋಬಳಿ ದೂ.ಸಂ. 8904673607. ಇಲವಾಲ ಹೋಬಳಿ ದೂ.ಸಂ. 9986086262 ಸಂಪರ್ಕಿಸಬಹುದು ಎಂದು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉದ್ಯಮಗಳಲ್ಲಿ ಕನ್ನಡಿಗರಿಗೆ ಉದ್ಯೋಗಾವಕಾಶಕ್ಕಾಗಿ ಕಟ್ಟುನಿಟ್ಟಿನ ಕ್ರಮ ಅತ್ಯಗತ್ಯ

ಪ್ರೊ. ಎನ್.ಎಂ.ತಳವಾರ ಅಭಿಮತ



ಮೈಸೂರು, ನ.23(ಎಂಟಿವೈ)– ರಾಜ್ಯದಲ್ಲಿರುವ ಉದ್ಯಮ ಹಾಗೂ ಕಾರ್ಖಾನೆಗಳಲ್ಲಿ ಕನ್ನಡಿಗರಿಗೆ ಉದ್ಯೋಗಾವಕಾಶ ಒದಗಿಸಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವ ಅಗತ್ಯವಿದೆ ಎಂದು ಶಾಸ್ತ್ರೀಯ ಕನ್ನಡ ಅತ್ಯುನ್ನತ ಕೇಂದ್ರದ ಯೋಜನಾ ನಿರ್ದೇಶಕ ಪ್ರೊ.ಎನ್.ಎಂ.ತಳವಾರ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಗುರುವಾರ ಆಯೋಜಿಸಿದ್ದ 'ಕನ್ನಡ ರಾಜ್ಯೋತ್ಸವ' ಹಾಗೂ 'ಕರ್ನಾಟಕ ನಾಮಕರಣ ಸುವರ್ಣ ಸಂಭ್ರಮ' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪ್ರಸ್ತುತ ಸಂದರ್ಭದಲ್ಲಿ ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಪಡೆದವರಿಗೆ ಉದ್ಯೋಗದ ಭರವಸೆ ಸಿಗುತ್ತಿಲ್ಲ. ಉದ್ಯೋಗ ಕ್ಷೇತ್ರದಲ್ಲೂ ಇಂಗ್ಲಿಷ್ ಹಾಗೂ ಹಿಂದಿಗೆ ಆದ್ಯತೆ ನೀಡಲಾಗುತ್ತಿದೆ. ಈ ತಾರತಮ್ಯ ನೀತಿಯನ್ನು ಕನ್ನಡಿಗರಿಂದಲೇ ಆಯ್ಕೆಯಾದ ಸರ್ಕಾರ ಹೋಗಲಾಡಿಸಬೇಕು. ರಾಜ್ಯದಲ್ಲಿರುವ ಸಂಸ್ಥೆಗಳಲ್ಲಿ ಕಡ್ಡಾಯವಾಗಿ ಕನ್ನಡದಲ್ಲಿಯೇ ವ್ಯವಹರಿಸುವಂತಾಗಬೇಕು. ಉದ್ಯೋಗ ಸೇರಿದಂತೆ ಇನ್ನಿತರ ಕಾರಣಗಳಿಂದ ಕರ್ನಾಟಕ ರಾಜ್ಯಕ್ಕೆ ಆಗಮಿಸುವವರಿಗೆ ನಿರ್ದಿಷ್ಟಾವಧಿಯಲ್ಲಿ ಕನ್ನಡ ಕಲಿಸಬೇಕು. ಅಲ್ಲದೆ, ಸ್ಥಳೀಯರಿಗೆ ಎಲ್ಲ ಸೇವೆ ಹಾಗೂ ಸೌಲಭ್ಯಗಳು ಮಾತೃಭಾಷೆಯಲ್ಲಿಯೇ ಸಿಗುವಂತಾಗಬೇಕು ಎಂದು ಒತ್ತಾಯಿಸಿದರು.

ದೇಶದಲ್ಲಿ ನಡೆದ ಸ್ವಾತಂತ್ರ್ಯ ಚಳವಳಿಯಷ್ಟೇ ಪ್ರಬಲವಾಗಿ ಕರ್ನಾಟಕ ರಾಜ್ಯ ಸ್ಥಾಪನೆ ಹಾಗೂ ಏಕೀಕರಣಕ್ಕೆ ಹೋರಾಟ ನಡೆದಿವೆ. ಅನೇಕ ಹೋರಾಟಗಳಲ್ಲಿ ಪಾಲ್ಗೊಂಡು ಕನ್ನಡ ಉಳಿಸಿದ ಹಾಗೂ ದುಡಿದವರನ್ನು ಎಲ್ಲರೂ ಸ್ಮರಿಸಬೇಕು. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಅಭಿವೃದ್ಧಿಗೆ ವಿಶ್ವವಿದ್ಯಾಲಯ ಕಾಳಜಿ ವಹಿಸಬೇಕು. ರಾಜ್ಯೋತ್ಸವವು ಸಂಸ್ಥೆಗೆ ಮಾತ್ರ ಸೀಮಿತಗೊಳಿಸದೇ ವಿಶ್ವವಿದ್ಯಾಲಯವೇ ಆಚರಿಸುವಂತಾಗಬೇಕು ಎಂದು ಸಲಹೆ ನೀಡಿದರು.

ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಮಾತನಾಡಿ, ಮುಂದಿನ ವರ್ಷದಿಂದ ರಾಜ್ಯೋತ್ಸವವನ್ನು ವಿಶ್ವವಿದ್ಯಾಲಯದಿಂದಲೇ ಆಚರಿಸಲಾಗುವುದು. ಕನ್ನಡ ಅನುಷ್ಠಾನದ ಬಗ್ಗೆ ಅಧಿಕಾರದಲ್ಲಿರುವವರು ನಿತ್ಯ ಯೋಚಿಸಬೇಕು. ಕನ್ನಡವು ಅನ್ನದ ಭಾಷೆಯಾಗಿದ್ದು, ಕನ್ನಡಿಗರಿಗೆ ಎಲ್ಲ ಕಡೆಯೂ ಅವಕಾಶ ಸಿಗಬೇಕು. ರಾಜ್ಯವು ಸಾಂಸ್ಕೃತಿಕ ವೈವಿಧ್ಯದಿಂದ ಶ್ರೀಮಂತವಾಗಿದ್ದು, ಆಳಿದ ರಾಜವಂಶಗಳು ಕನ್ನಡವನ್ನು ಬೆಳಗಿಸಿವೆ. ವಚನಕಾರರು, ಕವಿಗಳು, ಶರಣರು, ದಾಸರು ಕಟ್ಟಿದ ನುಡಿ ಪರಂಪರೆಯು ಭಾಷೆಯನ್ನು ಶಾಶ್ವತಗೊಳಿಸುತ್ತದೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕಿ ಪ್ರೊ.ವಿಜಯಕುಮಾರಿ ಎಸ್. ಕರಿಕಲ್, ಪ್ರಾಧ್ಯಾಪಕರಾದ ಪ್ರೊ.ಎನ್.ಕೆ.ಲೋಲಾಕ್ಷಿ, ಪ್ರೊ.ನಂಜಯ್ಯ ಹೊಂಗನೂರು, ಪ್ರೊ.ಬಿ.ಕೆ.ರವೀಂದ್ರನಾಥ, ಪ್ರೊ.ಎಸ್.ಡಿ.ಶಶಿಕಲಾ ಇನ್ನಿತರರು ಉಪಸ್ಥಿತರಿದ್ದರು.

'ಶಿವಾಜಿ ಬಹದ್ದೂರ್' ಚಿತ್ರದಲ್ಲಿ ರಾಜ್‌ಬಹದ್ದೂರ್, ರಜನಿ



'ಶಿವಾಜಿ ಬಹದ್ದೂರ್' ಚಿತ್ರದಲ್ಲಿ ರಜನಿ ಆಪ್ತ ರಾಜ್‌ಬಹದ್ದೂರ್

ಸಂಗೀತ ಸಂಯೋಜನೆ ಹಾಗೂ ನಿರ್ದೇಶನ ಎರಡೂ ವಿಭಾಗದಲ್ಲಿ ಗುರುತಿಸಿಕೊಂಡಿರುವ ಆರೋನ್ ಕಾರ್ತಿಕ್ ನಿರ್ದೇಶನದ ಮತ್ತೊಂದು ಚಿತ್ರ 'ಶಿವಾಜಿ ಬಹದ್ದೂರ್'. ಇತ್ತೀಚೆಗಷ್ಟೇ ಈ ಚಿತ್ರಕ್ಕೆ ಚಾಲನೆ ದೊರೆಯಿತು. ಶಿವಾಜಿ ಬಹದ್ದೂರ್ ಎನ್ನುವುದು ಎರಡು ಪಾತ್ರಗಳ ಹೆಸರಾಗಿದ್ದು, ರಜನಿಕಾಂತ್ ಆಪ್ತ ರಾಜ್‌ಬಹದ್ದೂರ್ ಈ ಚಿತ್ರದಲ್ಲಿ ಲೀಡ್ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ.

ಚಿತ್ರ ಕುರಿತಂತೆ ನಿರ್ದೇಶಕ ಆರೋನ್ ಕಾರ್ತಿಕ್ ಮಾತನಾಡುತ್ತಾ, ನಮ್ಮ ಚಿತ್ರದಲ್ಲಿ ಶಿವಾಜಿ ಎನ್ನುವುದು ಪ್ರಧಾನಮಂತ್ರಿ ಪಾತ್ರದ ಹೆಸರು. ಬಹದ್ದೂರ್ ಎಂದರೆ ಮುಖ್ಯಮಂತ್ರಿಯ ಹೆಸರು. ಶಿವಾಜಿ ಪಾತ್ರದ ಧ್ವನಿ ಮಾತ್ರ ಸಿನಿಮಾದಲ್ಲಿ ಕೇಳುತ್ತದೆ. ಬಹದ್ದೂರ್ ಅಂದರೆ ಮುಖ್ಯಮಂತ್ರಿ ಪಾತ್ರದಲ್ಲಿ ರಾಜ್ ಬಹದ್ದೂರ್ ಅವರು ನಟಿಸುತ್ತಿದ್ದಾರೆ. ಪ್ರಪಂಚಕ್ಕೆ ಮಾರಕವಾಗಿರುವ ಭಯೋತ್ಪಾದನೆಯನ್ನು ತಡೆಗಟ್ಟಲು ಹೋರಾಡುವ ಉತ್ತಮ ಮುಖ್ಯಮಂತ್ರಿಯಾಗಿ ರಾಜ್ ಬಹದ್ದೂರ್ ಕಾಣಿಸಿಕೊಳ್ಳಲಿದ್ದಾರೆ. ಜೊತೆಗೆ ವಿಲನ್ ಪಾತ್ರದಲ್ಲಿ ಅಮೀರ್‌ಖಾನ್ ಸಹೋದರ ಫೈಸಲ್‌ಖಾನ್ ನಟಿಸಲಿದ್ದಾರೆ. ರಾಜೀವ್ ರಾಥೋಡ್, ಪಲ್ಲವಿ ಪ್ರಕಾಶ್, ಸುಶ್ಮಿತ, ಶೋಭ, ಗಣೇಶ್‌ರಾವ್ ಚಿತ್ರದ ಮುಖ್ಯ ಭೂಮಿಕೆಯಲ್ಲಿದ್ದಾರೆ. ನಾನೇ ಚಿತ್ರದ ಸಂಗೀತ ಸಂಯೋಜನೆ ಮಾಡುತ್ತಿದ್ದೇನೆ ಎಂದರು. ನಂತರ ನಟ ರಾಜ್‌ಬಹದ್ದೂರ್ ಮಾತನಾಡುತ್ತಾ, ರಜನಿಕಾಂತ್ ಕುರಿತು ಮಾತನಾಡುತ್ತಾ, ರಜನಿಗೆ ನಾನು ಈ ಚಿತ್ರದಲ್ಲಿ ನಟಿಸುತ್ತಿರುವ ವಿಷಯ ತಿಳಿಸಿದೆ. ಅವರು ತುಂಬಾ ಖುಷಿಪಟ್ಟರು. ಚಿತ್ರ ರೆಡಿಯಾದ ಮೇಲೆ ಬಂದು ನೋಡುವುದಾಗಿಯೂ ಅವರು ಹೇಳಿದ್ದಾರೆ. ನಾನು ಈ ಹಿಂದೆ ರಜನಿ ಅವರ ಚಿತ್ರಗಳಲ್ಲಿ ಸಣ್ಣಪುಟ್ಟ ಪಾತ್ರಗಳಲ್ಲಿ ಅಭಿನಯಿಸಿದ್ದೆ. ಲೀಡ್‌ಪಾತ್ರ ಮಾಡುತ್ತಿರುವುದು ಇದೇ ಮೊದಲು. ನಾನು ಚಿತ್ರದಲ್ಲಿ ನಟಿಸುತ್ತಿರುವ ವಿಷಯ ತಿಳಿದು ಇಲ್ಲಿನ ರಜನಿಕಾಂತ್ ಅಭಿಮಾನಿಗಳು ತುಂಬಾ ಸಂತೋಷಪಟ್ಟಿದ್ದಾರೆ. ಈ ಸಿನಿಮಾ ಬಿಡುಗಡೆಗೆ ಕಾಯುತ್ತಿರುವುದಾಗಿಯೂ ಹೇಳಿದ್ದಾರೆ. ರಜನಿಕಾಂತ್ ಅಭಿಮಾನಿಗಳು ಸಿನಿಮಾ ನೋಡಿದರೆ ಸಿನಿಮಾ ಗೆದ್ದ ಹಾಗೆ ಎಂದು ಹೇಳಿದರು. ಚಿತ್ರದ ನಿರ್ಮಾಪಕರಾದ ಶಿವಪೂರ್ಣ ಹಾಗೂ ಮುತ್ತುರಾಜ್ ಮಾತನಾಡಿ ಮಾಧ್ಯಮಗಳ ಸಹಕಾರ ಕೋರಿದರು.



ಇಂದು ತೆರೆಮೇಲೆ 'ಎಲೆಕ್ಟ್ರಾನಿಕ್‌ಸಿಟಿ'

ಬೆಂಗಳೂರಿಗೆ ಐಟಿ ಸಿಟಿ ಎಂಬ ಹೆಸರು ಬರಲು ಎಲೆಕ್ಟ್ರಾನಿಕ್ ಸಿಟಿಯೇ ಮುಖ್ಯ ಕಾರಣ. ಅಷ್ಟೊಂದು ಐಟಿ, ಬಿಟಿ ಕಂಪನಿಗಳು ಅದೇ ಏರಿಯಾದಲ್ಲಿವೆ. ಅಂತಹ ಪ್ರತಿಷ್ಠಿತ ಬಡಾವಣೆಯ ಹೆಸರಿಟ್ಟುಕೊಂಡು ಆರ್.ಚಿಕ್ಕಣ್ಣ ನಿರ್ದೇಶನ ಮಾಡಿರುವ ಚಿತ್ರ 'ಎಲೆಕ್ಟ್ರಾನಿಕ್ ಸಿಟಿ' ಈ ವಾರ ತೆರೆ ಕಾಣುತ್ತಿದೆ. ಈ ಚಿತ್ರದಲ್ಲಿ ನಾಯಕ, ನಾಯಕಿಯಾಗಿ ಆರ್ಯನ್ ಶೆಟ್ಟಿ, ದಿಯಾ ಆಶ್ಲೇಶ ನಟಿಸಿದ್ದಾರೆ. ಇತ್ತೀಚೆಗಷ್ಟೇ ಈ ಚಿತ್ರದ ಟ್ರೈಲರ್ ಬಿಡುಗಡೆ ಕಾರ್ಯಕ್ರಮ ನಡೆಯಿತು.

ವೇದಿಕೆಯಲ್ಲಿ ಚಿತ್ರದ ಕುರಿತು ಮಾತನಾಡಿದ ಚಿಕ್ಕಣ್ಣ, ಸುಮಾರು ವರ್ಷಗಳಿಂದ ನಾನು ಐಟಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ಅಲ್ಲಿನ ಟೆಕ್ಕಿಗಳ ಬಗ್ಗೆ ಸಾಕಷ್ಟು ತಿಳಿದುಕೊಂಡಿದ್ದೇನೆ. ಈ ಐಟಿ ಉದ್ಯೋಗಿಗಳ ಬದುಕು, ಅವರ ಜೀವನ ಶೈಲಿಯನ್ನೇ ಇಟ್ಟುಕೊಂಡು ಒಂದು ಸಿನಿಮಾ ಮಾಡಬಾರದೇಕೇ ಎಂಬ ಆಲೋಚನೆ ನನಗೆ ಬಂತು. ನಂತರ ಕಥೆ ರೆಡಿಮಾಡಿಕೊಂಡು, ಇಂಡಸ್ಟ್ರಿಯ ಅನೇಕರ ಜೊತೆ ಚರ್ಚಿಸಿ, ಅದನ್ನು ಒಂದು ಹಂತಕ್ಕೆ ತಂದೆ. ಕೊನೆಗೆ 2021ರಲ್ಲಿ ಶೂಟಿಂಗ್ ಪ್ರಾರಂಭಿಸಿದೆ. ಸಿನಿಮಾ ರೆಡಿಯಾದ ನಂತರ ಹಲವಾರು ಫಿಲಂ ಫೆಸ್ಟಿವಲ್‌ಗಳಲ್ಲಿ ಪ್ರದರ್ಶನಕ್ಕೆ ಆಯ್ಕೆಯಾಯಿತು. ಈವರೆಗೆ 42 ಚಲನಚಿತ್ರೋತ್ಸವಗಳಲ್ಲಿ ಪ್ರದರ್ಶನಗೊಂಡು, ವಿಮರ್ಶಕರ ಮೆಚ್ಚುಗೆ ಗಳಿಸಿ, ಮೂವತ್ತಕ್ಕೂ ಅಧಿಕ ಪ್ರಶಸ್ತಿಗಳನ್ನು ವಿವಿಧ ವಿಭಾಗಗಳಲ್ಲಿ ಪಡೆದುಕೊಂಡಿದೆ. ಇಂಥ ಸಿನಿಮಾ ಮಾಡಿರುವುದಕ್ಕೆ ನನಗೆ ತುಂಬಾ ಹೆಮ್ಮೆಯಿದೆ. ನಮ್ಮ ಪ್ರಯತ್ನವನ್ನು ನಾಡಿನ ಜನರಿಗೆ ತೋರಿಸಬೇಕೆಂದು ಚಿತ್ರವನ್ನು ಬಿಡುಗಡೆ ಮಾಡುತ್ತಿದ್ದೇವೆ. ನ.24ಕ್ಕೆ ಎಲೆಕ್ಟ್ರಾನಿಕ್ ಸಿಟಿ ರಾಜ್ಯಾದ್ಯಂತ ರಿಲೀಸಾಗುತ್ತಿದೆ ಎಂದು ಹೇಳಿದರು. ನಂತರ ನಾಯಕ ಆರ್ಯನ್ ಶೆಟ್ಟಿ ಮಾತನಾಡಿ, ಈ ಚಿತ್ರದಲ್ಲಿ ನಾನೊಬ್ಬ ಐಟಿ ಉದ್ಯೋಗಿಯಾಗಿ ಕಾಣಿಸಿಕೊಂಡಿದ್ದೇನೆ. ಈ ಸಿನಿಮಾದಿಂದ ನನಗೆ ಘೋಸ್ಟ್ ಚಿತ್ರದಲ್ಲಿ ನಟಿಸುವ ಅವಕಾಶ ದೊರೆಯಿತು ಎಂದು ಹೇಳಿದರು. ನಾಯಕಿಯರಾದ ದಿಯಾ ಆಶ್ಲೇಶ, ರಕ್ಷಿತ ಕೆರೆಮನೆ ಹಾಗೂ ನಟಿ ರಶ್ಮಿ ತಂತಮ್ಮ ಪಾತ್ರಗಳ ಬಗ್ಗೆ ಚಿಕ್ಕದಾಗಿ ಹೇಳಿಕೊಂಡರು.

ಚಿತ್ರ ನಿರ್ಮಾಣದತ್ತ 'ಸಖತ್' ಸ್ಟುಡಿಯೋ



ಸುನೀಲ್‌ರಾವ್, ಅನುಪಮಾ ಗೌಡ, ಸಿಂಧು ಲೋಕನಾಥ್ ನಟಿಸಿದ 'ಲೂಸ್ ಕನೆಕ್ಷನ್' ವೆಬ್‌ಸೀರಿಸ್ ನಿರ್ಮಿಸಿದ್ದ ಸಖತ್ ಸ್ಟುಡಿಯೋ ಇದೀಗ ಚಿತ್ರ ನಿರ್ಮಾಣಕ್ಕಿಳಿದಿದೆ. ಆರ್.ಜೆ.ಪ್ರದೀಪ್ ಮತ್ತು ಶ್ವೇತಾ ಆರ್. ಪ್ರಸಾದ್ ನೇತೃತ್ವದ ಸಖತ್ ಸ್ಟುಡಿಯೋ ವೆಬ್ ಸರಣಿಗಳ ಮೂಲಕ ಪ್ರೇಕ್ಷಕರನ್ನು ಆಕರ್ಷಿಸುತ್ತಲೇ ಇತ್ತು. ಶಿವರಾಜ್‌ಕುಮಾರ್ ಪುತ್ರಿ ನಿವೇದಿತಾ ಶಿವರಾಜ್‌ಕುಮಾರ್ ಅವರ ಸಹ ಯೋಗದೊಂದಿಗೆ, ನಾಗಭೂಷಣ ಮತ್ತು ಸಂಜನಾ ಆನಂದ್ ಅಭಿನಯದ "ಹನಿಮೂನ್", ಪೂರ್ಣ ಮೈಸೂರು ಮತ್ತು ಸಿರಿ ರವಿಕುಮಾರ್ ಅಭಿನಯದ 'ಬೈ ಮಿಸ್ಟೇಕ್' ಮತ್ತು ಅರವಿಂದ್ ಅಯ್ಯರ್, ದಿಶಾಮದನ್ ಅಭಿನಯದ ಹೇಟ್ ಯು ರೋಮಿಯೊ ಹೀಗೆ ಹಲವಾರು ವೆಬ್ ಸೀರೀಸ್ ನೋಡುಗರ ಗಮನ ಸೆಳೆದಿವೆ. ಈಗ ಸಿನಿಮಾ ಜಗತ್ತಿಗೆ ಕಾಲಿಡುವ ಮೂಲಕ ಹೊಸ ಅಧ್ಯಾಯ ಪ್ರಾರಂಭಿಸಿದೆ. ತನ್ನ ಮೊದಲ ಚಿತ್ರದ ಚಿತ್ರೀಕರಣ ಮುಗಿಸಿ ಇದೀಗ ಪೋಸ್ಟ್ ಪ್ರೊಡಕ್ಷನ್ ಹಂತ ತಲುಪಿದೆ. ಪುಕ್ಸಟ್ಟೆ ಲೈಫ್ ಚಿತ್ರ ನಿರ್ಮಿಸಿದ್ದ ನಾಗರಾಜ್ ಸೋಮಯಾಜಿ ಇದೀಗ 'ಸಖತ್' ಸ್ಟುಡಿಯೋದ ಮೊದಲ ಸಿನಿಮಾ ನಿರ್ದೇಶನದ ಜವಾಬ್ದಾರಿಯನ್ನು ಹೊತ್ತಿದ್ದಾರೆ.

ಮುಂದಿನ ವಾರ ವಿಶಿಷ್ಟ ಶೀರ್ಷಿಕೆ, ಪರಿಕಲ್ಪನೆ ಮತ್ತು ತಾರಾಗಣವನ್ನು ಅನಾವರಣಗೊಳಿಸಲು ಯೋಜಿಸಿದೆ. ಇದು ಒಂದು ಅದ್ಭುತವಾದ ಸಿನಿಮೀಯ ಅನುಭವದ ಭರವಸೆಯನ್ನು ಈ ತಂಡ ನೀಡುತ್ತದೆ. ಹೆಚ್ಚು ಹೆಚ್ಚು ಕನ್ನಡ ಸಿನಿಮಾಗಳು ನಿರ್ಮಾಣವಾಗಬೇಕು ಹಾಗೂ ಗೆಲ್ಲಬೇಕೆಂಬ ನಿರೀಕ್ಷೆಯಲ್ಲಿರುವ ಪ್ರೇಕ್ಷಕವರ್ಗ, ಒಟಿಟಿ ಕ್ಷೇತ್ರದಲ್ಲಿ ಪ್ರದೀಪ್ ಅವರ ಹಿಂದಿನ ನಾಯಕತ್ವ ಮತ್ತು ಛಾಯಾಗ್ರಹಣ ಮತ್ತು ಕಥೆ ಹೇಳುವಿಕೆಯಲ್ಲಿ ನಾಗರಾಜ್ ಅವರ ಪ್ರಭಾವ, ಸೃಜನಶೀಲ ಮನಸ್ಸುಗಳನ್ನು ಒಳಗೊಂಡಿರುವ ತಂಡವು ನಿಸ್ಸಂದೇಹವಾಗಿ 'ಸಖತ್' ಕನ್ನಡ ಚಿತ್ರವನ್ನು ಪ್ರೇಕ್ಷಕನಿಗೆ ನೀಡುತ್ತಾರೆಂಬ ಭರವಸೆ ಮೂಡಿಸಿದೆ.

ದೈನಂದಿನ ಬದುಕಿನಲ್ಲಿ 'ಮುದುಡಿದ ಎಲೆಗಳು...'



ಮನುಷ್ಯ ತನ್ನ ದಿನನಿತ್ಯದ ಬದುಕಿನಲ್ಲಿ ಎದುರಿಸುತ್ತಿರುವ ಹಲವಾರು ಸಮಸ್ಯೆಗಳು, ಬವಣೆಗಳನ್ನೇ ಪ್ರಧಾನವಾಗಿಟ್ಟುಕೊಂಡು ಎಂ.ಶಂಕರ್ ಅವರು 'ಮುದುಡಿದ ಎಲೆಗಳು' ಚಿತ್ರವನ್ನು ಪ್ರಸ್ತುತ ಪಡಿಸುತ್ತಿದ್ದಾರೆ. ಒಂದು ಪ್ರೀತಿ, ಒಂದು ಕಥೆ ಟ್ಯಾಗ್‌ಲೈನ್ ಇರುವ ಈ ಚಿತ್ರಕ್ಕೆ ಇತ್ತೀಚೆಗೆ ಕಂಠೀರವ ಸ್ಟುಡಿಯೋದಲ್ಲಿ ಚಾಲನೆ ದೊರೆಯಿತು. ಎಸ್.ನಾರಾಯಣ್ ಅವರ ಪುತ್ರ ಪಂಕಜ್ ಈ ಚಿತ್ರದಲ್ಲಿ ನಾಯಕನಾಗಿ ನಟಿಸುತ್ತಿದ್ದಾರೆ. ಮುಹೂರ್ತದ ನಂತರ ಮಾಧ್ಯಮಗಳ ಜೊತೆ ಮಾತನಾಡಿದ ನಿರ್ಮಾಪಕ ಹಾಗೂ ನಿರ್ದೇಶಕ ಎಂ.ಶಂಕರ್, ನಮ್ಮ ರಿಯೊ ಪ್ರೊಡಕ್ಷನ್ ಮೂಲಕ ನಿರ್ಮಾಣವಾಗುತ್ತಿರುವ ಮೊದಲ ಚಿತ್ರವಿದು. ನನ್ನ ಪತ್ನಿ ರಂಜನಿ ಸಹ ನಿರ್ಮಾಪಕಿಯಾಗಿದ್ದಾರೆ. ಮನುಷ್ಯ ತನ್ನ ದಿನನಿತ್ಯದ ಜೀವನದಲ್ಲಿ ಫೇಸ್ ಮಾಡುತ್ತಿರುವ ಹಲವಾರು ಸಮಸ್ಯೆಗಳನ್ನು ಇಟ್ಟುಕೊಂಡು ಈ ಚಿತ್ರದ ಕಥೆ ಬರೆದಿದ್ದೇನೆ. ಇಲ್ಲಿ 'ಮುದುಡಿದ ಎಲೆಗಳು' ಹೇಗೆ ಚದುರಿ ಹೋಗುತ್ತವೆ. ಅವು ಮತ್ತೆ ಹೇಗೆ ಒಂದಾಗುತ್ತವೆ ಎಂಬುದೇ ಚಿತ್ರದ ಕಾನ್ಸೆಪ್ಟ್, ಬೆಂಗಳೂರು ಸುತ್ತಮುತ್ತ ಮೂವತ್ತು ದಿನಗಳವರೆಗೆ ಒಂದೇ ಹಂತದಲ್ಲಿ ಚಿತ್ರೀಕರಣ ನಡೆಸುತ್ತಿದ್ದೇವೆ. ಅಲ್ಲದೆ ಹಾಡುಗಳನ್ನು ಮಲೆನಾಡಿನ ಸುಂದರ ತಾಣಗಳಲ್ಲಿ ಚಿತ್ರೀಕರಿಸುವ ಯೋಜನೆಯಿದೆ ಎಂದರು.

ನಂತರ ಸಹ ನಿರ್ಮಾಪಕಿ ರಂಜನಿ ಮಾತನಾಡುತ್ತಾ, ನನ್ನ ಪತಿ ಶಂಕರ್ ನನ್ನ ಸುತ್ತಮುತ್ತ ನಡೆಯುವ ಘಟನೆಗಳನ್ನೇ ಇಟ್ಟುಕೊಂಡು ಈ ಸಿನಿಮಾ ಮಾಡುತ್ತಿದ್ದಾರೆ. ಜನರಿಗೆ ಒಂದೊಳ್ಳೇ ಮೆಸೇಜ್ ಈ ಚಿತ್ರದಲ್ಲಿದೆ ಎಂದು ಹೇಳಿದರು. ಚಿತ್ರದ ಕುರಿತಂತೆ ಹೆಚ್ಚಿನ ಮಾಹಿತಿಯನ್ನು ಸಹನಿರ್ದೇಶಕ ರಮೇಶ್ ಕೋಟೆ ನೀಡಿದರು.

ಈ ಚಿತ್ರದ ಮೂವರು ನಾಯಕರಾಗಿ ಪಂಕಜ್ ಎಸ್.ನಾರಾಯಣ್, ರಂಜಿತ್‌ಕುಮಾರ್ ಹಾಗೂ ದರ್ಶನ್ ಸೂರ್ಯ ನಟಿಸುತ್ತಿದ್ದಾರೆ. ನಾಯಕಿಯರಾಗಿ ಊರ್ವಶಿ ರಾಯ್, ಸೀಮಾ ವಸಂತ್ ಹಾಗೂ ಸುಶ್ಮಿತಾ ಅಭಿನಯಿಸಲಿದ್ದಾರೆ. ಹಿರಿಯ ನಟಿ ಭವ್ಯ ಅವರು ವಿಶೇಷ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಉಳಿದಂತೆ ಶೋಭರಾಜ್, ಶಂಕರ್ ಅಶ್ವಥ್, ಹರ್ಷಿಕಾ ಪೂಣಚ್ಚ ಸಂತೋಷ್ ರೆಡ್ಡಿ, ಅಮಿತ್‌ರಾಜ್ ತಾರಾಬಳಗದಲ್ಲಿದ್ದಾರೆ. ಶ್ಯಾಮ್ ಸಿಂಧನೂರು ಅವರ ಛಾಯಾಗ್ರಹಣ ಹಾಗೂ ವಿಕಾಸ್ ವಸಿಷ್ಠ ಅವರ ಸಂಗೀತ ಸಂಯೋಜನೆ. ರವೀಶ್ ಆತ್ಮಾರಾಮ್ ಅವರ ಸಂಕಲನ, ಚಂದ್ರು ಬಂಡೆ ಅವರ ಸಾಹಸ ಸಂಯೋಜನೆ ಈ ಚಿತ್ರಕ್ಕಿದೆ.

ಸಿನಿಪದಬಂಧ-501

1			2		3		■	4		5
	■	■		■		■	6	■	■	
	■	7		■	8					
■	■	■		■		■		■	■	
9				■		■		■	10	
■	■	■	■	■	■	■	■	■	■	■
11		■	12	■	13	■	14			
	■	■		■		■		■	■	■
15						■	16		■	17
	■	■		■		■		■	■	
18			■	19						

ಹೆಸರು ______

ವಿಳಾಸ ______

______

ದೂರವಾಣಿ ಸಂಖ್ಯೆ ______



ಗುಣಮಟ್ಟ, ದೀರ್ಘ ಬಾಳಿಕೆಯ ಎಲ್ಲಾ ವಿಧದ ಟಾರ್ಪಾಲಿನ್ಸ್ ಬ್ಯಾಗ್‌ಗಳಿಗೆ ಸಂಪರ್ಕಿಸಿ
ನಂ.87, ಡಿ.ದೇವರಾಜ ಅರಸ್ ರಸ್ತೆ, ಮೈಸೂರು

ವಿಜೇತರು: ಎಸ್.ನಾಗರಾಜು, ಹುಡ್ಕೋ 3ನೇ ಹಂತ, ಬನ್ನಿಮಂಟಪ, ಮೈಸೂರು-570015



ಉಮ್ಮತ್ತೂರು ಇಂದುಶೇಖರ್
ಮೊ.9880820462

ಸಿನಿ ಪದಬಂಧ 500ರ ಉತ್ತರ

ಸಿ	ಕ್ಸ	ರ್	■	ಅ	■	ಪ್ರೇ	■	ಆ	ಘಾ	ತ
ತಾ	■	■	■	ಸು	ನಾ	ಮಿ	■	■	■	ಬ
ರಾ	ಜ	ಕು	ಮಾ	ರ	■	ಸಂ	ಶ	ಯ	ಫ	ಲ
■	■	■	ಡಿ	■	■	■	ರ	■	■	■
■	ಸಂ	ಭ್ರ	ಮ	■	ಕು	■	ತ್	■	ಭಾ	■
■	■	■	ಡಿ	■	ವೆಂ	■	ಲೋ	■	ರ	■
ಕ	ರ್ಣ	■	ದ	■	ಪು	■	ಹಿ	■	ತಿ	■
■	■	■	ವ	■	■	■	ತಾ	■	■	■
ಪ್ರ	ಳ	ಯ	ರು	ದ್ರ	■	ವಿ	ಶ್ವ	ವಿ	ಜೇ	ತ
ಣೇ	■	■	■	ರೇಂ	ರ್	ಜ	■	■	■	ಲ್ವಾ
ತಾ	ವ	ರೆ	■	ನ	■	ಯ್	■	ಮೇ	ಯ	ರ್

ಎಡದಿಂದ ಬಲಕ್ಕೆ

1. ಮನಸೇ ದೇವಾಲಯವಾಗಿರಲು ಗೃಹ ರಾಘವೇಂದ್ರನ ನೆಲೆಯಾಗಿದೆ 7
4. ಲೂಸ್ ಮಾದನ ಆಗಸದಲ್ಲಿ ಕ್ಷಾಮ ತಲೆದೋರಿದೆ 3
7. _ _ ಮೆಚ್ಚಿದ ಹುಡುಗಿ 2
8. ಶಂಕರನಾಗ್ ಅಭಿನಯದಿ ಯಾರಿಗೂ ಗೊತ್ತಾಗದ ಗೌಪ್ಯತೆ 6
9. ಕ್ರಿಕೆಟ್ ಆಟಗಾರನಾಗಿ ಕುಮಾರ್ ಬಂಗಾರಪ್ಪ ಅಭಿನಯಿಸಿದ ಚಿತ್ರಕ್ಕೆ ನಂಜುಂಡೇಗೌಡ ನಿರ್ದೇಶಕ 4
10. ಜಿ.ವಿ. ಇನ್ಸಿಲ್ ಹೊಂದಿರುವ ಗಾಯಕ ಈಗ ನಮ್ಮೊಂದಿಗಿಲ್ಲ 2
11. ಅಂತರವಿರಿಸಿಕೊಂಡು ಗಜದ ಜೊತೆ ಬಂದ ಪ್ರಾಣಿ 2
14. "ಒಲವೇ ಚೆಲುವ ಕವನ.... ", ಗೀತೆಯ ಚಿತ್ರ 4
15. ಹುಟ್ಟಿದ ಮನೆಯಲ್ಲಿ ಶ್ರುತಿ ಎಳೆದ ರಥ 6
16. ದರ್ಶನ್ – ರಮ್ಯ ಅಭಿನಯದ ಚಿತ್ರ 2
18. ಅಂಬಿಗೆ ವೃಕ್ಷದ ನಡುವೆ ದ್ವೇಷವಿದೆ 3
19. ರಾಜ್ ಕುಮಾರ್ ಕಟ್ಟಿದ ಚಿನ್ನದ ಗೂಡು 7

ಮೇಲಿನಿಂದ ಕೆಳಕ್ಕೆ

1. ಸಂಪಿಗೆಯೊಡನೆ ಬಂದ ಮೈಸೂರಿನ ಪುಷ್ಪ 3
2. ಶ್ರೀನಾಥ್–ಮಂಜುಳಾ ಸರಿಸಿದ ಹಿಮದ ಪರದೆ 5
3. ಶ್ರೀನಿವಾಸನೆಂಡತಿಯ ಗೃಹಕ್ಕೆ ಕೆಎಸ್‌ಆರ್ ದಾಸ್ ನಿರ್ದೇಶಕ 5
5. ವಿಷ್ಣುವರ್ಧನ್–ಭಾರತಿಯ ಇರುಳಿನಲ್ಲಿನ ಗೌಪ್ಯತೆ 5
6. ಶಿವಣ್ಣನ ದ್ವಿಪದಿ ಎರಡನೇ ಅಕ್ಷರ ಇಲ್ಲಿ ಮಹಾಪ್ರಾಣಗೊಂಡಿದೆ 4
11. ಅನಂತ್ ನಾಗ್–ವನಿತಾವಾಸುವಿನ ಕೊನೆಯಿಲ್ಲದ ಪ್ರೀತಿ 5
12. ಸಂಜನಾ ಹರಿಸಿದ ದೊಡ್ಡ ಹೊಳೆ 4
13. ಸಾಂಸ್ಕೃತಿಕ ನಗರಿಯ ಕುದುರೆಗಾಡಿ ತೆರೆಯ ಮೇಲೂ ಓಡಾಡಿತ್ತು 5
14. ಬೆಟಗೇರಿ ಕೃಷ್ಣರಾಯರ ಕಾವ್ಯನಾಮದಂತಿರುವ ಕಲ್ಪನಾಳ ಚಿತ್ರ 5
17. ಅಂಬರೀಷ್–ಅಂಬಿಕಾ ಅಭಿನಯದಿ ಮಾಲೆಯ ನಡುವೆ "ಆದರ"ವಿದೆ 3

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಐದೇ ದಿನದಲ್ಲಿ ನಡೆದುಹೋಯ್ತು 'ಪಾಲಿಟಿಕ್ಸ್ ಕಲ್ಯಾಣ'!

ಕಲ್ಯಾಣ ಮಂಟಪವೊಂದರಲ್ಲಿ ನಡೆಯುವ ಕುತೂಹಲಕರ ಘಟನೆಗಳನ್ನಿಟ್ಟುಕೊಂಡು ಕವಿ ರಾಜೇಶ್ ಅವರು ಪಾಲಿಟಿಕ್ಸ್ ಕಲ್ಯಾಣ ಚಿತ್ರವನ್ನು ನಿರ್ದೇಶಿಸಿದ್ದಾರೆ. ಸದ್ಯದಲ್ಲೇ ತೆರೆಗೆ ಬರಲು ಸಿದ್ದವಾಗಿರುವ ಈ ಚಿತ್ರದ ಆಡಿಯೋ ಟ್ರೈಲರ್ ಇತ್ತೀಚೆಗೆ ಬಿಡುಗಡೆಯಾಯಿತು.

ಕಥೆಗಾರ ಜೆ.ಎಂ.ಪ್ರಹ್ಲಾದ್ ಮಾತನಾಡುತ್ತಾ, ಕನ್ನಡದಲ್ಲಿ ರಾಜಕೀಯದ ಬಗ್ಗೆ ಸಾಕಷ್ಟು ಸಿನಿಮಾಗಳು ಬಂದಿವೆ. ಆದರೆ ರಾಜಕೀಯ ವಿಡಂಬನಾತ್ಮಕ ಕಥೆಯ ಚಿತ್ರಗಳು ಕಡಿಮೆ. 'ಪಾಲಿಟಿಕ್ಸ್ ಕಲ್ಯಾಣ' ರಾಜಕೀಯ ವಿಡಂಬನೆ ಕುರಿತಾದ ಚಿತ್ರ. ಸಾಕಷ್ಟು ಧಾರಾವಾಹಿಗಳನ್ನು ನಿರ್ಮಿಸಿರುವ ಗಣೇಶ್ ಕೃಷ್ಣಮೂರ್ತಿ ಅವರು ಈ ಚಿತ್ರವನ್ನು ನಿರ್ಮಿಸಿದ್ದಾರೆ ಎಂದರು.

ನಂತರ ಮಾತನಾಡಿದ ನಿರ್ದೇಶಕ ಕವಿ ರಾಜೇಶ್, ನಮ್ಮ ಚಿತ್ರದಲ್ಲಿ ಹಿರಿಯ ಹಾಗೂ ಕಿರಿಯ ಕಲಾವಿದರು ಸೇರಿದಂತೆ ಅನೇಕ ಕಲಾವಿದರ ದಂಡೇ ಇದೆ. ಕೇವಲ ಐದು ದಿನಗಳಲ್ಲಿ ಒಂದೇ ಕಲ್ಯಾಣ ಮಂಟಪದಲ್ಲಿ ಚಿತ್ರದ ಚಿತ್ರೀಕರಣ ನಡೆಸಿದ್ದೇವೆ. ಬರುವ ಡಿಸೆಂಬರ್‌ನಲ್ಲಿ ಚಿತ್ರವನ್ನು ತೆರೆಗೆ ತರುವ ಪ್ರಯತ್ನ ನಡೆಯುತ್ತಿದೆ ಎಂದು ಹೇಳಿದರು. ನಿರ್ಮಾಪಕ ಗಣೇಶ್ ಕೃಷ್ಣಮೂರ್ತಿ ಮಾತನಾಡುತ್ತ ನಮ್ಮ ಸಂಸ್ಥೆಯಡಿ ನಿರ್ಮಾಣವಾದ ಮೊದಲ ಚಿತ್ರವಿದು. ಚಿತ್ರಮಂದಿರಕ್ಕೆ ಬರುವ ಪ್ರೇಕ್ಷಕರಿಗೆ ಉತ್ತಮ ಮನರಂಜನೆ ಖಂಡಿತ ಸಿಗುತ್ತದೆ ಎಂದು ಹೇಳಿದರು.

ಮೈಸೂರು ಮಿತ್ರ

ಕೆಲಸ ಮಾಡದೆ ಇದ್ರೆ ಮನೆಗೆ ಕಳಿಸ್ತೀವಿ

ಅಧಿಕಾರಿಗಳಿಗೆ ಜಿಪಂ ಉಪಕಾರ್ಯದರ್ಶಿ ಡಾ.ಕೃಷ್ಣರಾಜು ಎಚ್ಚರಿಕೆ



ನಂಜನಗೂಡು, ನ.23– ತಾಲೂಕಿನಲ್ಲಿ ಅಧಿಕಾರಿಗಳು ಕೆಲಸ ಮಾಡದೆ ಇದ್ರೆ ಮುಲಾಜಿಲ್ಲದೆ ಮನೆಗೆ ಕಳಿಸ್ತೀವಿ ಎಂದು ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಹಾಗೂ ತಾಲೂಕು ಆಡಳಿತಾಧಿಕಾರಿ ಡಾ. ಕೃಷ್ಣರಾಜು ಖಡಕ್ ಎಚ್ಚರಿಕೆ ನೀಡಿದ್ದಾರೆ.

ತಾಲೂಕು ಪಂಚಾಯಿತಿ ಕಚೇರಿಯಲ್ಲಿ ಎಲ್ಲಾ ಇಲಾಖೆಗಳ ತಾಲೂಕು ಮಟ್ಟದ ಅಧಿಕಾರಿಗಳು ಮತ್ತು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಜೊತೆ ಸಾಮಾನ್ಯ ಸಭೆ ನಡೆಸಿ ಮಾತನಾಡಿದ ಅವರು, ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ನೀಡಿರುವ ಮಾನವ ದಿನಗಳ ಗುರಿಯನ್ನು ಶೀಘ್ರವೇ ಪೂರ್ಣಗೊಳಿಸಬೇಕು ಎಂದರು.

ಕಡಿಮೆ ಗುರಿ ಸಾಧಿಸಿರುವ ಗ್ರಾಮ ಪಂಚಾಯಿತಿಗಳು ಉಳಿದಿರುವ 4 ತಿಂಗಳಲ್ಲಿ ತಾಲೂಕು ಪಂಚಾಯಿತಿ ನಿಗಧಿಪಡಿಸಿರುವ ಮಾಹೆವಾರು ಗುರಿ ಸಾಧಿಸುವ ಮೂಲಕ ಗುರಿಯನ್ನು ತಲುಪಬೇಕು ಎಂದು ಸೂಚಿಸಿದರು. ಪ್ರಗತಿ ಹಂತದಲ್ಲಿ ಕುಂಠಿತವಾಗಿರುವ ಘನತ್ಯಾಜ್ಯ ವಿಲೇವೇರಿ ಘಟಕ, ಅಂಗನವಾಡಿ ಕಟ್ಟಡ, ಎನ್‌ಆರ್.ಎಲ್.ಎಂ. ಕಟ್ಟಡದ ಕಾಮಗಾರಿಗಳನ್ನು ಶೀಘ್ರವೇ ಪೂರ್ಣಗೊಳಿಸಬೇಕು. ಅಂಗನವಾಡಿ ಕಟ್ಟಡಗಳಿಗೆ ಮೂಲಭೂತ ಸೌಕರ್ಯ ಸೇರಿದಂತೆ ವಿದ್ಯುತ್ ಸಂಪರ್ಕ ಕಲ್ಪಿಸಲು ಕ್ರಮ ಕೈಗೊಳ್ಳಬೇಕು. ಜಲ ಜೀವನ್ ಮಿಷನ್ ಯೋಜನೆ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕು ಎಂದು ಅವರು ತಿಳಿಸಿದರು.

ಕೂಸಿನ ಮನೆ ಸ್ಥಾಪನೆಗೆ ಸಜ್ಜಾಗಿರುವ ತಾಲೂಕಿನ 18 ಗ್ರಾಮ ಪಂಚಾಯಿತಿಗಳಿಗೆ ಆಯುಕ್ತಾಲಯದಿಂದ 1 ಲಕ್ಷ ರೂ. ಅನುದಾನ ಬಿಡುಗಡೆಯಾಗಿದ್ದು, ಶೀಘ್ರವೇ ಕೂಸಿನ ಮನೆ ಸಜ್ಜುಗೊಳಿಸಿ ಪ್ರಾರಂಭಿಸುವಂತೆ ತಿಳಿಸಿದರು. ಸಮಾಜ ಕಲ್ಯಾಣ ಇಲಾಖೆಯಲ್ಲಿ ಬರುವ ವಸತಿ ಶಾಲೆಗಳಲ್ಲಿ ಈ ಬಾರಿ ನಡೆಯುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ವಿದ್ಯಾರ್ಥಿಗಳನ್ನು ತಯಾರು ಮಾಡಬೇಕು. ತಾಲೂಕಿನ ಎಲ್ಲಾ ಸರ್ಕಾರಿ ಮತ್ತು ಖಾಸಗಿ ಶಾಲೆಗಳಲ್ಲಿ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ವಿಶೇಷ ತರಗತಿ ನಡೆಸಿ ಈ ಬಾರಿ ತಾಲೂಕಿನಲ್ಲಿ ಶೇಕಡ ನೂರರಷ್ಟು ಫಲಿತಾಂಶ ಬರುವಂತೆ ಮಾಡಬೇಕು ಎಂದರು.

ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಜೆರಾಲ್ಡ್ ರಾಜೇಶ್, ತಾಲೂಕು ಮಟ್ಟದ ಅಧಿಕಾರಿಗಳು ಹಾಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು.

ಹಣ ದುರ್ಬಳಕೆ: ಪಿಡಿಒ ವಿರುದ್ಧ ಸೂಕ್ತ ಕ್ರಮ

ನಂಜನಗೂಡು ತಾಲೂಕಿನ ದೊಡ್ಡಕವಲಂದೆ ಗ್ರಾಮ ಪಂಚಾಯಿತಿಯ ಪಿಡಿಒ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಜಿಪಂ ಉಪಕಾರ್ಯದರ್ಶಿ ಹಾಗೂ ತಾಲೂಕು ಆಡಳಿತಾಧಿಕಾರಿ ಡಾ.ಕೃಷ್ಣರಾಜು ಇದೇ ವೇಳೆ ತಿಳಿಸಿದರು.

ದೊಡ್ಡಕವಲಂದೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸರ್ಕಾರಿ ಶಾಲೆ ಮತ್ತು ಅಂಗನವಾಡಿ ಕೇಂದ್ರಕ್ಕೆ ನೀಡಲಾಗಿದ್ದ ಸುಮಾರು 1.37 ಲಕ್ಷ ರೂ. ಅನುದಾನವನ್ನು ಪಿಡಿಒ ಪುರುಷೋತ್ತಮ್ ದುರುಪಯೋಗ ಮಾಡಿಕೊಂಡಿದ್ದು, ಕಾಮಗಾರಿ ನಡೆದಿಲ್ಲ. ಆದರೆ ಬಿಲ್ ಆಗಿತ್ತು. ಈ ಬಗ್ಗೆ ಪ್ರತಿಕೆ ಮತ್ತು ಮಾಧ್ಯಮಗಳಲ್ಲಿ ವರದಿ ಪ್ರಕಟವಾಗಿತ್ತು.

ಈ ವಿಚಾರವಾಗಿ ಮಾತನಾಡಿದ ಅವರು, ದೊಡ್ಡ ಕವಲಂದೆ ಗ್ರಾಮ ಪಂಚಾಯಿತಿಯಲ್ಲಿ ಹಣ ದುರ್ಬಳಕೆ ಮಾಡಿಕೊಂಡಿರುವುದು ನನ್ನ ಗಮನಕ್ಕೆ ಬಂದಿದೆ. ಈಗಾಗಲೇ ತನಿಖೆ ನಡೆಸಲಾಗಿದ್ದು, ತಾಪಂ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ಮಾಹಿತಿ ಪಡೆದು, ಶೀಘ್ರದಲ್ಲೇ ಪಿಡಿಒ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಶಾಸಕ ಜಿಟಿಡಿ ಹುಟ್ಟುಹಬ್ಬ ಸರಳ ಆಚರಣೆಗೆ ನಿರ್ಧಾರ



ಹುಣಸೂರು, ನ.23– ಶಾಸಕ ಜಿ.ಟಿ. ದೇವೇಗೌಡರ ಹುಟ್ಟುಹಬ್ಬವನ್ನು ಸರಳವಾಗಿ ಆಚರಿಸಲು ಜೆಡಿಎಸ್ ಮುಖಂಡರು ನಿರ್ಧರಿಸಿದ್ದಾರೆ.

ರಾಜ್ಯದಲ್ಲಿ ಬರದ ಪರಿಸ್ಥಿತಿಯಿದ್ದು, ರೈತರು ಮತ್ತು ಜನರು ಸಂಕಷ್ಟಕ್ಕಿಡಾಗಿರುವುದರಿಂದ ತಮ್ಮ ಹುಟ್ಟುಹಬ್ಬವನ್ನು ಯಾರು ಅದ್ದೂರಿಯಾಗಿ ಆಚರಿಸದೆ ಸರಳವಾಗಿ ಆಚರಿಸಿ ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕರು ಮತ್ತು ಜೆಡಿಎಸ್ ರಾಜ್ಯ ಕೋರ್ ಕಮಿಟಿ ಅಧ್ಯಕ್ಷರಾದ ಜಿ.ಟಿ.ದೇವೆಗೌಡರು ಮಾಡಿರುವ ಮನವಿ ಮೇರೆಗೆ ಇಂದು ಹುಣಸೂರಿನ ಶಾಸಕರ ಕಚೇರಿಯಲ್ಲಿ ಸಭೆ ನಡೆಸಿ ಈ ತೀರ್ಮಾನ ಕೈಗೊಳ್ಳಲಾಯಿತು ಎಂದು ನಗರಸಭಾ ಸದಸ್ಯ ಹೆಚ್.ಪಿ.ಸತೀಶ್‌ಕುಮಾರ್ ತಿಳಿಸಿದ್ದಾರೆ.

ನ.25ರಂದು ಜಿ.ಟಿ.ದೇವೆಗೌಡರ ಹುಟ್ಟು ಹಬ್ಬದ ಅಂಗವಾಗಿ ಬೆಳಗ್ಗೆ 8.30ಕ್ಕೆ ಕನ್ಯಾಕ ಪರಮೇಶ್ವರಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಲಾಗುವುದು. ನಂತರ ಸಾರ್ವಜನಿಕ ಆಸ್ಪತ್ರೆಯಲ್ಲಿನ ಒಳ ರೋಗಿಗಳಿಗೆ ಹಣ್ಣು ಹಂಪಲು ವಿತರಿಸಲಾಗುವುದು. ಈ ಕಾರ್ಯಕ್ರಮಕ್ಕೆ ಪಕ್ಷದ ಚುನಾಯಿತ ಪ್ರತಿನಿಧಿಗಳು, ಕಾರ್ಯಕರ್ತರು, ಮುಖಂಡರು, ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಬಾಗವಹಿಸಬೇಕೆಂದು ಕೋರಿದ್ದಾರೆ.

ಶೀಘ್ರದಲ್ಲೇ ವರುಣ ಸರ್ಕಾರಿ ಬಾಲಕಿಯರ ಪ್ರೌಢಶಾಲೆಯ ಕೊಠಡಿಗಳ ದುರಸ್ತಿ



ತಿ.ನರಸೀಪುರ, ನ.23– ವರುಣ ಶಾಸಕರ ಅನುದಾನದಲ್ಲಿ ಪಟ್ಟಣದ ಸರ್ಕಾರಿ ಬಾಲಕಿಯರ ಪ್ರೌಢ ಶಾಲೆಯ 7 ಕೊಠಡಿಗಳನ್ನು 12 ಲಕ್ಷ ರೂಪಾಯಿ ವೆಚ್ಚದಲ್ಲಿ ಶೀಘ್ರದಲ್ಲೇ ದುರಸ್ತಿಗೊಳಿಸಲಾಗುವುದು ಎಂದು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಜಿ. ಶೋಭಾ ತಿಳಿಸಿದ್ದಾರೆ.

ಶಾಲೆಯ ಮೂಲ ಸೌಲಭ್ಯಗಳ ಕೊರತೆಯ ಬಗ್ಗೆ ಕೈಗೊಂಡಿರುವ ಕ್ರಮಗಳ ಬಗ್ಗೆ ಪತ್ರಿಕಾ ಹೇಳಿಕೆ ಮೂಲಕ ಮಾಹಿತಿ ನೀಡಿರುವ ಅವರು, ನಾರಿ ಟ್ರಸ್ಟ್‌ನ ಮುಖ್ಯಸ್ಥರಾದ ಮುರುಳೀಧರ್ ಅವರ ಪ್ರಾಯೋಜಕತ್ವದಲ್ಲಿ ಸುಸಜ್ಜಿತ ಶೌಚಾಲಯ ಘಟಕನಿರ್ಮಿಸಲಾಗುವುದು. ಡಿಸೆಂಬರ್‌ನಲ್ಲಿ ಕಾಮಗಾರಿ ಪ್ರಾರಂಭವಾಗಲಿದೆ ಎಂದರು.

24X7 ಶುದ್ಧ ಕುಡಿಯುವ ನೀರಿನ ಪೈಪ್‌ಲೈನ್ ಅಳವಡಿಕೆಗೆ ಹಾಗೂ ನೀರು ಪೂರೈಕೆಗೆ ಅಗತ್ಯ ಘಟಕ ನಿರ್ಮಿಸಲು ಪುರಸಭೆಗೆ ಮನವಿ ಸಲ್ಲಿಸಲಾಗಿದೆ. ಅಲ್ಲದೇ ಕೆನರಾ ಬ್ಯಾಂಕ್ ಪ್ರಾಯೋಜಕತ್ವದಲ್ಲಿ ಶುದ್ಧ ನೀರಿನ ಘಟಕ ನಿರ್ಮಾಣವಾಗಲಿದೆ. ಈ ಶಾಲೆಯು ವರುಣಾ ಕ್ಷೇತ್ರ ವ್ಯಾಪ್ತಿಗೆ ಸೇರಲಿದ್ದು, ಮುಖ್ಯಮಂತ್ರಿಗಳು ಈ ಕ್ಷೇತ್ರ ಪ್ರತಿನಿಧಿಸುತ್ತಿರುವುದರಿಂದ ಅವರ ಕಚೇರಿಯಿಂದ ಶಾಲೆಗೆ ಅಗತ್ಯವಿರುವ ಮೂಲ ಸೌಲಭ್ಯಗಳನ್ನು ಒದಗಿಸಲು ಪೂರಕ ಪ್ರಸ್ತಾವನೆ ಪಡೆದಿದ್ದಾರೆ. ನ.3 ರಂದು ಬಗ್ಗೆ ಮತ್ತೊಂದು ಪ್ರಸ್ತಾವನೆ ಕಳುಹಿಸಲಾಗಿದೆ. ಸದ್ಯದಲ್ಲಿಯೇ ಸೌಲಭ್ಯ ಅನುಷ್ಠಾನಗೊಳ್ಳಲಿದೆ ಎಂದಿದ್ದಾರೆ.

ನಮ್ಮ ಹಂತದಲ್ಲಿ ಶಾಲೆಗೆ ಸೌಲಭ್ಯ ಒದಗಿಸುವ ನಿಟ್ಟಿನಲ್ಲಿ ಸೂಕ್ತ ಕ್ರಮವಹಿಸಿದ್ದು, ಎಲ್ಲಾ ಅಗತ್ಯ ಮಾಹಿತಿಗಳನ್ನು ಸಂಬಂಧಿಸಿದವರಿಗೆ ಒದಗಿಸಲಾಗಿದೆ. ಸದ್ಯದಲ್ಲೇ ಸೌಲಭ್ಯಗಳು ಶಾಲೆಗೆ ದೊರಕುವ ವಿಶ್ವಾಸವಿದೆ ಎಂದು ಅವರು ತಿಳಿಸಿದ್ದಾರೆ.

ನ.26, ಮೈಸೂರಲ್ಲಿ ಗಿರಿಜನ ಸಂಸ್ಕೃತಿ ಸಂರಕ್ಷಣಾ ಸಮ್ಮೇಳನ

ಹೆಚ್.ಡಿ.ಕೋಟೆ, ನ.23– ಮತಾಂತರಗೊಂಡ ಬುಡಕಟ್ಟು ಜನರನ್ನು ಎಸ್‌ಟಿ ಪಟ್ಟಿಯಿಂದ ಕೈಬಿಡುವಂತೆ ಒತ್ತಾಯಿಸಿ ಗಿರಿಜನ ಸುರಕ್ಷಾ ವೇದಿಕೆ ವತಿಯಿಂದ ಗಿರಿಜನ ಸಂಸ್ಕೃತಿ ಸಂರಕ್ಷಣಾ ಸಮ್ಮೇಳನ'ವನ್ನು ನ.26ರಂದು ಮೈಸೂರಿನಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಗಿರಿಜನ ಸುರಕ್ಷಾ ವೇದಿಕೆ ಅಧ್ಯಕ್ಷ ಗಣೇಶ್ ತಿಳಿಸಿದ್ದಾರೆ.

ಪಟ್ಟಣದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕ ಸೇರಿದಂತೆ ಭಾರತದಲ್ಲಿ ಸ್ವಾತಂತ್ರ್ಯ ಪೂರ್ವದಿಂದ ಪರಿಶಿಷ್ಟ ಪಂಗಡದ ಜನರಿಗೆ, ಆಸೆ ಆಮಿಷಗಳನ್ನು ಒಡ್ಡಿ ಹೆಚ್ಚಿನ ಸಂಖ್ಯೆಯಲ್ಲಿ ಮತಾಂತರ ಮಾಡುತ್ತಿರುವುದು ಕಂಡು ಬಂದಿದೆ ಎಂದರು.

ಇದರಿಂದ ಮೂಲ ನಿವಾಸಿಗಳಾದ ಗಿರಿಜನರಿಗೆ ಅನ್ಯಾಯವಾಗುತ್ತಿದ್ದು, ತಕ್ಷಣ ಮತಾಂತರಗೊಂಡ ಬುಡಕಟ್ಟು ಜನರನ್ನು ಎಸ್‌ಟಿ ಪಟ್ಟಿಯಿಂದ ಕೈಬಿಡಬೇಕು ಎಂದು ಅವರು ಆಗ್ರಹಿಸಿದರು. ನಮ್ಮ ಆಚಾರ, ಸಂಸ್ಕೃತಿ, ನಂಬಿಕೆ ಎಲ್ಲೋ ಒಂದು ಕಡೆ ನಶಿಸುತ್ತಿದೆ ಹಾಗಾಗಿ, ಮತಾಂತರಗೊಂಡವರಿಗೆ ಪರಿಶಿಷ್ಟ ಪಂಗಡದ ಸೌಲಭ್ಯಗಳನ್ನು ನೀಡುವುದನ್ನು ನಿಲ್ಲಿಸಬೇಕು. ಕೂಡಲೆ ಪರಿಶಿಷ್ಟ ಪಂಗಡದ ಪಟ್ಟಿಯಿಂದ ಇವರುಗಳನ್ನು ತೆಗೆದು ಹಾಕಲು ಅಗತ್ಯ ಸಂವಿಧಾನ ತಿದ್ದುಪಡಿ ಮಾಡಬೇಕು ಎಂದು ಮನವಿ ಮಾಡಿದ್ದಾರೆ.

ಕಾರ್ಯಕ್ರಮಕ್ಕೆ ತಾಲೂಕಿನ ಆದಿವಾಸಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕು ಎಂದು ಮನವಿ ಮಾಡಿದರು. ಪತ್ರಿಕಾಗೋಷ್ಠಿಯಲ್ಲಿ ಗಿರಿಜನ ಸುರಕ್ಷಾ ವೇದಿಕೆ ಸದಸ್ಯೆ ಪುಟ್ಟಮ್ಮ, ಮುಖಂಡರುಗಳಾದ ವಿಠಲ, ಶಿವಣ್ಣ, ಕೌಸಲ್ಯ, ವಾಮನ್ ಹಾಜರಿದ್ದರು.



ನಂಜನಗೂಡು ತಾಲೂಕು ಎಂ.ಕೊಂಗಳ್ಳಿ ಗ್ರಾಮದ ಬಿ.ಜವರೇಗೌಡ ಅವರನ್ನು ಮೈಸೂರು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಸಮಿತಿಯ ಹಿರಿಯ ಕಾರ್ಯದರ್ಶಿಯಾಗಿ ಕೆಪಿಸಿಸಿ ಅಧ್ಯಕ್ಷರು ನೇಮಕ ಮಾಡಿದ್ದು, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ. ಬಿ.ಜೆ. ವಿಜಯ ಕುಮಾರ್ ನೇಮಕಾತಿ ಪತ್ರವನ್ನು ನೀಡಿದರು. ಪ್ರಧಾನ ಕಾರ್ಯದರ್ಶಿ ಶಿವಪ್ರಕಾಶ್, ಹಳ್ಳಿಕೆರೆ ಹುಂಡಿಯ ಶಿವಕುಮಾರ್, ಎಡತಲೆ ಮಂಜು ಅವರನ್ನು ಚಿತ್ರದಲ್ಲಿ ಕಾಣಬಹುದು.

ಸೇವೆಗೆ ಯಾವುದೇ ಶಿಕ್ಷಣದ ಅವಶ್ಯಕತೆ ಇಲ್ಲ



ತಿ.ನರಸೀಪುರ, ನ.23– ಶಾಲಾ ಮಕ್ಕಳು ಉತ್ತಮವಾಗಿ ವ್ಯಾಸಂಗ ಮಾಡಿ ತಾವು ಓದಿದ ಶಾಲೆಗೆ ಕೀರ್ತಿ ಹಾಗೂ ಪೋಷಕರ ಶ್ರಮಕ್ಕೆ ಪ್ರತಿಫಲ ದೊರಕಿಸಿಕೊಡಬೇಕೆಂದು ಸೇವಾ ಭಾರತಿ ಸೇವಾ ಟ್ರಸ್ಟ್ ಅಧ್ಯಕ್ಷ ಡಾ.ಚಂದ್ರಶೇಖರ್ ಹೇಳಿದರು.

ಸೇವಾ ಭಾರತಿ ಸೇವಾ ಟ್ರಸ್ಟ್ ವತಿಯಿಂದ ಪಟ್ಟಣದ ಮಹರ್ಷಿ ವಾಲ್ಮೀಕಿ ಶಿಕ್ಷಣ ಸಂಸ್ಥೆಯ ಪೂರ್ವ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಆಂಗ್ಲ ಮಾಧ್ಯಮ ಶಾಲಾ ವಿದ್ಯಾರ್ಥಿಗಳಿಗೆ ನೋಟ್ ಬುಕ್ ವಿತರಿಸಿ ಅವರು ಮಾತನಾಡಿದರು.

ಹುಟ್ಟು–ಸಾವು ನಮಗೆ ಗೊತ್ತಿಲ್ಲದ ಪ್ರಕ್ರಿಯೆಯಾಗಿದ್ದು, ಈ ನಡುವೆ ನಾವೆಲ್ಲರೂ ಸೃಜನ ಶೀಲತೆಯಿಂದ ಸಾಧನೆ ಮಾಡುವ ಗುಣ ಬೆಳೆಸಿಕೊಳ್ಳಬೇಕು. ಯಾವುದೇ ಸೇವೆ ಮಾಡಲು ಶಿಕ್ಷಣದ ಅವಶ್ಯಕತೆಇಲ್ಲ ಎಂಬುದನ್ನರಿತು ಕೆಲಸ ಮಾಡಿದರೆ ಉತ್ತಮ ಸಾಧನೆ ಮಾಡಲು ಸಾಧ್ಯವಾಗುತ್ತದೆ.ಅನಕ್ಷರಸ್ಥರಾಗಿದ್ದ ಸಾಲುಮರದ ತಿಮ್ಮಕ್ಕ ಯಾವುದೇ ವಿದ್ಯೆ ಇಲ್ಲದೇ ಮಾಡಿದ ಸಾಧನೆಗೆ ದೇಶದ ರಾಷ್ಟ್ರಪತಿಗಳೇ ತಲೆಬಾಗಿ ನಮಸ್ಕರಿಸಿದ್ದಾರೆ. ಹಾಗಾಗಿ ಸಾಧನೆಗೆ ಯಾವುದೇ ಶಿಕ್ಷಣದ ಅವಶ್ಯಕತೆ ಬೇಕಿಲ್ಲ ಎಂದರು.

ಇಂದಿನ ಮಕ್ಕಳು ದೇಶದ ಮುಂದಿನ ಭಾವೀ ಪ್ರಜೆಗಳು. ಅವರಿಗೆ ಶಿಕ್ಷಣದಲ್ಲಿ ಯಾವುದೇ ಕೊರತೆ ಬಾರದಿರಲಿ ಎನ್ನುವುದು ನನ್ನ ಉದ್ದೇಶ. ಈ ಪುಸ್ತಕಗಳು ಅವರ ಕಲಿಕೆಗೆ ಉಪಯುಕ್ತವಾಗುತ್ತದೆ ಎನ್ನುವ ನಂಬಿಕೆ ಇದೆ. ಶಾಲಾ ಮಕ್ಕಳು ಉತ್ತಮ ಅಂಕ ಪಡೆದು ಉನ್ನತ ಸ್ಥಾನಕ್ಕೇರಿ ಉತ್ತಮ ನಾಗರಿಕರಾಗಬೇಕು ಎನ್ನುವ ದೃಷ್ಟಿಯಿಂದ ಅಳಿಲು ಸೇವೆ ಮಾಡಿದ್ದೇನೆ ಎಂದರು.

ಕರ್ನಾಟಕ ರಾಜ್ಯ ವಾಲ್ಮೀಕಿ ನಾಯಕ ಸಂಘಗಳ ಒಕ್ಕೂಟದ ಮೈಸೂರು ಜಿಲಾಧ್ಯಕ್ಷ ತಾಯೂರು ಪ್ರಕಾಶ್ ಮಾತನಾಡಿ ಸೇವಾ ಭಾರತಿ ಸೇವಾ ಟ್ರಸ್ಟ್ ಜಿಲ್ಲೆಯಲ್ಲಿನ 173 ಶಾಲೆಗಳಿಗೆ ಪುಸ್ತಕ ಹಾಗೂ ಪರಿಕರಗಳನ್ನು ವಿತರಿಸುವ ಮೂಲಕ ಸರ್ಕಾರ ಮಾಡದ ಕೆಲಸ ಮಾಡಿ ಬಡ ವಿದ್ಯಾರ್ಥಿಗಳ ವಿದ್ಯಾಬ್ಯಾಸಕ್ಕೆ ನೆರವಾಗುತ್ತಾ ಬರುತ್ತಿದೆ. ಯಾವುದೇ ಜಾತಿ, ಧರ್ಮ, ಇಲ್ಲದಿರುವ ಶಾಲೆಗಳನ್ನು ಗುರುತಿಸಿ ಸಹಾಯ ಹಸ್ತ ನೀಡುತ್ತಿದ್ದು, ಡಾ.ಚಂದ್ರಶೇಖರ್ ಮತ್ತು ಅವರ ಪತ್ನಿ ವೈದ್ಯ ವೃತ್ತಿಯೊಂದಿಗೆ ಸಮಾಜ ಸೇವಾ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದು ಶ್ಲಾಘನೀಯ ಎಂದು ಪ್ರಶಂಸಿಸಿದರು.

ಕನ್ನಡ ರಾಷ್ಟ್ರೀಯ ಶಿಕ್ಷಣ ಒಕ್ಕೂಟದ ರಾಜ್ಯಾಧ್ಯಕ್ಷ ತಗಡೂರು ಗುರು, ರಾಷ್ಟ್ರೀಯ ಶಿಕ್ಷಣ ಒಕ್ಕೂಟದ ಜಿಲ್ಲಾ ನಿರ್ದೇಶಕಿ ನಳಿನಿ, ಶುಭಶ್ರೀ, ಬಿಜೆಪಿ ಯುವ ಮೋರ್ಚಾ ತಾಲೂಕು ಅಧ್ಯಕ್ಷ ಕುರುಬೂರು ಶಿವು, ವಾಲ್ಮೀಕಿ ಶಿಕ್ಷಣ ಸಂಸ್ಥೆಯ ಗೌರವಾಧ್ಯಕ್ಷ ಡಾ.ಮಹದೇವಯ್ಯ, ಕಾರ್ಯದರ್ಶಿ ಆಲಗೂಡು ನಾಗರಾಜು, ಖಜಾಂಚಿ ಪಿ. ಶಶಿಧರ್, ನಿರ್ದೇಶಕ ಆರ್.ರಾಜು, ಶಾಲೆಯ ಮುಖ್ಯ ಶಿಕ್ಷಕಿ ಬಿ.ಎಂ.ಮಂಜುಳಾ, ಎನ್.ಸೌಮ್ಯ, ಶಿಕ್ಷಕಿ ಎಂ.ಪುಷ್ಪಲತಾ, ಸೌಮ್ಯ, ಎಸ್.ಆಶಾ, ಪಿ.ಶಿಲ್ಪ, ಎಲ್. ಚೈತ್ರಾ, ಎಸ್.ಎಂ.ಪವನಶ್ರೀ, ಆರ್.ಅಂಜಲಿ, ಎಸ್.ತೇಜಸ್ವಿನಿ, ಕೆ.ಎಚ್.ಶ್ವೇತಾ, ಭಾಗ್ಯಮ್ಮ ಓಂಗುರು, ಶ್ರೀ ಮಹರ್ಷಿ ವಾಲ್ಮೀಕಿ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಯಡದೊರೆ ಮಹೇಶ್ ನಾಯಕ್ ಮತ್ತು ಶಿಕ್ಷಕರು, ವಿದ್ಯಾರ್ಥಿಗಳು ಈ ವೇಳೆ ಉಪಸ್ಥಿತರಿದ್ದರು.

ವಿದ್ಯುತ್ ತಗುಲಿ ರಸ್ತೆ ಕಾಂಕ್ರೀಟ್ ಕೆಲಸಗಾರ ಸಾವು



ಹೆಚ್.ಡಿ. ಕೋಟೆ: ತಾಲೂಕಿನ ಆನೆಮಾಳದಲ್ಲಿ ವ್ಯಕ್ತಿಯೋರ್ವ ವಿದ್ಯುತ್ ತಗುಲಿ ಮೃತಪಟ್ಟಿರುವ ಘಟನೆ ಸಂಭವಿಸಿದೆ.

ಪಟ್ಟಣದ ಸಿದ್ದಪ್ಪಾಜಿ ರಸ್ತೆಯ ನಿವಾಸಿ ಪ್ರವೀಣ್ (27) ಮೃತ ವ್ಯಕ್ತಿ. ಪ್ರವೀಣ್ ಎಂದಿನಂತೆ ರಸ್ತೆ ಕಾಂಕ್ರೀಟ್ ಕೆಲಸಕ್ಕೆಂದು ಹೆಚ್.ಡಿ. ಕೋಟೆ ತಾಲೂಕಿನ ನಾಗರಹೊಳೆ ಅಭಯಾರಣ್ಯದೊಳಗಿರುವ ಆನೆಮಾಳ ಗ್ರಾಮಕ್ಕೆ ತೆರಳಿದ್ದಾರೆ. ರಸ್ತೆ ಕಾಂಕ್ರೀಟ್ ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿ ಕಾಂಕ್ರಿಟ್ ಸುರಿಯುವ ವೇಳೆ ವಿದ್ಯುತ್ ತಂತಿಗೆ ಕಾಂಕ್ರೀಟ್ ವಾಹನ ತಗುಲಿದೆ ಎನ್ನಲಾಗಿದೆ.

ಇದರಿಂದ ವಾಹನದ ಬಳಿಯಲ್ಲಿಯೇ ಇದ್ದ ಪ್ರವೀಣ್ ವಿದ್ಯುತ್ ತಗುಲಿ ಅಸ್ವಸ್ಥಗೊಂಡರು. ತಕ್ಷಣ ಪ್ರವೀಣ್ ಅವರನ್ನು ಕೇರಳ ರಾಜ್ಯದ ಮಾನಂದವಾಡಿಯಲ್ಲಿನ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು. ಈ ವೇಳೆಗಾಗಲೇ ಪ್ರವೀಣ್ ಮೃತಪಟ್ಟಿದ್ದಾರೆ ಎಂದು ತಿಳಿದು ಬಂದಿದೆ. ಈ ಪ್ರಕರಣ ಅಂತರಸಂತೆ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ.

ಪ್ರಾಮಾಣಿಕರು ರಾಜಕೀಯಕ್ಕೆ ಬಾರದಿದ್ದರೆ ವ್ಯಾಪಾರಸ್ಥರ ಕೈಗೆ ಸಿಕ್ಕಿ ರಾಜ್ಯ ಹಾಳಾಗುತ್ತಿತ್ತು

ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ ಕಳವಳ



ಕೆ.ಆರ್.ನಗರ, ನ.23– ಪ್ರಾಮಾಣಿಕರು ಸಾರ್ವಜನಿಕ ಕ್ಷೇತ್ರದಲ್ಲಿ ಸೇವೆ ಸಲ್ಲಿಸಲು ರಾಜಕೀಯಕ್ಕೆ ಬಾರದೆ ಹೋಗಿದ್ದರೆ ವ್ಯಾಪಾರಸ್ಥರ ಕೈಗೆ ಸಿಕ್ಕಿ ರಾಜ್ಯ ಹಾಳಾಗುತ್ತಿತ್ತು ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ ಕಳವಳ ವ್ಯಕ್ತ ಪಡಿಸಿದ್ದಾರೆ.

ಪಟ್ಟಣದ ಮೈಸೂರು–ಹಾಸನ ರಸ್ತೆಯ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಭವನ ನೂತನ ಕಟ್ಟಡ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು ಡಾ. ಬಿ.ಆರ್.ಅಂಬೇಡ್ಕರ್ ಅವರು ಸಂವಿಧಾನದ ಆಶಯದಂತೆ ಆರ್ಥಿಕ ಸಾಮಾಜಿಕ ಶೈಕ್ಷಣಿಕ ಸಮಾನತೆಗಾಗಿ ಸಮ ಸಮಾಜ ನಿರ್ಮಾಣ ಮಾಡಲು ರಚಿಸಿದ ಸಂವಿಧಾನದ ಅಡಿಯಲ್ಲಿ ಬದುಕಬೇಕು ಎಂಬುದನ್ನು ಹೇಳಲಾಗಿದೆ ಎಂದರು.

ದೇಶದಲ್ಲಿ ಯಾವುದಾದರೂ ಒಂದು ಧರ್ಮ ಇದ್ದರೆ ಅದು ಸಂವಿಧಾನ. ಸಂವಿಧಾನವನ್ನು ರಕ್ಷಣೆ ಮಾಡಿದರೆ ಅದು ನಮ್ಮನ್ನು ರಕ್ಷಣೆ ಮಾಡುತ್ತದೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರ ನೇತೃತ್ವದಲ್ಲಿ ಒಂದು ಕೋಟಿ 32 ಲಕ್ಷ ಕುಟುಂಬಗಳ ಆರ್ಥಿಕ ಸ್ವಾವಲಂಬನೆಗಾಗಿ ಕಾಂಗ್ರೆಸ್ ಪಕ್ಷ ಐದು ಗ್ಯಾರಂಟಿಗಳನ್ನು ಜಾರಿಗೆ ತರುವ ಮೂಲಕ ದೇಶದಲ್ಲಿಯೇ ಮಾದರಿ ರಾಜ್ಯವಾಗಿದೆ ಎಂದು ಸಮರ್ಥಿಸಿಕೊಂಡರು.

6 ಕೋಟಿ ವೆಚ್ಚದಲ್ಲಿ ನಿರ್ಮಾಣ ಮಾಡಲು ಪೂರ್ವ ಸಿದ್ಧತೆಯಲ್ಲಿ ತೊಡಗಿರುವ ಅಂಬೇಡ್ಕರ್ ಅವರ ಭವನಕ್ಕೆ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿ ನಿರ್ಮಿಸುತ್ತಿದ್ದು ಇದರ ನಿರ್ವಹಣೆಗಾಗಿ ಆದಾಯ ಬರುವಂತ ವಾಣಿಜ್ಯ ಮಳಿಗೆಗಳನ್ನು ನಿರ್ಮಿಸಿಕೊಳ್ಳಿ. ಇದಕ್ಕೆ ಅಗತ್ಯವಿರುವ ಎಲ್ಲಾ ಅನುದಾನವನ್ನು ನಮ್ಮ ಅವಧಿಯಲ್ಲಿ ಬಿಡುಗಡೆ ಮಾಡಿ ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಸಚಿವ ಸಂಪುಟದ ಸಹೋದ್ಯೋಗಿಗಳನ್ನು ಕರೆ ತಂದು ಉದ್ಘಾಟನೆ ಮಾಡಿಸುತ್ತೇನೆ ಎಂದು ಭರವಸೆ ನೀಡಿದರು.

ಶಾಸಕ ಡಿ.ರವಿಶಂಕರ್ ಮಾತನಾಡಿ ಸಮಾಜ ಪರಿವರ್ತನೆಯಾಗಬೇಕಾದರೆ ಶಿಕ್ಷಣ ಮುಖ್ಯ ಆದ್ದರಿಂದ ಪ್ರತಿಯೊಬ್ಬರೂ ಶಿಕ್ಷಣಕ್ಕೆ ಮೊದಲು ಆದ್ಯತೆ ನೀಡಿ ವಿದ್ಯಾವಂತರಾದಾಗ ಮಾತ್ರ ಆರ್ಥಿಕ ಸಾಮಾಜಿಕ ಶೈಕ್ಷಣಿಕ ರಾಜಕೀಯವಾಗಿ ಮೇಲೆ ಬರಲು ಸಾಧ್ಯವಾಗಿದೆ ಅದನ್ನೇ ಡಾ. ಬಿ ಆರ್ ಅಂಬೇಡ್ಕರ್ ಅವರು ತಮ್ಮ ಸಂವಿಧಾನದಲ್ಲಿ ಉಲ್ಲೇಖನೆ ಮಾಡಲಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮವನ್ನು ಉದ್ದೇಶಿಸಿ ಕೆಪಿಸಿಸಿ ಕಾರ್ಯಕಾರಣಿ ಸದಸ್ಯ ದೊಡ್ಡ ಸ್ವಾಮಿಗೌಡ, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯರುಗಳಾದ ಸಿದ್ದಪ್ಪ, ರಾಜಯ್ಯ ಮಾತನಾಡಿದರು. ವೇದಿಕೆಯಲ್ಲಿ ಪುರಸಭಾ ಸದಸ್ಯರಾದ ಶಂಕರ್ ಸ್ವಾಮಿ, ತಹಸಿಲ್ದಾರ್ ಪೂರ್ಣಿಮಾ, ಇಓ ಹರೀಶ್, ಪುರಸಭೆ ಮುಖ್ಯಾಧಿಕಾರಿ ಡಾ. ಜಯಣ್ಣ, ಪಿಡಬ್ಲ್ಯೂಡಿ ಎಇಇ ಸುಮಿತ್ರ, ಬಿಇಓ ಕೃಷ್ಣಪ್ಪ, ಮುಖಂಡರುಗಳಾದ ಕಾಂತರಾಜ್, ಗೀತಾ ಮಹೇಶ್, ಶಾಂತಿರಾಜ್, ಸುನೀತಾ, ಎಂಎಸ್ ಮಹದೇವ್, ಎಂ ಜೆ ರಮೇಶ್, ಮಂಜುರಾಜ್, ವೇಣು, ರಾಮಯ್ಯ, ರಾಚಯ್ಯ, ಸ್ವಾಮಿ, ಕಂಠಿ, ಕುಮಾರ್, ಮರಿಯಯ್ಯ ಸೇರಿದಂತೆ ಇನ್ನಿತರರು ಹಾಜರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ



ಚಿತ್ರಮಂದಿರ / ಚಿತ್ರ	
ಪದ್ಮ ಚಿತ್ರಮಂದಿರ	(ದೂ: 2521923)
ಗರಡಿ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಬ್ಯಾಡ್ ಮ್ಯಾನರ್ಸ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಟೈಗರ್–3 (ಹಿಂದಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಶುಗರ್ ಫ್ಯಾಕ್ಟರಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಸಪ್ತ ಸಾಗರದಾಚೆ ಎಲ್ಲೋ–ಸೈಡ್ B(ಕ)	2 ಪ್ರದರ್ಶನಗಳು
ರಾಜಕಮಲ್	
ಆಧಿಕೇಶವ (ತೆ)	4 ಪ್ರದರ್ಶನಗಳು
ಸಂಗಂ	
ಸ್ವಾತಿ ಮುತ್ತಿನ ಮಳೆ ಹನಿಯೇ (ಕ)	4 ಪ್ರದರ್ಶನಗಳು
ಲಿಡೋ	
ಶುಗರ್ ಫ್ಯಾಕ್ಟರಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಗರಡಿ (ಕ)	4 ಪ್ರದರ್ಶನಗಳು
ಪ್ರಭಾ	
ಟಗರು ಫಲ್ಯ(ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	**ಟೈಗರ್ 3(ಹಿಂ):** ಬೆ.10.20ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, **ಟಗರುಪಲ್ಯ (ಕ):** ಮ.1.20ಕ್ಕೆ.
ಸ್ಕ್ರೀನ್ 2	**ದಿ ವೆಕೆಂಟ್ ಹೌಸ್ (ಕ):** ಬೆ.11ಕ್ಕೆ, **ರಾಜಯೋಗ (ಕ):** ಮ.1.15ಕ್ಕೆ, **ನೇತ್ರಂ (ಕ):** ಸಂ.4.30ಕ್ಕೆ, **ಗರಡಿ (ಕ):** ರಾ.7.10ಕ್ಕೆ, **ಸ್ಪಾರ್ಕ್ ಲೈಫ್ (ತೆ):** ರಾ.10ಕ್ಕೆ.
ಸ್ಕ್ರೀನ್ 3	**ಟ್ರೋಲ್ಸ್ ಬ್ಯಾಂಡ್ ಟುಗೆದರ್ (3ಡಿ)(ಇಂ):** ಬೆ.11ಕ್ಕೆ, ಮ.3.35ಕ್ಕೆ, ಸಂ.5.30ಕ್ಕೆ, **ಬೆಂಬಿಡದ ನಾವಿಕ (ಕ):** ಮ.1ಕ್ಕೆ, **ಶೇಶಮ್ ಮೈಕ್ ಇಲ್ ಫಾತಿಮಾ (ಮ):** ರಾ.7.30ಕ್ಕೆ, **ದಿ ಹಂಗರ್ ಗೇಮ್ಸ್ (ಇಂ):** ರಾ.10.10ಕ್ಕೆ.
ಸ್ಕ್ರೀನ್ 4	**ಸಪ್ತ ಸಾಗರದಾಚೆ ಎಲ್ಲೋ 2 (ಕ):** ಬೆ.10.05ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	**ಸಪ್ತ ಸಾಗರದಾಚೆ ಎಲ್ಲೋ 2 (ಕ):** ಬೆ.9.40ಕ್ಕೆ, ಮ.12.50ಕ್ಕೆ, ಸಂ.4ಕ್ಕೆ, ರಾ.7.10ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	**ಸಪ್ತ ಸಾಗರದಾಚೆ ಎಲ್ಲೋ 2 (ಕ):** ಬೆ.9ಕ್ಕೆ, ಮ.12.10ಕ್ಕೆ, ಸಂ.3.20ಕ್ಕೆ, ಸಂ.6.30ಕ್ಕೆ, ರಾ.9.40ಕ್ಕೆ.
ಸ್ಕ್ರೀನ್ 3	**ಟೈಗರ್ 3 (ಹಿಂ):** ಬೆ.9.10ಕ್ಕೆ, ಮ.12.30ಕ್ಕೆ, ಮ.3.50ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 4	**ಮಂಗಳವಾರಂ (ತೆ):** ಬೆ.9.10ಕ್ಕೆ, ಮ.12.25ಕ್ಕೆ, ಸಂ.6.45ಕ್ಕೆ, **ಗರಡಿ (ಕ):** ಮ.3.40ಕ್ಕೆ, **ಟೈಗರ್ 3 (ಹಿಂ):** ರಾ.10ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519


ಸ್ಕ್ರೀನ್ 1	**ದಿ ವೆಕೆಂಟ್ ಹೌಸ್ (ಕ):** ಬೆ.11ಕ್ಕೆ, ಸಂ.4.10ಕ್ಕೆ, **ರಾಜಯೋಗ (ಕ):** ಮ.1.05ಕ್ಕೆ, ಸಂ.6.15ಕ್ಕೆ, **ಟಗರುಪಲ್ಯ (ಕ):** ರಾ.9.15ಕ್ಕೆ.
ಸ್ಕ್ರೀನ್ 2	**ಸಪ್ತ ಸಾಗರದಾಚೆ ಎಲ್ಲೋ 2 (ಕ):** ಬೆ.10ಕ್ಕೆ, ಮ.1.15ಕ್ಕೆ, ರಾ.7.30ಕ್ಕೆ, **ಟೈಗರ್ 3 (ಹಿಂ):** ಸಂ.4.20ಕ್ಕೆ.
ಸ್ಕ್ರೀನ್ 3	**ಟೈಗರ್ 3(ಹಿಂ):** ಬೆ.11ಕ್ಕೆ, **ಸಪ್ತ ಸಾಗರದಾಚೆ ಎಲ್ಲೋ 2 (ಕ):** ಮ.3.45ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	**ಟಗರುಪಲ್ಯ (ಕ):** ಬೆ.10.30ಕ್ಕೆ, ಸಂ.4.10ಕ್ಕೆ, ಸಂ.6.50ಕ್ಕೆ, **ಟೈಗರ್ 3 (ಹಿಂ):** ಮ.1.05ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಘೋಸ್ಟ್ (ಕ): ಬೆ.9ಕ್ಕೆ, ಬೆ.10.20ಕ್ಕೆ, ಮ.1.15ಕ್ಕೆ, ಮ.3.20ಕ್ಕೆ, ರಾ.7.35ಕ್ಕೆ, ರಾ.9.45ಕ್ಕೆ, ರಾ.10.30ಕ್ಕೆ, **12th ಫೇಲ್ (ಹಿಂ):** ಮ.3.50ಕ್ಕೆ, **ಭಗವಂತ್ ಕೇಸರಿ (ತೆ):** ರಾ.7.05ಕ್ಕೆ, **ಗಣಪತ್: ಎ ಹೀರೋ (ಹಿಂ):** ಸಂ.4.10ಕ್ಕೆ, **ಕಿಲ್ಲರ್ಸ್ ಆಫ್ ಫ್ಲವರ್ ಮೂನ್ (ಇಂ):** ಬೆ.10ಕ್ಕೆ, ಮ.2.05ಕ್ಕೆ, ಸಂ.6.10ಕ್ಕೆ, ರಾ.10.15ಕ್ಕೆ, **ಲಿಯೋ (ಕ):** ಮ.12.45ಕ್ಕೆ, **ಲಿಯೋ (ತ):** ಬೆ.11.55ಕ್ಕೆ, ಸಂ.4.10ಕ್ಕೆ, ಸಂ.6.15ಕ್ಕೆ, ರಾ.9.40ಕ್ಕೆ, ರಾ.10.30ಕ್ಕೆ, **ಮುಜಿಬ್ ದಿ ಮೇಕಿಂಗ್ ಆಫ್ ಎ ನೇಷನ್ (ಹಿಂ):** ರಾ.10ಕ್ಕೆ, **ಟಗರುಪಲ್ಯ (ಕ):** ಮ.1ಕ್ಕೆ, ರಾ.7ಕ್ಕೆ, **ತೇಜಸ್ (ಹಿಂ):** ಬೆ.11.05ಕ್ಕೆ, ಮ.1.45ಕ್ಕೆ, ಸಂ.4.25ಕ್ಕೆ, ರಾ.7.05ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಇಂದು ಸತ್ಯವತಿ ಚೌಡೇಶ್ವರಿ ದೇವಸ್ಥಾನ ಉದ್ಘಾಟನೆ



ಪಿರಿಯಾಪಟ್ಟಣ, ನ.23– ತಾಲೂಕಿನ ಬೆಟ್ಟದಪುರ ಸಮೀಪದ ಒಡೆಯರ ಹೊಸಳ್ಳಿ ಗ್ರಾಮದ ಸತ್ಯವತಿ ಚೌಡೇಶ್ವರಿ ದೇವಿಯ ನೂತನ ದೇವಾಲಯ ನಾಳೆ (ಶುಕ್ರವಾರ) ಬೆಳಿಗ್ಗೆ 10 ಗಂಟೆಗೆ ಲೋಕಾರ್ಪಣೆಗೊಳ್ಳಲಿದೆ. ದಿಂಡುಗಾಡು ಮಠದ ಶ್ರೀ ಅಪ್ಪಾಜಿ ಸ್ವಾಮಿಗಳು, ಶ್ರೀ ಮಲ್ಲೇಶ್ವರ ಸ್ವಾಮಿಗಳು, ತೊರೆನೂರು ಮಠ ಶ್ರೀ ಚಿನ್ಮಯ ಮಾತಾಜಿ, ಬಸವಕಲ್ಯಾಣ ಮಠ ಕಲ್ಯಾಣಪುರ ಶ್ರೀ ಜಯದೇವಿ ಮಾತಾಜಿ, ಗುರು ಮಲ್ಲೇಶ್ವರ ದಾಸೋಹ ಮಠ ಲಾಲನಹಳ್ಳಿ ಶ್ರೀಮತಿ ಪುಟ್ಟಗೌರಮ್ಮ, ಮುಡಿ ಕಟ್ಟಿದ ಮುನೇಶ್ವರ ಸ್ವಾಮಿಗಳು ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ. ಪಶು ಸಂಗೋಪನೆ ಸಚಿವ ಕೆ.ವೆಂಕಟೇಶ್ ಹಾಗೂ ನಿತಿನ್ ವೆಂಕಟೇಶ್ ಅವರ ಸಮ್ಮುಖದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಶಿಲ್ಪಿಗಳಾದ ಭಾನುಪ್ರಕಾಶ್ ಅವರು ಭಾಗವಹಿಸುವರು. ಬೆಳಿಗ್ಗೆ 6 ಗಂಟೆಗೆ ಹೋಮ ಹವನ ವಿಶೇಷ ಅಭಿಷೇಕ ಸೇರಿದಂತೆ ವಿವಿಧ ಪೂಜಾ ಕಾರ್ಯಕ್ರಮ ನೆರವೇರಲಿವೆ. ನಂತರ ಸಭಾ ಕಾರ್ಯಕ್ರಮ ನಡೆಯಲಿದೆ.

ರೈತರಿಗೆ ಬಿತ್ತನೆ ಬೀಜ ವಿತರಣೆ



ನಂಜನಗೂಡು, ನ.23– ತಾಲೂಕಿನ ಯಾಲಹಳ್ಳಿ ಗ್ರಾಮದ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರದಲ್ಲಿ ರೈತರಿಗೆ ಉಚಿತವಾಗಿ ಮೇವಿನ ಬಿತ್ತನೆ ಬೀಜವನ್ನು ಹಿರಿಯ ಪರೀಕ್ಷಕ ರಮೇಶ್ ವಿತರಿಸಿದರು. ನಂತರ ಮಾತನಾಡಿದ ಅವರು, ನೀರಾವರಿ ಜಮೀನು ಹೊಂದಿರುವ ರೈತರ ಜಾನುವಾರುಗಳ ಮೇವಿಗೆ ತೊಂದರೆಯಾಗಬಾರದೆಂಬ ಉದ್ದೇಶದಿಂದ ಪಶುಪಾಲನ ಇಲಾಖೆಯಿಂದ ಉಚಿತವಾಗಿ ಮೇವಿನ ಬಿತ್ತನೆ ಬೀಜದ ಪಟ್ಟಣಗಳನ್ನು ವಿತರಣೆ ಮಾಡಲಾಗುತ್ತಿದ್ದು, ರೈತರು ಮೇವನ್ನು ಬೆಳೆದು ಜಾನುವಾರಗಳಿಗೆ ಮೇವಿನ ಕೊರತೆಯಾಗದಂತೆ ನೋಡಿಕೊಳ್ಳಬೇಕೆಂದು ಮನವಿ ಮಾಡಿದರು.

ಮೇವಿನ ಬೀಜವನ್ನು ರೈತರು ಮೂರು ನಾಲ್ಕು ಭಾರಿಗೆ ಬಿತ್ತನೆ ಮಾಡಲು ಉಪಯೋಗಿಸಬಹುದಾಗಿದೆ, ರೈತರು ತಮ್ಮ ಪಾಲಿನ ಮೇವಿನ ಬೀಜವನ್ನು ಪಡೆದುಕೊಳ್ಳಬೇಕೆಂದು ಎಂದು ಅವರು ಹೇಳಿದರು. ಕಾರ್ಯಕ್ರಮದಲ್ಲಿ ಗ್ರಾಪಂ ಸದಸ್ಯ ಸಿ. ಗುರುಪ್ರಸಾದ್, ಗುರುಮಲ್ಲಪ್ಪ, ಪುಟ್ಟರಾಜು ಉಪಸ್ಥಿತರಿದ್ದರು.

100% NEEM WOOD PLYWOOD & DOORS
@ FACTORY DEPOT RATES
NEEM BOND PLATINUM ® 10yrs WARRANTY
ISO 9001:2015 Certified Depot
Call: 97315 91267
99012 91267



ಇಂದಿನಿಂದ
ಪ್ರಭ
ದಿನ 4 ಪ್ರದರ್ಶನ
10.30 1.30
4.30 7.30
ಟಗರು ಪಲ್ಯ
(ಕನ್ನಡ)

DTCP SITES FOR SALE
DTCP Sites
Rs. 699 per sq.ft.,
Near Jayapura,
H.D. Kote Road, Mysore.
9590491194,9606783264

New 6 BHK HOUSE
40X60 East Face
Ready to Move
Bank Loan Available
Fully furnished
200 mtrs from Ring Road
Next to Srirampura
9538583377

MUDA APPROVED SITES FOR SALE
Last 7
30X40 EAST FACING
Available.
Location: Adjacent J P Nagar, At Mysore-Ooty Road & Ring Road Junction.
Price @ Rs 65 lakhs onwards
Call: 96200 99122

HEARTY CONGRATULATIONS



Dr.Vani .K
Associate professor, Dept of Pathology, JSS Medical College, Mysore
Congratulations to Dr. Vani. K for Being awarded PhD by JSS Academy of Higher Education & Research
Best wishes from
Smt K.Uma & Family
Sri B.V. Doreswamy & Family

We provide Architectural
Plan & 3D elevations for Residential and Commercial Buildings.
For Details Contact :
70226 77953 / 79969 69090

The Heritage Club(R)

#816/274, 'C' Block, 3rd stage, Vijayanagar, Mysuru-570030 ✆: 0821-2412377, 95912 28966
Email: heritageclubmys@gmail.com, www.heritageclubmys.in

L.No.08/98/99/21-04-98

TENDER NOTIFICATION

Sealed tenders are invited by the Secretary, The Heritage Club (R), Mysore for civil works, pertaining to the Construction / Extension of Sports Complex (PART-A) and second floor of the club house (PART-B) at The Heritage Club(R), Mysore

Tender forms can be obtained from the office of the Secretary The Heritage Club (R), Mysore on payment of Rs 5,000/- (Cost of tender is nonrefundable) through Demand Draft/Pay order in favour of The Secretary The Heritage Club (R), Mysore.

Tender forms are issued in the office of the Secretary The Heritage Club (R), Mysore from 27-11-2023 during office hours from 10.30 am to 5.30 pm.

Completed tenders shall be submitted to the office of the Secretary The Heritage Club (R), Mysore, on or before 04-12-2023 within 5.30 pm.

The tenders shall be opened at 5.30 pm on 06-12-2023 in the office of the Secretary The Heritage Club (R), Mysore.

Tenders will be issued to the eligible contractors registered and they have to furnish the definite proof from the appropriate authority of having satisfactory completed three similar works during last Eight years.

Issued by : The Secretary The Heritage Club (R), Mysore.
Dated : 23-11-2023

ಯಶಸ್ವಿ ಪ್ರದರ್ಶನ 2ನೇ ವಾರ
ಗಾಯತ್ರಿ ಟಾಕೀಸ್
UFO Digital A/C ನಲ್ಲಿ ಮಾತ್ರ
ಸಪ್ತ ಸಾಗರದಾಚೆ
ಎಲ್ಲೋ ಭಾಗ-2 (ಸೈಡ್-ಬಿ)
ದಿನ 4 ಪ್ರದರ್ಶನ
10.30 1.30 4.30 7.30
ಆನ್‌ಲೈನ್ ಟಿಕೆಟ್ಸ್ ಬುಕ್ ಮೈ ಷೋ ನಲ್ಲಿ ಲಭ್ಯವಿದೆ



ಕಾಣೆಯಾಗಿದ್ದಾರೆ



ಇವರು ದಿನಾಂಕ: 02.05.2023ರಂದು ಬೆಳಗ್ಗೆ ವಾಕಿಂಗ್‌ಗೆ ಹೋದವರು ಉದಯಗಿರಿ ಯಿಂದ ಕಾಣೆಯಾಗಿದ್ದಾರೆ. ಇವರ ಬಗ್ಗೆ ಮಾಹಿತಿ ತಿಳಿದರೆ ದಯವಿಟ್ಟು ಈ ಕೆಳಕಂಡ ನಂಬರಿಗೆ ಸಂಪರ್ಕಿಸಿ:
9629435988
9964850251
9945386581

ಎಸ್.ಬಿ.ಸುಬ್ಬಯ್ಯ
ವಯಸ್ಸು 70

JOB OPPORTUNITY

1. CUSTOMER RELATION EXECUTIVE.
Female Graduates with minimum 2-3 years of experience, telecommunication in English / Hindi/Kannada, Convincing Power and an ability to work in a competative environment.

2. BUSINESS DEVELOPMENT EXECUTIVE
Graduates/Masters Degree with minimum 5 years of experience, having hands on Business Research & Development, Sales & marketing, Networking Capability and Communication Skills.

3. CHEMIST
B.Sc., or M.Sc., in Chemistry with minimum 2 years working experince of quality control / laboratory analysis in the relevant field.

4. STORES EXECUTIVE
Graduates with minimum 2 year of experience with knowledge of stores process, stock handling process and Distribution Process.

Interested candidates may contact and submit their CVs to below mentioned ID: manufacturer.hr246@gmail.com

HOUSE FOR SALE / RENT
at Vijayanagar 4th Stage
Site size : 50 x 80
Built Area - 42 Squares
Two Floors with 10 Bedrooms.
Address: 3133, 4th Stage, 2nd Phase, Vijayanagar, Mysore - 32
SUITABLE FOR : Banks, Old-age Homes, Religious Institutions, Diagnostic Centres, Poly Clinics etc.
For enquiry call : 93554 71129 Time: 10 am to 2 pm & 6 pm to 9 pm

ಬ್ರಾಹ್ಮಣ ಧರ್ಮ ಸಹಾಯ ಸಭಾ (ರಿ.)

ಕಲ್ಯಾಣ ಭವನ, ತ್ಯಾಗರಾಜ ರಸ್ತೆ, ಮೈಸೂರು ದೂರವಾಣಿ: 9449606311

ಪ್ರಕಟಣೆ

ನಮ್ಮ ಸಭೆಯ 2022-23ನೇ ಸಾಲಿನ 96ನೇ ವಾರ್ಷಿಕ ಮಹಾ ಸಭೆಯನ್ನು ದಿನಾಂಕ:26-11-2023ನೇ ಭಾನುವಾರ ನಡೆಸಲಾಗುತ್ತದೆ. ವಾರ್ಷಿಕ ಮಹಾಸಭೆಯು ಮಧ್ಯಾಹ್ನ 3-00 ಗಂಟೆಗೆ ಸರಿಯಾಗಿ, ಮೈಸೂರು ನಗರ ತ್ಯಾಗರಾಜ ರಸ್ತೆ, ಕೆ.ಆರ್ ಮೊಹಲ್ಲಾ, ಮೈಸೂರು ಇಲ್ಲಿರುವ ನಮ್ಮ ಸಭೆಗೆ ಸೇರಿದ ಕಲ್ಯಾಣ ಭವನದಲ್ಲಿ ಸಭೆಯ ಅಧ್ಯಕ್ಷರಾದ

ಶ್ರೀಯುತ ಎನ್. ಶ್ರೀನಿವಾಸ, ಬಿ.ಕಾಂ.ಎಲ್.ಎಲ್.ಬಿ ರವರ

ಘನ ಅಧ್ಯಕ್ಷತೆಯಲ್ಲಿ ನಡೆಸಲು ಕಾರ್ಯಕಾರಿ ಸಮಿತಿಯವರು ತೀರ್ಮಾನಿಸಿರುತ್ತಾರೆ. ಈಗಾಗಲೇ ಎಲ್ಲಾ ಸದಸ್ಯರುಗಳಿಗೆ ಪ್ರತ್ಯೇಕ-ಪ್ರತ್ಯೇಕವಾಗಿ ಅಂಚೆ ಮೂಲಕ ಆಡಳಿತ ವರದಿ ಪುಸ್ತಕವನ್ನು ಪ್ರತಿಯೊಬ್ಬರಿಗೂ ಕಳುಹಿಸಲಾಗಿದೆ. ಒಂದು ವೇಳೆ ಆಹ್ವಾನ ಪತ್ರಿಕೆ ತಲುಪದಿದ್ದಲ್ಲಿ ಇದನ್ನೇ ಆಹ್ವಾನ ಪತ್ರಿಕೆ ಎಂದು ಪರಿಗಣಿಸಿ ತಪ್ಪದೆ ವಾರ್ಷಿಕ ಮಹಾಸಭೆಗೆ ಹಾಜರಾಗಬೇಕೆಂದು ಕೋರಲಾಗಿದೆ.

ಸದಸ್ಯರುಗಳ ಅವಗಾಹನೆಗೆ

ಆಡಳಿತ ಮಂಡಳಿಯ ಸದಸ್ಯರುಗಳು ಅವಿರೋಧವಾಗಿ ಈಗಾಗಲೇ ಚುನಾಯಿತರಾಗಿರುವುದರಿಂದ ದಿನಾಂಕ:26-11-2023 ರಂದು ಕಲ್ಯಾಣ ಭವನದಲ್ಲಿ ಏರ್ಪಡಿಸಿದ್ದ ಆಡಳಿತ ಮಂಡಳಿಯ ಚುನಾವಣೆ ಇರುವುದಿಲ್ಲವೆಂದು ಮಾನ್ಯ ಸದಸ್ಯರುಗಳ ಅವಗಾಹನೆಗೆ ತರಲಾಗಿದೆ.

ಸ್ಥಳ: ಮೈಸೂರು,
ದಿನಾಂಕ: 09-11-2023

ಆಡಳಿತ ಮಂಡಳಿಯ ಅಪ್ಪಣೆಯ ಮೇರೆಗೆ

ಸಹಿ/- (ವಿ.ಸುದರ್ಶನ)
ವ್ಯವಸ್ಥಾಪಕರು

ಸೈಟುಗಳು ಮಾರಾಟಕ್ಕಿದೆ
ಶ್ರೀ ತ್ರಿಪುರ ಸುಂದರಿ ಎನ್‌ಕ್ಲೇವ್
ಗೇಟೆಡ್ ಸಮುದಾಯದ ವಾಸದ ನಿವಾಸ ಜಯಪುರ ಗ್ರಾಮ, ಜಯಪುರ ಹೋಬಳಿ, ಮೈಸೂರು ತಾಲ್ಲೂಕು, ಕ್ರಯಪತ್ರ ನೋಂದಾಯಿಸಿಕೊಳ್ಳುವ ನಿವೇಶನಗಳು ಲಭ್ಯವಿರುತ್ತವೆ. ಸಾರ್ವಜನಿಕ ಸೌಕರ್ಯಗಳು ಕೂಡಾ ಲಭ್ಯವಿರುತ್ತದೆ.
ಯೋಗ್ಯಬೆಲೆಗೆ ಖರೀದಿಸಲು ಸಂಪರ್ಕಿಸಿ :
ಅರುಣ್ ಎನ್.ಮುಗದೂರ ರೇರಾ ಅನುಮೋದಿತ ವ್ಯವಹಾರಸ್ಥರು
(ಹೌಸಿಂಗ್ ಸೊಸೈಟಿಯವರು ಕೂಡ ಸಂಪರ್ಕಿಸಬಹುದು)
9243505777 / 9019576515

ಕೆಪಿಆರ್ ಎಥರ್ ATHER
₹.0 ಮುಂಗಡ ಪಾವತಿ 450X
• ₹97,000 ದಲ್ಲಿ ನವೀಕರಿಸಿ
• ₹5,500 ವರೆಗಿನ ರಿಯಾಯಿತಿ
• 5.99% ಕನಿಷ್ಟ ಬಡ್ಡಿ ದರದಲ್ಲಿ
• ₹12,000 ವರೆಗೆ ಉಳಿಸಿ
24 ಮತ್ತು 25 ನವೆಂಬರ್ 2023
(ಶುಕ್ರವಾರ ಮತ್ತು ಶನಿವಾರ)
ಬೆಳಗ್ಗೆ 10 ರಿಂದ ಸಂಜೆ 7 ರವರೆಗೆ



ಸ್ಥಳ : ಸಿಟಿ ಟೌನ್ ಹಾಲ್ ಮೈದಾನ, ಹುಣಸೂರು.
ಸೇಲ್ಸ್ : 8050701555 ಸರ್ವೀಸ್ : 8050698555 *T&C Apply



